# ಅಧ್ಯಾತ್ಮ ಪ್ರಶ್ನೋತ್ತರ ಸಂಗ್ರಹ

## ಕರ್ಮಫಲ ಮತ್ತು ಪುನರ್ಜನ್ಮ

ಪ್ರಶ್ನೆ : ಮರಣ ಕಾಲದಲ್ಲಿ ಶರೀರವು ಹೋದಮೇಲೆ ಏನು ಉಳಿಯುವದು?

ಉತ್ತರ : ಮರಣ ಕಾಲದಲ್ಲಿ ಶರೀರವು ಹೋದಮೇಲೆ ಸ್ವರೂಪದ ಅಜ್ಞಾನ ಹಾಗೂ ಮನಸ್ಸಿನಲ್ಲಿಯ ವಿಷಯ ವಾಸನೆಗಳು ಹಾಗೇ ಉಳಿಯುತ್ತವೆ. ಆದರೆ ಈ ಜನ್ಮದ ಇಂಗ್ಲೀಷ್, ಸಂಸ್ಕೃತ ಜ್ಞಾನ ಮತ್ತು ಆಸ್ತಿಪಾಸ್ತಿಗಳು ಮುಂದಿನ ಜನ್ಮಕ್ಕೆ ಬರುವದಿಲ್ಲ.

ಪ್ರಶ್ನೆ : ಪಿಶಾಚಿಗಳು ಎಲ್ಲರಿಗೂ ಪೀಡೆಯನ್ನು ಕೊಡುತ್ತವೆಯೇ?

ಉತ್ತರ : ಕೆಲವರು ದುರ್ವಾಸನೆಗಳ ಮೂಲಕ ಪಿಶಾಚಿಯಾಗಿ ಜೀವಿಗಳಿಗೆ ಪೀಡೆ ಕೊಡುವರು. ಈ ಪೀಡೆಯನ್ನು ಅನುಭವಿಸುವದು ತಮ್ಮ ತಮ್ಮ ಕರ್ಮಾನುಸಾರ ನಡೆಯುವದು. ಕರ್ಮಫಲ ತೀರಲು ಕಾಕತಾಲೀಯವತ್ ಬ್ರಹ್ಮನಿಷ್ಠರ ಸಂಗದಿಂದ ಆ ಪಿಶಾಚಿಗಳು ದೂರವಾಗಬಹುದು. ಪಿಶಾಚಿಗಳು ತಮ್ಮ ಹಿಂದಿನ ಜನ್ಮದಲ್ಲಿ ಪಾಪ ಮಾಡಿದವರಿಗೆ ಪೀಡೆ ಕೊಡುವವು, ಪುಣ್ಯಾತ್ಮರಿಗೆ ಪೀಡೆ ಕೊಡುವದಿಲ್ಲ. ಈಗ ಯಾರಿಗಾದರೂ ಪಿಶಾಚಿ ಪೀಡೆ ಆದರೆ ಅದು ತಮ್ಮ ಹಿಂದಿನ ಜನ್ಮದ ಪಾಪಕರ್ಮವೆಂದೇ ತಿಳಿಯಬೇಕು. ಶರೀರ ಬಿಡುವಾಗ ವಿಷ ಕುಡಿದಿದ್ದರೆ ಗಂಟಲು ನೋವಾಗುವದು. ಜಡ ಶರೀರ ಹೋದರೂ ಆ ಗಂಟಲು ನೋವು ಸೂಕ್ಷ್ಮ ಶರೀರದಲ್ಲಿ ಇರುವದು. ಆ ಜಡ ಶರೀರವಿದ್ದಾಗಿನ ಅದರ ನೋವು ಆ ಪಿಶಾಚಿಯು ಇನ್ನೊಂದು ಜಡ ಶರೀರವನ್ನು ಪ್ರವೇಶಿಸಿದಾಗ, ತನ್ನ ಹಿಂದಿನ ಜಡ ಶರೀರದ ದುಃಖವನ್ನು ಬಡಿದುಕೊಂಡ ಶರೀರದಲ್ಲಿ ವ್ಯಕ್ತಗೊಳಿಸುವದು.

ಪ್ರಶ್ನೆ : ಮಾನವನು ಮಾಡಿದ ಮಹಾ ಅಪರಾಧ ಯಾವದು?

ಉತ್ತರ : 'ನಾನು ಆತ್ಮನಲ್ಲ, ಈ ಶರೀರವೇ ನಾನು' ಎಂದು ತಿಳಿದುಕೊಂಡದ್ದು ಮಹಾ ಅಪರಾಧವಾಗಿದೆ.

ಪ್ರಶ್ನೆ : ತಾನು ಮಾಡಿದ ಕರ್ಮದ ಫಲ ತನಗೇ ಬರುವದೇನು?

ಉತ್ತರ : ತಾನು ಮಾಡಿದ ಕರ್ಮದ ಫಲ ತನಗೇ ಬರುವದು, ಎರಡನೆಯವರಿಗೆ ಬರುವದಿಲ್ಲ. ಮಾನವನು ಎಲ್ಲಿಯವರೆಗೆ ಸ್ವರೂಪ ಜ್ಞಾನವನ್ನು ಪಡೆಯುವದಿಲ್ಲವೋ ಅಲ್ಲಿಯವರೆಗೆ ಕರ್ಮಜಾಲದಿಂದ ಪಾರಾಗುವದು ಸಾಧ್ಯವಿಲ್ಲ.

ಪ್ರಶ್ನೆ : ಸೂಕ್ಷ್ಮ ಶರೀರವೆಂದರೇನು?

ಉತ್ತರ : ಸೂಕ್ಷ್ಮ ಶರೀರವೆಂದರೆ ವಾಸನಾಮಯ ಶರೀರವು.

ಪ್ರಶ್ನೆ : ಪ್ರಾರಬ್ಧ ಕರ್ಮ ಎಂದರೇನು?

ಉತ್ತರ : ಪ್ರಯತ್ನ ಮಾಡಿದ ಮೇಲೆ ಏನು ಆಗುವದೋ ಅದು ಪ್ರಾರಬ್ಧ ಕರ್ಮವು, ಪ್ರಯತ್ನ ಮಾಡದೆ ಏನು ಆಗುವದೋ ಅದು ಪ್ರಾರಬ್ಧವಲ್ಲ.

ಪ್ರಶ್ನೆ : ವ್ಯಕ್ತಿಗಳು ಸತ್ತ ಮೇಲೆ ಅವರ ಸೂಕ್ಷ್ಮ ಶರೀರಗಳು ಯಾವ ರೂಪದಲ್ಲಿರುವವು?

ಉತ್ತರ : ಶರೀರವನ್ನು ಬಿಟ್ಟಮೇಲೆ ಸೂಕ್ಷ್ಮ ಶರೀರಗಳು ಕರ್ಮಕ್ಕನುಸಾರವಾಗಿ ಪಿಶಾಚಿ, ಬ್ರಹ್ಮಪಿಶಾಚಿ, ರಾಕ್ಷಸ, ಬ್ರಹ್ಮರಾಕ್ಷಸ, ದೇವತೆಗಳ ರೂಪದಲ್ಲಿರಬಹುದು. ಇಲ್ಲದಿದ್ದರೆ ದೇಹವನ್ನು ಬಿಟ್ಟ ಕೂಡಲೇ ಮತ್ತೊಂದು ಸ್ಥೂಲ ಶರೀರವನ್ನು ಧರಿಸಬಹುದು.

ಪ್ರಶ್ನೆ : ಪಿಶಾಚಿಗಳಿಗೆ, ದೇವತರಿಗೆ ಯಾವ ಜ್ಞಾನವಿರುವದು?

ಉತ್ತರ : ಅವುಗಳಿಗೆ ಇನ್ನೊಬ್ಬರ ಮನಸ್ಸಿನಲ್ಲಿರುವದು ಗುರುತಾಗುವದು. ಆದ್ದರಿಂದ ಅವುಗಳಿಗೆ 12 ಕಣ್ಣುಗಳಿರುವವು ಎನ್ನುವರು. ಅವುಗಳಿಗೆ ಹಿಂದಿನ ಜನ್ಮದ ನೆನಪು ಇರುವದು. ಜನ್ಮ ತಾಳಿದ ಮೇಲೆ ಅದು ಮರೆತು ಹೋಗುವದು.

ಪ್ರಶ್ನೆ : ಸೂಕ್ಷ್ಮ ಶರೀರವು ಜಡ ಶರೀರವನ್ನು ಬಿಟ್ಟು ಮತ್ತೆ ಅದೇ ಜಡ ಶರೀರದಲ್ಲಿ ಪ್ರವೇಶಿಸುವದೇ?

ಉತ್ತರ : ಅಪವಾದದ ರೀತಿಯಲ್ಲಿ ಸೂಕ್ಷ್ಮ ಶರೀರವು ಜಡ ಶರೀರವನ್ನು ಬಿಟ್ಟು ಮರಳಿ ಅದೇ ಜಡ ಶರೀರದಲ್ಲಿ ಪ್ರವೇಶಿಸುವದು. ಮೊದಲನೆಯ ಸಲ ಸ್ಥೂಲ ಶರೀರವನ್ನು ಬಿಟ್ಟಾಗ ಯಮದೂತರು ಆ ಸೂಕ್ಷ್ಮ 'ಶರೀರವನ್ನು ಮುಳ್ಳು ಕಂಟಿಗಳಲ್ಲಿ ಒಗೆದು, ಆಹಾರ ಕೊಡದೆ, ಮಲಮೂತ್ರ ಕೊಟ್ಟರು' ಎಂದು ಮರಳಿ ಆ ಸ್ಥೂಲ ಶರೀರವನ್ನು ಪ್ರವೇಶಿಸಿದಾಗ ಹೇಳುವದು.

ಪ್ರಶ್ನೆ : ಬಾಯಿಂದ ವೇದಾಂತ, ಕೈಯಿಂದ ಪಿಶಾಚಿ ಕೆಲಸ ಮಾಡಿದರೆ ಯಾವ ಜನ್ಮವು ಬರುವದು?

ಉತ್ತರ : ಬಾಯಿಂದ ವೇದಾಂತ, ಕೈಯಿಂದ ಪಿಶಾಚಿ ಕೆಲಸ ಮಾಡಿದರೆ ಬ್ರಹ್ಮಪಿಶಾಚಿ ಜನ್ಮವು ಬರುವದು.

ಪ್ರಶ್ನೆ : ಮಾಂತ್ರಿಕರು ಪಿಶಾಚಿಗಳನ್ನು ಬಾಟಲಿಯಲ್ಲಿ ಹಾಕಿ ಹುಗಿಯುವರು. ಆ ಸೂಕ್ಷ್ಮ ಶರೀರಗಳು ಮತ್ತೆ ಜನ್ಮತಾಳುವವೇ?

ಉತ್ತರ : ಕರ್ಮ ತೀರಿದ ಮೇಲೆ ಬಾಟಲಿಯಲ್ಲಿ ಹಾಕಿದ ಪಿಶಾಚಿಗಳು ಮತ್ತೆ ಶರೀರವನ್ನು ಧಾರಣ ಮಾಡುವವು.



ಪ್ರಶ್ನೆ : ಗರ್ಭದ ಎಷ್ಟನೇ ತಿಂಗಳಲ್ಲಿ ಜೀವ ಚೈತನ್ಯವು ಸ್ಥೂಲ ಶರೀರವನ್ನು ಪ್ರವೇಶಿಸುವದು?

ಉತ್ತರ : ಗರ್ಭದ ಏಳನೆಯ ತಿಂಗಳಲ್ಲಿ ಜೀವಚೈತನ್ಯವು ಸ್ಥೂಲ ಶರೀರವನ್ನು ಪ್ರವೇಶಿಸುವದು. ಗರ್ಭದ ಒಂಭತ್ತನೆಯ ತಿಂಗಳಲ್ಲಿ ತ್ರಿಕಾಲ ಜ್ಞಾನ ಇರುವದು. ಜನನದ ಕಾಲಕ್ಕೆ ಅದೆಲ್ಲವೂ ಮರೆತು ಹೋಗುವದು.

ಪ್ರಶ್ನೆ : ಮರಣಾನಂತರ ಯಾರು ಪಿಶಾಚಿಗಳಾಗುವರು?

ಉತ್ತರ : ಮರಣಾನಂತರ ಕೆಲವರು ಅತಿ ಆಸೆ, ಸೇಡಿನ ಪ್ರವೃತ್ತಿ ಮತ್ತು ಪಾಪಕರ್ಮಕ್ಕೆ ಅನುಗುಣವಾಗಿ ಪಿಶಾಚಿ ಜನ್ಮವನ್ನು ಪಡೆಯುವರು. ಕೆಲವು ಪಿಶಾಚಿಗಳು ಸ್ಥೂಲ ಶರೀರದ ರೂಪವನ್ನು ಧಾರಣ ಮಾಡಿ ಜನರನ್ನು ಹೆದರಿಸುವವು.

ಪ್ರಶ್ನೆ : ಕೆಲವು ಮಕ್ಕಳು ಸಮಾಧಾನ ಮತ್ತು ಕೆಲವು ಮಕ್ಕಳು ಕಿಡಿಗೇಡಿ ಏಕೆ ಇರುವರು?

ಉತ್ತರ : ಅವರ ಹಿಂದಿನ ಸಂಸ್ಕಾರದಂತೆ ಕೆಲವು ಮಕ್ಕಳು ಸಮಾಧಾನ ಮತ್ತು ಕೆಲವು ಮಕ್ಕಳು ಕಿಡಿಗೇಡಿ ಇರುವರು.

ಪ್ರಶ್ನೆ : ಮಕ್ಕಳು ತಂದೆ ತಾಯಿಗಳಂತೆ ಇರುವರೇ?

ಉತ್ತರ : ಮಕ್ಕಳ ರೂಪವು ತಂದೆ ತಾಯಿಗಳಂತೆ ಇರಬಹುದು. ಆದರೆ ಅವರ ವಾಸನೆಗಳು ಅವರ ಹಿಂದಿನ ಜನ್ಮದ ಸಂಸ್ಕಾರದಂತೆ ಭಿನ್ನ ಭಿನ್ನವಾಗಿರುವವು.

ಪ್ರಶ್ನೆ : ಎಲ್ಲ ಕರ್ಮಗಳು ಯಾವಾಗ ಸಮಾಪ್ತಿಯಾಗುವವು?

ಉತ್ತರ : ಸ್ವರೂಪ ಜ್ಞಾನವಾದಾಗ ಎಲ್ಲ ಕರ್ಮಗಳು ಸಮಾಪ್ತಿಯಾಗುವವು, ಅಲ್ಲಿಯವರೆಗೆ ಕರ್ಮಫಲವನ್ನು ಭೋಗಿಸಲೇಬೇಕು. ಜಗತ್ತು ಮಿಥ್ಯೆ ಎಂಬ ಅನುಭವವಿದ್ದವನು ಕರ್ಮಫಲವನ್ನು ಭೋಗಿಸಬೇಕಾಗಿಲ್ಲ.

ಪ್ರಶ್ನೆ : ಮರಣಾನಂತರ ಜೀವನು ಎಂಥ ಜನ್ಮವನ್ನು ಪಡೆಯುವನು?

ಉತ್ತರ : ಸ್ತ್ರೀ ಪುರುಷರ ಮೋಹವಿದ್ದವರು, ಮೋಹವಿದ್ದವರ ಶರೀರದೊಳಗಿನ ಹೇನು ಕೂರಿಗಳಾಗಿ ಹುಟ್ಟುವರು. ಭೂಮಿಯ ಆಸೆ ಉಳ್ಳವರು, ನರಿ ತೋಳಗಳಾಗಿ ಹುಟ್ಟುವರು. ಧನದ ಆಸೆ ಇರುವವರು, ಟ್ರೆಝರಿಯಲ್ಲಿಯ ಜೇಡರ ಹುಳುವಾಗಿ ಹುಟ್ಟುವರು.

ಪ್ರಶ್ನೆ : ಪಿಶಾಚಿ ಜನ್ಮದಲ್ಲಿ ಹಿಂದಿನ ಜನ್ಮದ ನೆನಪು ಇರುವದೇ?

ಉತ್ತರ : ಪಿಶಾಚಿ ಜನ್ಮದಲ್ಲಿ ಹಿಂದಿನ ಜನ್ಮದ ನೆನಪು ಇರುವದು. ಜನ್ಮ ತಾಳಿದರೆ ಅದು ಮರೆತು ಹೋಗುವದು.

ಪ್ರಶ್ನೆ : ಪಾಪದಿಂದ ಯಾವ ಜನ್ಮಗಳು ಬರುವವು?

ಉತ್ತರ : ಪಾಪದಿಂದ ಗಿಡ–ಮರ, ಕ್ರಿಮಿ–ಕೀಟ, ನರಕದ ಹುಳುಗಳ ಜನ್ಮ ಬರುವದು. ಅವು ನರಕವನ್ನು ತಿನ್ನುತ್ತಿದ್ದರೂ ಅದು ನರಕವೆಂಬುದು ಅವುಗಳಿಗೆ ತಿಳಿಯುವದಿಲ್ಲ.

ಪ್ರಶ್ನೆ : ಕರ್ಮದ ಫಲ ಯಾವಾಗ ಬರುವದು?

ಉತ್ತರ : ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಫಲ ಈಗ, ಈ ಜನ್ಮದಲ್ಲಿ ಮಾಡಿದ ಕರ್ಮದ ಫಲ ಮುಂದಿನ ಜನ್ಮದಲ್ಲಿ ಬರುವದು. ಈಗಲೇ ಕರ್ಮದ ಫಲವನ್ನು ಪಡೆಯಬೇಕೆನ್ನುತ್ತಾನೆ, ಅದು ಹೇಗೆ ಸಾಧ್ಯ? ಅತಿ ಪಾಪ ಅಥವಾ ಅತಿ ಪುಣ್ಯದ ಕೆಲಸ ಮಾಡಿದರೆ ಅದರ ಪ್ರತಿಫಲವು ಈಗಲೇ ಪ್ರಾರಂಭವಾಗುತ್ತದೆ.

ಪ್ರಶ್ನೆ : ಪತಿ ಪತ್ನಿಯರು ಎಂಥವರು ಕೂಡುವರು?

ಉತ್ತರ : ಪಾಪ ಮತ್ತು ಪುಣ್ಯ ಕರ್ಮಕ್ಕನುಸಾರವಾಗಿ ಕೆಟ್ಟ ಮತ್ತು ಒಳ್ಳೆಯ ಪತಿ ಪತ್ನಿಯರು ಕೂಡುವರು.

ಪ್ರಶ್ನೆ : ಪಿಶಾಚಿಗಳು ಮಾತನಾಡುವದು ಕೇಳುವದೇ?

ಉತ್ತರ : ಅವು ಸ್ಥೂಲ ಶರೀರವನ್ನು ಧಾರಣ ಮಾಡಿ ಮಾತನಾಡುವವು, ಆದರೆ ರೂಪವು ಕಾಣಿಸುವದಿಲ್ಲ.

ಪ್ರಶ್ನೆ : ಶಾಸನವು ಯಾರಿಗೆ ಇರುವದು?

ಉತ್ತರ : ಸೂಕ್ಷ್ಮ ಶರೀರಕ್ಕೂ ಶಾಸನವಿದೆ, ನಂತರ ಮತ್ತೊಂದು ಜನ್ಮ ಪಡೆದ ದೇಹಕ್ಕೂ ಶಾಸನವಿದೆ.

ಪ್ರಶ್ನೆ : ಅತಿ ಪಾಪದಿಂದ ಯಾವ ಜನ್ಮ ಬರುವದು?

ಉತ್ತರ : ಅತಿ ಪಾಪದಿಂದ ಕನಕಪ್ಪಡಿ, ನಾಯಿಯ ಜನ್ಮ ಬರುವದು. (ಮೋಸತನ ಮಾಡಿದವರಿಗೆ)

ಪ್ರಶ್ನೆ : ಪುಕ್ಕಟೆಯಾಗಿ ಊಟ ಮಾಡಿದ್ದರ ಫಲವೇನು?

ಉತ್ತರ : ಮತ್ತೊಬ್ಬರಿಂದ ಪುಕ್ಕಟೆಯಾಗಿ ಊಟ ಮಾಡಿದರೆ ಅವರ ಋಣದಲ್ಲಿ ಹೋಗಬೇಕಾಗುವದು.

ಪ್ರಶ್ನೆ : ಕ್ರೂರ ಕರ್ಮ ಮಾಡಿದರೆ ಯಾವ ಜನ್ಮ ಬರುವದು?

ಉತ್ತರ : ಕ್ರೂರ ಕರ್ಮ ಮಾಡಿದರೆ ಹುಲಿ, ಸಿಂಹಗಳ ಜನ್ಮವು ಬರುವದು.

ಪ್ರಶ್ನೆ : ಕೈ, ಬಾಯಿ ಬಿಟ್ಟರೆ ಯಾವ ಜನ್ಮವು ಬರುವದು?

ಉತ್ತರ : ಕೈ, ಬಾಯಿ ಬಿಟ್ಟರೆ ಮೂಕ ಪ್ರಾಣಿಗಳಾಗಿ ಹುಟ್ಟಬೇಕಾಗುತ್ತದೆ.



ಪ್ರಶ್ನೆ : ಯಾರು ದೇಹ ಬಿಟ್ಟು ಪಿಶಾಚಿಯಾಗಿ ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಬಡಿದುಕೊಳ್ಳುತ್ತಾರೆ?

ಉತ್ತರ : ಮಾನವರೇ ದೇಹಬಿಟ್ಟು ಪಿಶಾಚಿಯಾಗಿ ಮಾನವರಿಗೆ ಮತ್ತು ಪಶುಗಳಿಗೆ ಬಡಿದುಕೊಳ್ಳುತ್ತಾರೆ. ಆದರೆ ಪಶುಗಳು ದೇಹಬಿಟ್ಟು ಪಿಶಾಚಿಯಾಗಿ ಪಶುಗಳಿಗೆ ಮತ್ತು ಮಾನವರಿಗೆ ಬಡಿದುಕೊಳ್ಳುವದಿಲ್ಲ.

ಪ್ರಶ್ನೆ : ಬ್ರಹ್ಮನಿಷ್ಠರನ್ನು ದ್ವೇಷಿಸುವವನಿಗೆ ಯಾವ ಫಲವು ಬರುವದು?

ಉತ್ತರ : ಬ್ರಹ್ಮನಿಷ್ಠರನ್ನು ದ್ವೇಷಿಸುವವನು ಅತಿ ಶೋಷಣೆಯಿಂದ ದೇಹವನ್ನು ಬಿಡುವನು.

ಪ್ರಶ್ನೆ : ಶರೀರವನ್ನು ಬಿಟ್ಟಾಗ ಸೂಕ್ಷ್ಮ ಶರೀರವನ್ನು ಯಾರು ಒಯ್ಯುವರು?

ಉತ್ತರ : ಶರೀರವನ್ನು ಬಿಟ್ಟಾಗ ಪ್ರಾಣವು ಸೂಕ್ಷ್ಮ ಶರೀರವನ್ನು ಒಯ್ಯುವದು.

ಪ್ರಶ್ನೆ : ಯಾವ ಪಿಶಾಚಿಗಳಿಗೆ ಹೆಚ್ಚು ಆಯುಷ್ಯವಿರುವದು?

ಉತ್ತರ : ಪಾಪವು ಹೆಚ್ಚಾದಂತೆ ಪಿಶಾಚಿಗಳ ಆಯುಷ್ಯವು ಹೆಚ್ಚಾಗುವದು.

ಪ್ರಶ್ನೆ : ಜ್ಞಾನದ ಫಲ ಯಾವಾಗ ಬರುವದು?

ಉತ್ತರ : ಜ್ಞಾನದ ಫಲ ತತ್‌ಕ್ಷಣವೇ ಬರುವದು.

ಪ್ರಶ್ನೆ : ಜಡ ಸಮಾಧಿಯಲ್ಲಿ ಇದ್ದಾಗ ಉತ್ಥಾನವಾದರೆ ಏನಾಗುವದು?

ಉತ್ತರ : ಜಡ ಸಮಾಧಿಯಲ್ಲಿ ಇದ್ದಾಗ ದೇಹವು ಮಣ್ಣಿನಿಂದ ಮುಚ್ಚಿ ಹೋದಾಗ ಅಲ್ಲಿಯೇ ಉತ್ಥಾನವಾದರೆ ಪ್ರಾಣವಾಯು ಹೋಗುವದು. ಜಡ ಸಮಾಧಿಯಲ್ಲಿ ಇದ್ದಾಗ ದೇಹವು ಮುಚ್ಚಿ ಹೋಗಿದ್ದರೆ, ಮುಚ್ಚಿದ ವಸ್ತುವನ್ನು ತೆಗೆದಾಗ ಉತ್ಥಾನವಾದರೆ ಜಡ ಸಮಾಧಿಯಲ್ಲಿರುವವರು ವ್ಯಾವಹಾರಿಕ ಎಚ್ಚರಿಕೆಗೆ ಬರುವರು.

ಪ್ರಶ್ನೆ : ಯಾವ ಆಸೆಗಳು ಪುನರ್ಜನ್ಮದ ವಾಸನೆಗಳನ್ನು ಉಂಟು ಮಾಡುವದಿಲ್ಲ?

ಉತ್ತರ : ಜೀವಿಸಲು ಅವಶ್ಯವಾಗಿರುವ ಆಸೆಗಳು ಪುನರ್ಜನ್ಮವನ್ನು ಉಂಟು ಮಾಡುವದಿಲ್ಲ. (ಭೋಜನ, ನೀರಡಿಕೆ, ನಿದ್ರೆ, ಮಲಮೂತ್ರ ವಿಸರ್ಜನೆ ಮುಂತಾದವುಗಳು)

ಪ್ರಶ್ನೆ : ಪ್ರಾರಬ್ಧವನ್ನು ತಿದ್ದಿಕೊಳ್ಳಲು ಬರುವದೇ?

ಉತ್ತರ : ಪ್ರಾರಬ್ಧವನ್ನು ತಿದ್ದಿಕೊಳ್ಳಲಿಕ್ಕೆ ಬರುವದಿಲ್ಲ, ಆದರೆ ಮನಸ್ಸನ್ನು ತಿದ್ದಿಕೊಳ್ಳಲು ಬರುವದು.

ಪ್ರಶ್ನೆ : ಪಿಶಾಚಿಗಳಿಗೆ ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು ಇರುತ್ತವೆಯೇ?

ಉತ್ತರ : ಪಿಶಾಚಿಗಳಿಗೆ ಸೂಕ್ಷ್ಮ ಜ್ಞಾನೇಂದ್ರಿಯ ಮತ್ತು ಸೂಕ್ಷ್ಮ ಕರ್ಮೇಂದ್ರಿಯಗಳಿರುವವು, ಅವು ಅವುಗಳಿಂದ ಕ್ರಿಯಾಶೀಲವಾಗಿರುವವು.

ಪ್ರಶ್ನೆ : ಪಿಶಾಚಿಯು ಬಡಿದುಕೊಂಡಾಗ ಬಡಿದುಕೊಂಡ ಶರೀರದಲ್ಲಿಯ ಸೂಕ್ಷ್ಮ ಶರೀರವು ಏನು ಮಾಡುತ್ತಿರುವದು?

ಉತ್ತರ : ಬಡಿದುಕೊಂಡ ಶರೀರದಲ್ಲಿಯ ಸೂಕ್ಷ್ಮ ಶರೀರವನ್ನು ಪಿಶಾಚಿಯು ಹತ್ತಿಕ್ಕಿ ತಾನು ವ್ಯಕ್ತವಾಗುವದು.

ಪ್ರಶ್ನೆ : ಕರ್ಮದ ಫಲವನ್ನು ಯಾರು ಉಣ್ಣುವರು?

ಉತ್ತರ : 'ನಾನು ಕರ್ಮವನ್ನು ಮಾಡುವವನು' ಎಂಬ ಭಾವದಿಂದ ಕರ್ಮ ಮಾಡಿದವನು ಕರ್ಮದ ಇಷ್ಟ, ಅನಿಷ್ಟ ಮತ್ತು ಮಿಶ್ರಫಲಗಳನ್ನು ಉಣ್ಣಲೇಬೇಕಾಗುತ್ತದೆ. ಅಹಂಕಾರಕ್ಕೇ ದಣಿವು, ಅದಕ್ಕೇ ವಿಶ್ರಾಂತಿಯು.

ಪ್ರಶ್ನೆ : ಪುನರ್ಜನ್ಮವು ಏಕೆ ಬರುವದು?

ಉತ್ತರ : ವಿಷಯ ವಾಸನೆ ಮತ್ತು ದೇಹಭಾವನೆಯ ಮೂಲಕ ಪುನರ್ಜನ್ಮವು ಬರುವದು. ವಿವೇಕದಿಂದ ವಿಷಯ ವಾಸನೆಗಳನ್ನು ಕಳೆದುಕೊಂಡು ದೇಹಭಾವವನ್ನು ಮೀರಿ ಆತ್ಮನಲ್ಲಿ ನೆಲೆ ನಿಂತಾಗ ಪುನರ್ಜನ್ಮವಿಲ್ಲ.

ಪ್ರಶ್ನೆ : ಶರೀರವನ್ನು ಬಿಟ್ಟಮೇಲೆ ಯಾವ ಜನ್ಮ ಬರುವದು?

ಉತ್ತರ : ಮಾನವ ಜನ್ಮದಲ್ಲಿ ಮಾಡಿದ ಕರ್ಮ ಮತ್ತು ವಿಷಯ ವಾಸನೆಗಳಿಗೆ ಅನುಗುಣವಾಗಿ ಪುನರ್ಜನ್ಮವು ಬರುವದು. ಮಾನವ ಜನ್ಮಕ್ಕೆ ಅನುಗುಣವಾದ ಸಂಸ್ಕಾರ ಮತ್ತು ಕರ್ಮವಿದ್ದರೆ, ಮಾನವ ಜನ್ಮ ಬರುವದು. ಉಳಿದ ಜೀವಿಗಳ ಜನ್ಮಕ್ಕೆ ಅನುಗುಣವಾದ ಸಂಸ್ಕಾರ ಮತ್ತು ಕರ್ಮವಿದ್ದರೆ, ಆ ಜೀವಿಗಳ ಜನ್ಮವೇ ಬರುತ್ತದೆ.

ಪ್ರಶ್ನೆ : ಯಾವ ಜನ್ಮಗಳು ಕರ್ಮಭೂಮಿ ಮತ್ತು ಭೋಗಭೂಮಿಯವು ಇರುವವು?

ಉತ್ತರ : ಮಾನವ ಜನ್ಮವು ಮಾತ್ರ ಕರ್ಮಭೂಮಿಯೂ ಅಹುದು, ಭೋಗಭೂಮಿಯೂ ಅಹುದು. ಉಳಿದ ಎಲ್ಲ ಜೀವಿಗಳು ಪಿಶಾಚಿ, ಬ್ರಹ್ಮಪಿಶಾಚಿ, ರಾಕ್ಷಸ, ಬ್ರಹ್ಮರಾಕ್ಷಸ, ದೇವತೆಗಳು ಭೋಗಭೂಮಿಯವು ಇರುವವು.

ಪ್ರಶ್ನೆ : ಕರ್ಮ ಮತ್ತು ಜ್ಞಾನಗಳ ಫಲವೇನು?

ಉತ್ತರ : ಕರ್ಮಕ್ಕೆ ಇಹಪರದ ಭೋಗವೇ ಫಲ, ಜ್ಞಾನಕ್ಕೆ ಮೋಕ್ಷವೇ ಫಲ.



ಪ್ರಶ್ನೆ : ಪಾಪ ಪುಣ್ಯಗಳು ಎರಡೂ ಪಾಪವೇ, ಹೇಗೆ?

ಉತ್ತರ : ಪಾಪ ಪುಣ್ಯಗಳು ಎರಡೂ ಪಾಪವೇ. ಏಕೆಂದರೆ ಅವೆರಡೂ ಶರೀರದ ಜನ್ಮಕ್ಕೆ ಕಾರಣವಾಗುವವು.

ಪ್ರಶ್ನೆ : ಪಾಪಕರ್ಮ ಮಾಡಿ ತಪ್ಪಿಸಿಕೊಳ್ಳಲು ಸಾಧ್ಯವಿದೆಯೇ?

ಉತ್ತರ : ಪಾಪಕರ್ಮ ಮಾಡಿ ಜನರಿಂದ ತಪ್ಪಿಸಿಕೊಳ್ಳಬಹುದು, ಕೋರ್ಟಿನಿಂದ ತಪ್ಪಿಸಿಕೊಳ್ಳಬಹುದು, ಆದರೆ ಯಮನಿಂದ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ.

ಪ್ರಶ್ನೆ : ಕೆಲವು ಸಲ ನಾವು ಪುಣ್ಯಕರ್ಮ ಮಾಡಿದರೂ ದುಃಖ ಏಕೆ ಬರುವದು?

ಉತ್ತರ : ಈಗ ನಾವು ಪುಣ್ಯಕರ್ಮ ಮಾಡುತ್ತಿದ್ದರೂ ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ಕರ್ಮಕ್ಕನುಸಾರವಾಗಿ ದುಃಖವು ಬರುವದು. ಈಗ ಮಾಡಿದ ಪುಣ್ಯ ಕರ್ಮದ ಫಲವು ಮುಂದೆ ಪ್ರಾಪ್ತವಾಗುವದು.

ಪ್ರಶ್ನೆ : ಸೂಕ್ಷ್ಮ ಶರೀರವು ಜಡ ಶರೀರವನ್ನು ಯಾವಾಗ ಬಿಡುವದು?

ಉತ್ತರ : ಸೂಕ್ಷ್ಮ ಶರೀರವು ಜಡ ಶರೀರವು ಜರ್ಜರಿತವಾದಾಗ, ಜಡ ಶರೀರದ ತಾಪಾದಿಗಳನ್ನು ತಡೆಯದಂತೆ ಆದಾಗ, ಆ ಜಡ ಶರೀರವನ್ನು ಬಿಡುವದು, ಮತ್ತೆ ಮತ್ತೊಂದು ಜಡ ಶರೀರವನ್ನು ಧಾರಣ ಮಾಡುವದು.

ಪ್ರಶ್ನೆ : ಕರ್ತೃತ್ವ ಭೋಕ್ತೃತ್ವ ಭಾವನೆಯು ಯಾವಾಗ ನಾಶವಾಗುವದು?

ಉತ್ತರ : ದೇಹಭಾವ ಇದ್ದಾಗ ಕರ್ತೃತ್ವ ಭೋಕ್ತೃತ್ವ ಭಾವನೆಯು ಇರುವದು. ಆತ್ಮವೇ ತಾನೆಂದು ತಿಳಿದಾಗ ಕರ್ತೃತ್ವ ಭೋಕ್ತೃತ್ವ ಭಾವನೆಯು ನಾಶವಾಗುವದು.

ಪ್ರಶ್ನೆ : ಪಾಪಿಗಳಿಗೆ ಯಾರು ಕಾಣಿಸುವರು?

ಉತ್ತರ : ಪಾಪಿಗಳಿಗೆ ಪಿಶಾಚಿ ರಾಕ್ಷಸರು ಕಾಣಿಸುವರು.

ಪ್ರಶ್ನೆ : ಪುಣ್ಯವಾನರಿಗೆ ಯಾರು ಕಾಣಿಸುವರು?

ಉತ್ತರ : ಪುಣ್ಯವಾನರಿಗೆ ದೇವಾನುದೇವತರು ಕಾಣಿಸುವರು.

ಪ್ರಶ್ನೆ : ಯಾರು ಇನ್ನೊಬ್ಬರ ಶರೀರವನ್ನು ಪ್ರವೇಶ ಮಾಡುವರು?

ಉತ್ತರ : ಸೂಕ್ಷ್ಮ ಶರೀರಗಳೇ ಇನ್ನೊಬ್ಬರ ಶರೀರವನ್ನು ಪ್ರವೇಶ ಮಾಡುವವು. ದೇವರು, ಜೀವನ್ಮುಕ್ತರು ಯಾವದೇ ಶರೀರವನ್ನು ಪ್ರವೇಶ ಮಾಡುವದಿಲ್ಲ.

ಪ್ರಶ್ನೆ : ಜೀವನ್ಮುಕ್ತನು ಅವತಾರವನ್ನು ತಾಳಬಹುದೇ?

ಉತ್ತರ : ಅವತಾರವು ಪ್ರಾರಬ್ಧಕ್ಕನುಸಾರವಾಗಿ ನಡೆಯುವದು. ಜೀವನ್ಮುಕ್ತನು ಪ್ರಾರಬ್ಧಕ್ಕನುಸಾರವಾಗಿ ಅನೇಕ ಅವತಾರಗಳನ್ನು ತಾಳಬಹುದು.

*****

## ನೀತಿ

ಪ್ರಶ್ನೆ : ದೇವರೆಂದರೇನು?

ಉತ್ತರ : ದೇವರೆಂದರೆ ಅರಿವು, ಇರುವು, ಆನಂದ. ಅರಿವು ನಿಮ್ಮನ್ನು ಬಿಟ್ಟು ಇಲ್ಲ, ಅರಿವು ಬಿಟ್ಟು ಅರಿವಿಗೆ ಹೋಗಲಿಕ್ಕೆ ಬರುವದಿಲ್ಲ.

ಪ್ರಶ್ನೆ : ಜಾತ್ರೆಗಳ ಪರಿಣಾಮವೇನು?

ಉತ್ತರ : ಜಾತ್ರೆಗಳಿಂದ ಹಣ ಹಾಳಾಗುವದು, ಹಾಳು ಸಂಸ್ಕಾರಗಳು ಬೆಳೆಯುವವು, ಅಂಟು ರೋಗಗಳು ಹತ್ತುವವು. ಬ್ರಹ್ಮ ಜಿಜ್ಞಾಸೆಯು ನಡೆಯುವದು ಅತಿ ವಿರಳ. ರಂಜನೆಯು ಬೆಳೆಯುವದು.

ಪ್ರಶ್ನೆ : ಕ್ರಿಯಾ ಗಟ್ಟಿ ಎಂದರೇನು?

ಉತ್ತರ : ಕ್ರಿಯಾ ಗಟ್ಟಿ ಎಂದರೆ ನಡತೆ ಗಟ್ಟಿ, ಬೂದಿ ನೀರು ಕಲಿಸಿ ಮಾಡಿದ್ದು ಕ್ರಿಯಾ ಗಟ್ಟಿ ಅಲ್ಲ.

ಪ್ರಶ್ನೆ : ಭಾರತೀಯರೆಂದರೆ ಯಾರು?

ಉತ್ತರ : 'ಭಾ' ಎಂದರೆ ಪ್ರಕಾಶ, 'ರತ' ಎಂದರೆ ರತರಾದವರು. ಆದ್ದರಿಂದ 'ಭಾರತೀಯರು' ಎಂದರೆ ಸ್ವರೂಪದಲ್ಲಿ ರತರಾದವರು ಎಂದು ಅರ್ಥ. 'ಭಾರತ' ಎಂದರೆ ಸ್ವರೂಪದಲ್ಲಿ ರತರಾದವರು ವಾಸಿಸುವ ದೇಶ.

ಪ್ರಶ್ನೆ : ದೇವಪೂಜೆ ಎಂದರೇನು?

ಉತ್ತರ : ದೇಹವನ್ನು ಧಾರಣೆ ಮಾಡಿದ ಜೀವಿಗಳನ್ನು ಸಂತೋಷಗೊಳಿಸುವದೇ ದೇವಪೂಜೆ.

ಪ್ರಶ್ನೆ : ಜಗಳ ನಿಂತು ಹೋಗಬೇಕಾದರೆ ಏನು ಮಾಡಬೇಕು?

ಉತ್ತರ : ಜಗಳ ನಿಂತು ಹೋಗಬೇಕಾದರೆ ಇನ್ನೊಬ್ಬರ ಮನಸ್ಸಿಗೆ ಸಂತೋಷಗೊಳಿಸುವ ನುಡಿಯನ್ನೇ ನುಡಿಯಬೇಕು ಮತ್ತು ನಮ್ರವಾಗಿ ನಡೆಯಬೇಕು.

ಪ್ರಶ್ನೆ : ಮನಸ್ಸಿಗೆ ಸಮಾಧಾನವು ಯಾವಾಗ ಇರುವದು?

ಉತ್ತರ : ಪ್ರಾರಬ್ಧಕ್ಕನುಸಾರವಾಗಿ ಪ್ರಾಪ್ತವಾದದ್ದು ಇಷ್ಟೇ ಸಾಕು ಅಂದಾಗ ಮನಸ್ಸಿಗೆ ಸಮಾಧಾನ ಇರುವದು, ಇನ್ನಷ್ಟು ಬೇಕೆಂದರೆ ಅಸಮಾಧಾನವಿರುವದು. ಸಾಕು ಅಂದವನು ಸಾಹುಕಾರ, ಬೇಕು ಅಂದವನು ಭಿಕಾರಿ ಇರುವನು.



ಪ್ರಶ್ನೆ : 'ಮಕ್ಕಳಿಲ್ಲದವರಿಗೆ ಮುಕ್ತಿಯಿಲ್ಲ' ಇದರ ಅರ್ಥವೇನು?

ಉತ್ತರ : ಇದು ಕರ್ಮಕಾಂಡದೊಳಗಿನದು, ಜ್ಞಾನಕಾಂಡದೊಳಗಿಲ್ಲ. ಮುಪ್ಪಿನ ಕಾಲದಲ್ಲಿ ಶರೀರವನ್ನು ಪಾಲನೆ ಪೋಷಣೆ ಮಾಡುವವರು ಬೇಕು ಎನ್ನುವ ದೃಷ್ಟಿಯಿಂದ ಔಪಚಾರಿಕವಾಗಿ ಇದನ್ನು ಹೇಳಲಾಗಿದೆ. ಜಡಪುತ್ರನು ಬಾಹ್ಯದಲ್ಲಿ ಅಷ್ಟೇ, ಅಂತರಂಗದಲ್ಲಿ ಜ್ಞಾನಪುತ್ರನೇ ಅವಶ್ಯವಾಗಿ ಬೇಕು. ಜ್ಞಾನಪುತ್ರನು ಇಲ್ಲದಿದ್ದರೆ ಮುಕ್ತಿಯಿಲ್ಲ. ಗುರು ಪುತ್ರರಾಗದವರಿಗೆ ಮುಕ್ತಿಯಿಲ್ಲ.

ಪ್ರಶ್ನೆ : ಯಾವದು ಶ್ರೇಷ್ಠವಾದ ಪೂಜೆ?

ಉತ್ತರ : ಜೀವಿಗಳನ್ನು ಸಂತೋಷಗೊಳಿಸುವದು ಸಾಮಾನ್ಯ ಪೂಜೆ, ವಾಸನಾ ನಾಶವು ಇದಕ್ಕಿಂತ ಶ್ರೇಷ್ಠವಾದ ಪೂಜೆ, ಜ್ಞಾನದಾನವು ಎಲ್ಲಕ್ಕಿಂತ ಶ್ರೇಷ್ಠ ದೇವಪೂಜೆ.

ಪ್ರಶ್ನೆ : ಬ್ರಹ್ಮಚರ್ಯ ಎಂದರೇನು?

ಉತ್ತರ : ಭುವನದ ಎಲ್ಲ ಸ್ತ್ರೀ ಪುರುಷರ ಮಧ್ಯದಲ್ಲಿ ಇದ್ದರೂ, ಭೋಗ ಭಾವನೆ ಬರದಿರುವದೇ ಬ್ರಹ್ಮಚರ್ಯವೆನಿಸುವದು. ಋತುಮತಿಯಾದ ಕಾಲವನು ಮೀರದೆ ನಿಜ ಸತಿಯೊಳು ರತಿಸುಖ ಪಡೆವುದು ನುತ ಬ್ರಹ್ಮಚರ್ಯವೆನಿಪುದು. ಮನಸ್ಸು ಬ್ರಹ್ಮನ ಕಡೆಗೆ ಹರಿಯುವದೇ ಬ್ರಹ್ಮಚರ್ಯವು.

ಪ್ರಶ್ನೆ : ಪಾಪ ರಹಿತವಾದ ಮಂತ್ರ ಯಾವದು?

ಉತ್ತರ : ಎರಡನೆಯವರಿಗೆ ಹಿತವನ್ನುಂಟು ಮಾಡುವ ಮಾತೇ ಪಾಪ ರಹಿತವಾದ ಅನಘ ಮಂತ್ರವಾಗಿದೆ.

ಪ್ರಶ್ನೆ : ಸಾಮಾನ್ಯ ಮನುಷ್ಯನು ಯಾರು?

ಉತ್ತರ : ನೀತಿಯಿಂದ ನಡೆದವನು ಸಾಮಾನ್ಯ ಮನುಷ್ಯನು, ನೀತಿಯನ್ನು ಬಿಟ್ಟು ನಡೆದವನು ಮನುಷ್ಯನೇ ಅಲ್ಲ.

ಪ್ರಶ್ನೆ : ಸಂಬಂಧಿಕರೆನ್ನುವವರು ಯಾರು?

ಉತ್ತರ : ಸಂಬಂಧಿಕರೇ ಆಗಲಿ, ಯಾರೇ ಆಗಲಿ ಎಲ್ಲರೂ ವಿಷಯದವರು ಮಾತ್ರ. ನಿಮ್ಮಿಂದ ವಿಷಯಗಳು ಸಿಗುವವರೆಗೆ ಅವರು ನಿಮ್ಮವರಾಗಿರುತ್ತಾರೆ. ನಿಮ್ಮಿಂದ ವಿಷಯಗಳು ಸಿಗದಂತಾದರೆ ನಿಮ್ಮವರೆಂಬುವವರು ಯಾರೂ ಇಲ್ಲ.

ಪ್ರಶ್ನೆ : ಯಾವದು ಜೀವನದ ಆಧಾರವಾಗಬೇಕು?

ಉತ್ತರ : ಸಹಕಾರವೇ ಜೀವನದ ಆಧಾರವಾಗಬೇಕಲ್ಲದೆ ಸ್ಪರ್ಧೆಯಲ್ಲ. ಸ್ಪರ್ಧೆಯಿಂದ ಮತ್ಸರ ಉಂಟಾಗಿ ಜೀವನ ಹಾಳಾಗಿ ಹೋಗುತ್ತದೆ.

ಪ್ರಶ್ನೆ : ಚಳುವಳಿಗಳು ಏಕೆ ನಡೆಯುತ್ತವೆ?

ಉತ್ತರ : ವಿಷಯಗಳನ್ನು ಹೊಂದುವದಕ್ಕಾಗಿಯೇ ಚಳುವಳಿಗಳು ನಡೆಯುತ್ತವೆ.

ಪ್ರಶ್ನೆ : ಸ್ವಾವಲಂಬನ ಎಂದರೇನು?

ಉತ್ತರ : ಸ್ವರೂಪವನ್ನು ಅವಲಂಬಿಸುವದೇ ಸ್ವಾವಲಂಬನ.

ಪ್ರಶ್ನೆ : ಯಾವದಾದರೂ ಉದ್ಯೋಗವನ್ನು ಹೇಗೆ ಮಾಡಬೇಕು?

ಉತ್ತರ : ಉದ್ಯೋಗದಿಂದ ತನಗೂ ಕಲ್ಯಾಣವಾಗಬೇಕು, ಪರರಿಗೂ ಕಲ್ಯಾಣವಾಗಬೇಕು.

ಪ್ರಶ್ನೆ : ವ್ಯಾಕರಣ ಯಾವದು?

ಉತ್ತರ : ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಮಾತನಾಡುವದೇ ವ್ಯಾಕರಣ.

ಪ್ರಶ್ನೆ : ನಿಜವಾದ ಮಕ್ಕಳು ಯಾರು?

ಉತ್ತರ : ನಿಯಮಗಳ ಪಾಲನೆ ಮಾಡುವವರೇ ನಿಜವಾದ ಮಕ್ಕಳು, ನಿಯಮಗಳನ್ನು ಮುರಿಯುವ ಮಕ್ಕಳು ಮಕ್ಕಳೇ ಅಲ್ಲ.

ಪ್ರಶ್ನೆ : ನರಕಾಸುರನು ಯಾರು?

ಉತ್ತರ : ದೇಹಭಾವ ಇದ್ದವನೇ ನರಕಾಸುರನು.

ಪ್ರಶ್ನೆ : ಗುರು ಹೇಗಿರಬೇಕು?

ಉತ್ತರ : ನೀತಿ ಇಲ್ಲದ ಗುರುತ್ವ ಸುಡಲಿ.

ಪ್ರಶ್ನೆ : ಕನಿಷ್ಠನು ಯಾರು?

ಉತ್ತರ : ತನ್ನ ಹಿತವನ್ನು ಸಾಧಿಸಿ ಎರಡನೆಯವರನ್ನು ಹಾಳು ಮಾಡುವವನು ಕನಿಷ್ಠನು. ತಾನೂ ಹಾಳಾಗಿ ಇನ್ನೊಬ್ಬರನ್ನು ಹಾಳು ಮಾಡುವವನು ತೀರಾ ಕನಿಷ್ಠನು.

ಪ್ರಶ್ನೆ : ಲೋಕ ಸಂಗ್ರಹವೆಂದರೇನು?

ಉತ್ತರ : ಆತ್ಮಜ್ಞಾನವು ಮಾತ್ರ ನಿಜವಾದ ಲೋಕ ಸಂಗ್ರಹವು.

ಪ್ರಶ್ನೆ : ಯಜ್ಞವೆಂದರೇನು?

ಉತ್ತರ : ಯಜ್ಞವನ್ನು ಮಾಡುತ್ತೇನೆಂದು ಜನರು ಬೆಂಕಿಯಲ್ಲಿ ತುಪ್ಪವನ್ನು ಹಾಕುತ್ತಾರೆ. ಆಗ ಬೆಂಕಿಯು ಶಾಂತವಾಗುವದಿಲ್ಲ, ಮತ್ತಷ್ಟು ಧಗಧಗಿಸಿ ಉರಿಯುತ್ತದೆ. ಆದರೆ ಪ್ರಕೋಪವಾದ ಜಠರಾಗ್ನಿಯಲ್ಲಿ ತುಪ್ಪವನ್ನು ಹಾಕಿದರೆ ಅದು ಶಾಂತವಾಗುತ್ತದೆ, ಇದೇ ನಿಜವಾದ ಯಜ್ಞ.



ಪ್ರಶ್ನೆ : ವಿದ್ಯೆಯೆಂದರೇನು?

ಉತ್ತರ : ಜೀವನಿಗೆ ತನ್ನ ದುಃಖವನ್ನು ಬಿಡುಗಡೆ ಮಾಡುವದನ್ನು ಕಲಿಸುವದೇ ವಿದ್ಯೆ. ವಿಷಯಾಸಕ್ತಿ ಮತ್ತು ಶರೀರ ಭಾವವನ್ನು ಬಿಟ್ಟು, ವಿಷಯ ವೈರಾಗ್ಯ ಮತ್ತು ಆನಂದಭಾವ ಹೊಂದುವದನ್ನು ಕಲಿಸುವದೇ ವಿದ್ಯೆ.

ಪ್ರಶ್ನೆ : ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಟ್ಟರೆ ಏನಾಗುವದು?

ಉತ್ತರ : ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಟ್ಟರೆ, ಬುದ್ಧಿಯು ಸಿಟ್ಟಿನ ಕೈಯಲ್ಲಿ ಸಿಕ್ಕು ತನ್ನ ವಿಚಾರಶಕ್ತಿಯನ್ನು ಕಳೆದುಕೊಂಡು, ಬಾಯಿಗೆ ಬಂದದ್ದನ್ನು ಮಾತನಾಡಲಿಕ್ಕೆ ಮತ್ತು ಕೈಗೆ ಬಂದದ್ದನ್ನು ಮಾಡಲಿಕ್ಕೆ ಹಚ್ಚುತ್ತದೆ, ಅಂದರೆ ಪಾಪಕರ್ಮವು ಜರುಗುತ್ತದೆ. ನಂತರ ಪಾಪ ಕರ್ಮದ ಫಲವನ್ನು ಉಣ್ಣಲೇಬೇಕಾಗುವದು. ಇದರಿಂದ ಜೀವನು ನಾಶಹೊಂದುವನು. ಆದ್ದರಿಂದ ಸಾರಾಸಾರ ವಿಚಾರಿಸತಕ್ಕ ಬುದ್ಧಿಯ ಕೈಯಲ್ಲಿ ಮನಸ್ಸನ್ನು ಒಪ್ಪಿಸಬೇಕು.

ಪ್ರಶ್ನೆ : ನೀತಿ ಎಂದರೇನು?

ಉತ್ತರ : ತಾನು ಹೇಗೆ ವ್ಯಾವಹಾರಿಕ ದೃಷ್ಟಿಯಿಂದ ಬಾಳಬೇಕು ಭೋಗಿಸಬೇಕು ಎನ್ನುತ್ತಾನೋ, ಹಾಗೆ ಇತರ ಮಾನವರು ಮತ್ತು ಪ್ರಾಣಿಗಳು ಬಾಳಲಿಕ್ಕೆ ಭೋಗಿಸಲಿಕ್ಕೆ ಅನುವು ಇರುವಂತೆ ತಾನು ನಡೆದುಕೊಳ್ಳಬೇಕಾಗುತ್ತದೆ. ತಾನು ಬದುಕಬೇಕು, ಇನ್ನುಳಿದ ಜೀವಿಗಳಿಗೆ ಬದುಕಗೊಡಬೇಕು, ಇದೇ ನೀತಿ.

ಪ್ರಶ್ನೆ : ಬಾಹ್ಯ ಶೌಚವೆಂದರೇನು?

ಉತ್ತರ : ಪರಹಿತ ಕಾರ್ಯಗಳೇ ಬಾಹ್ಯ ಶೌಚವು. ಇದರಿಂದ ಕಲಹ, ಕಾಳಗ ಯುದ್ಧಾದಿಗಳು, ಯುದ್ಧೋಪಕರಣಗಳ ತಯಾರಿಕೆಗಳು ಹಾಗೂ ಕ್ರೂರ ಹಿಂಸಾ ಕೃತ್ಯಗಳು ತಮ್ಮಿಂದ ತಾವೇ ಕಾಲ್ದೆಗೆಯುತ್ತವೆ ಮತ್ತು ಜಾಗತಿಕ ಶಾಂತಿಯು ನೆಲೆಸುತ್ತದೆ. ಇವು ನಡೆಯಬೇಕಾದರೆ ಮೊದಲು ಮನಸ್ಸಿನಲ್ಲಿಯ ವಿಷಯ ವ್ಯಾಮೋಹವನ್ನು ತೆಗೆದುಹಾಕಬೇಕು.

ಪ್ರಶ್ನೆ : ಪಂಡಿತರೆಂದರೆ ಯಾರು?

ಉತ್ತರ : ಬ್ರಹ್ಮಾಕಾರವೃತ್ತಿಯುಳ್ಳವನೇ ನಿಜವಾದ ಪಂಡಿತನು. ಪರಸ್ತ್ರೀಯರನ್ನು ತಾಯಿಯಂತೆ, ಪರರ ದ್ರವ್ಯವನ್ನು ಮಣ್ಣಿನ ಹೆಂಟೆಯಂತೆ, ಎಲ್ಲ ಜೀವಿಗಳನ್ನು ತನ್ನಂತೆ ಎಂದು ಯಾವನು ತಿಳಿದುಕೊಳ್ಳುತ್ತಾನೋ, ಅವನೇ ಸಾಮಾನ್ಯ ಪಂಡಿತನು.

ಪ್ರಶ್ನೆ : ಸತ್ಪುರುಷರು ಯಾರು?

ಉತ್ತರ : ತಮ್ಮ ಸ್ವಾರ್ಥವನ್ನು ಬದಿಗೆ ಇಟ್ಟು, ಪರರಿಗೆ ಹಿತ ಮಾಡುವವರೇ ಸತ್ಪುರುಷರು.

ಪ್ರಶ್ನೆ : ಗಂಡ ಹೆಂಡತಿಗೆ ದೇವರು, ಆದರೆ ಹೆಂಡತಿ ಯಾರಿಗೆ ದೇವರು?

ಉತ್ತರ : ಹೆಂಡತಿ ಗಂಡನಿಗೆ ದೇವರು, ನೀವು ಆಕೆಯನ್ನು ದೇವರೆಂದು ತಿಳಿದರೆ ನೀವು ಅವಳಿಗೆ ದೇವರಾಗುವಿರಿ.

ಪ್ರಶ್ನೆ : ದುರ್ಜನರೊಡನೆ ಹೇಗೆ ವ್ಯವಹರಿಸಬೇಕು?

ಉತ್ತರ : ದುರ್ಜನರಿಗೆ ಮೊದಲು ವಂದಿಸಿ ನಂತರ ಸಜ್ಜನರಿಗೆ ವಂದಿಸಬೇಕು. ಸಜ್ಜನರು ಯಾರಾದರೂ ತಮ್ಮ ಎದುರಿಗೆ ಬಂದರೆ ಅವರಿಂದ ನಮಸ್ಕಾರದ ಅಪೇಕ್ಷೆ ಮಾಡುವದಿಲ್ಲ. ಆದರೆ ದುರ್ಜನರು ಎದುರಿಗೆ ಬಂದವರಿಂದ ನಮಸ್ಕಾರ ಅಪೇಕ್ಷಿಸುವರು. ಎದುರಿಗೆ ಬಂದವರು ನಮಸ್ಕರಿಸದಿದ್ದರೆ, ಯಾಕೋ ನಮಸ್ಕರಿಸದೆ ಹಾಗೇ ಹೋದ, ಅವನಿಗೆ ಬಹಳ ಸೊಕ್ಕು ಬಂದಿದೆ, ಅವನನ್ನು ನೋಡಿಯೇ ಬಿಡೋಣ ಎಂದು ದುರ್ಜನರು ಅನ್ನುವರು.

ಪ್ರಶ್ನೆ : ಸಜ್ಜನರ ಲಕ್ಷಣವೇನು?

ಉತ್ತರ : ಕಾಯಾ, ವಾಚಾ, ಮನಸಾ ಏಕರೂಪತೆಯೇ ಸಜ್ಜನರ ಲಕ್ಷಣ. ಅವರು ಮನಸ್ಸಿನಲ್ಲಿ ಇದ್ದದ್ದನ್ನೇ ಮಾತನಾಡುವರು, ಮಾತನಾಡಿದ್ದನ್ನು ಕೃತಿಗಿಳಿಸುವರು.

ಪ್ರಶ್ನೆ : ಧರ್ಮ ಯಾವದು?

ಉತ್ತರ : ಆಚರಣೆಯೇ ಅಥವಾ ನಡತೆಯೇ ಧರ್ಮವು.

ಪ್ರಶ್ನೆ : ವಿದ್ಯಾಲಯಗಳು ಹೇಗಿರಬೇಕು?

ಉತ್ತರ : ಬಾಹ್ಯದಲ್ಲಿ ಸುಖವಿಲ್ಲ, ನಿನ್ನೊಳಗೇ ಸುಖವಿದೆ ಎನ್ನುವ ನೆನಪನ್ನು ತಂದುಕೊಡುವ ವಿದ್ಯಾಲಯಗಳು ಬೇಕು. ಕೇವಲ ರಂಜನೆಯನ್ನು ಕಲಿಸುವ ವಿದ್ಯಾಲಯಗಳು ಬೇಕಾಗಿಲ್ಲ, ಏಕೆಂದರೆ ಮನರಂಜನೆ ಚಿತ್ತವನ್ನು ಚಂಚಲ ಮಾಡುವದು.

ಪ್ರಶ್ನೆ : ರಾಮರಾಜ್ಯವು ಬರಬೇಕಾದರೆ ಏನು ಮಾಡಬೇಕು?

ಉತ್ತರ : ರಾಮರಾಜ್ಯವು ಬರಬೇಕಾದರೆ ರಾಜರು ಬ್ರಹ್ಮರ್ಷಿಗಳಿರಬೇಕು, ಪ್ರಜೆಗಳು ಅವರ ಮಾರ್ಗದರ್ಶನದಂತೆ ನಡೆಯಬೇಕು.

ಪ್ರಶ್ನೆ : ದೇಶದಲ್ಲಿ ಪ್ರಜೆಗಳ ವ್ಯವಹಾರವು ಎಂತಹ ಆಡಳಿತವಿದ್ದರೆ ಸುಗಮವಾಗಿ ಸಾಗುವದು?

ಉತ್ತರ : ಸಾಮಾನ್ಯವಾಗಿ ದೇಶದಲ್ಲಿ ಅವಿಚಾರಿಗಳ ಸಂಖ್ಯೆಯೇ ಹೆಚ್ಚಾಗಿರುವದು. ಆದ್ದರಿಂದ ಪ್ರಜೆಗಳ ಮತದ ಪ್ರಕಾರ ದೇಶದ ಆಡಳಿತವನ್ನು ನಡೆಸಿದರೆ, ಅದು ಸೈತಾನನ ದೇಶವೇ ಆಗುವದು. ಪ್ರಜಾಪ್ರಭುತ್ವವೆಂದರೆ ಮೂರ್ಖರ ಸಂತೆ, ಆದ್ದರಿಂದ ವಿವೇಕಿಗಳಾದ ಆತ್ಮಜ್ಞಾನಿಗಳು ಹೇಳಿದಂತೆ ದೇಶದ ವ್ಯವಹಾರವು ನಡೆದರೆ ದೇಶದಲ್ಲಿ ಶಾಂತಿ ನೆಲೆಸುವದು. ಒಳ್ಳೆಯದಕ್ಕೆ ಸ್ವಾತಂತ್ರ್ಯ ಕೊಡಬೇಕು, ಕೆಟ್ಟದ್ದಕ್ಕೆ ಸ್ವಾತಂತ್ರ್ಯ ಕೊಡಬಾರದು.



ಪ್ರಶ್ನೆ : ಪ್ರತಿಯೊಬ್ಬರು ಪರಸ್ಪರ ಹೇಗೆ ನಡೆದುಕೊಳ್ಳಬೇಕು?

ಉತ್ತರ : ಪ್ರತಿಯೊಬ್ಬರು ಇನ್ನೊಬ್ಬರೊಡನೆ ನಡೆದುಕೊಳ್ಳುವಾಗ ಮನಸ್ಸು ಮುರಿಯಬಾರದು. ಮನಸ್ಸು ಮುರಿದರೆ ಹೊಂದಾಣಿಕೆ ಆಗುವದು ಅತಿ ಕಠಿಣವಿದೆ. ಹಗ್ಗ ಹರಿದರೆ ಕೂಡಿಸಬಹುದು, ಒಡೆದ ಕಲ್ಲುಗಳನ್ನು ಕೂಡಿಸಬಹುದು, ಆದರೆ ಮುರಿದ ಮನಸ್ಸನ್ನು ಕೂಡಿಸುವದು ಅಸಾಧ್ಯವು.

ಪ್ರಶ್ನೆ : ಅಧ್ಯಾತ್ಮದವರು ಹೇಗೆ ನಡೆದುಕೊಳ್ಳಬೇಕು?

ಉತ್ತರ : ಅಧ್ಯಾತ್ಮದವರು ನೀತಿಯಿಂದ ನಡೆದುಕೊಳ್ಳಬೇಕು. ನೀತಿ ಇಲ್ಲದ ಶಾಸ್ತ್ರಕ್ಕೆ ಬೆಂಕಿ ಹಚ್ಚಿದರೆ ಸರಿ.

ಪ್ರಶ್ನೆ : ಲೌಕಿಕ ವಿದ್ಯೆಯ ಪ್ರಯೋಜನವೇನು?

ಉತ್ತರ : ಲೌಕಿಕ ವಿದ್ಯೆಯು ಕಾಳು ಕೂಳು, ಜೋಡು ಗೂಡಿಗೆ ಮಾತ್ರ. ಆದರೆ ಮುಕ್ತಿಗಲ್ಲ.

ಪ್ರಶ್ನೆ : ಕರ್ಪೂರ ಯಾವದು?

ಉತ್ತರ : ಮನಸ್ಸೇ ಕರ್ಪೂರವು, ಅದನ್ನು ಸುಡಬೇಕು. ಕರ್ಪೂರವನ್ನು ರೋಗಿಗಳಿಗೆ ಕೊಡಬೇಕು.

ಪ್ರಶ್ನೆ : ನಾವು ಹೇಗೆ ವ್ಯವಹಾರವನ್ನು ನಡೆಯಿಸಬೇಕು?

ಉತ್ತರ : ನಾವು ಹಿಂದೆ ಮಾಡಿದ ಕರ್ಮದಂತೆ ಈಗಿನ ವ್ಯಾವಹಾರಿಕ ಜಾಗ್ರದ ವ್ಯವಹಾರವು ನಡೆಯುವದು, ಅದನ್ನು ಬದಲಿಸಲು ಎಷ್ಟು ಪ್ರಯತ್ನಿಸಿದರೂ ಅದು ಕರ್ಮದಂತೆ ನಡೆಯುವದೇ, ಇಷ್ಟು ತಿಳಿದುಕೊಂಡು ನಡೆದರೆ ಆರಾಮವೇ ಇರುವದು. ಸ್ವರೂಪದಲ್ಲಿ ಸುಖವಿದೆಯೆಂದು, ದೇಹ ಮತ್ತು ವಿಷಯಗಳಲ್ಲಿ ಸುಖವಿಲ್ಲವೆಂದು ಜೀವನ ನಡೆಸಬೇಕು. ಜೀವನವನ್ನು ನೈಸರ್ಗಿಕವಾಗಿ ನಡೆಸಿದರೆ ಸುಖ, ಕೃತ್ರಿಮವಾಗಿ ನಡೆಸಿದರೆ ದುಃಖ. ಜೀವನವನ್ನು ಕಾಳಜಿಯಿಂದ ನಡೆಯಿಸಬೇಕು, ಚಿಂತೆ ಮಾಡಬಾರದು, ಪ್ರಾಣ ಹೋದರೂ ಚಿಂತಿಸಬಾರದು, ಏಕೆಂದರೆ ಕರ್ಮ ಧರ್ಮವಿದ್ದಂತೆ ನಡೆಯುವದು.

ಪ್ರಶ್ನೆ : ಗಳಿಕೆ ಯಾವದು?

ಉತ್ತರ : ಉಳಿಸಿದ್ದೇ ಗಳಿಸಿದ್ದು.

ಪ್ರಶ್ನೆ : ಯಾವ ದಾನವು ಶ್ರೇಷ್ಠವು?

ಉತ್ತರ : ಅನ್ನದಾನ ಮಾಡಿದರೆ ಮತ್ತೆ ಅನ್ನ ಬೇಕಾಗುತ್ತದೆ. ಜ್ಞಾನದಾನ ಮಾಡಿದರೆ ಮತ್ತೆ ಜ್ಞಾನದಾನ ಮಾಡಬೇಕಾಗಿಲ್ಲ. ಆದ್ದರಿಂದ ಜ್ಞಾನದಾನವೇ ಶ್ರೇಷ್ಠವು. ಆತ್ಮಜ್ಞಾನ ದಾನವೇ ಇಡೀ ವಿಶ್ವದ ಎಲ್ಲ ದಾನಗಳಿಗಿಂತ ಶ್ರೇಷ್ಠ ದಾನವು.

ಪ್ರಶ್ನೆ : ಅನೇಕರ ಮನಸ್ಸನ್ನು ಮೇಳ ಮಾಡಲು ಬರುವದೇ?

ಉತ್ತರ : ಅನೇಕರ ಮನಸ್ಸನ್ನು ಮೇಳ ಮಾಡಲು ಸಾಧ್ಯವಿಲ್ಲ, ಏಕೆಂದರೆ ಅವರ ಸಂಸ್ಕಾರಗಳು ಭಿನ್ನವಾಗಿವೆ.

ಪ್ರಶ್ನೆ : ಶಿಸ್ತು ಎಂದರೇನು?

ಉತ್ತರ : ನೀತಿಯೇ ಶಿಸ್ತು, ಆದರೆ ಸಮವಸ್ತ್ರ ಧರಿಸಿ ಪಥ ಸಂಚಲನ ಮಾಡುವದು ಶಿಸ್ತು ಅಲ್ಲ.

ಪ್ರಶ್ನೆ : ಸತ್ಯಾಗ್ರಹ ಎಂದರೇನು?

ಉತ್ತರ : ಸತ್ಯವನ್ನು ಹೊಂದುವದಕ್ಕಾಗಿ ಹಟ ತೊಡುವದೇ ಸತ್ಯಾಗ್ರಹ.

ಪ್ರಶ್ನೆ : ಶಿವ, ನಾರಾಯಣ, ಕೃಷ್ಣ, ರಾಮ ಇವುಗಳ ಅರ್ಥವೇನು?

ಉತ್ತರ : 'ಶಿವ' ಎಂದರೆ ಮಂಗಳ, ಸುಖ, ಕಲ್ಯಾಣ. 'ನಾರಾಯಣ' ಎಂದರೆ ನರರಿಗೆ ಗುರಿಯಾದದ್ದು, ಸುಖ. 'ಕೃಷ್ಣ' ಎಂದರೆ ಸದಾನಂದ. 'ರಾಮ' ಎಂದರೆ ಅಂತರಾರಾಮ. ಹೀಗೆ ಇವೆಲ್ಲವುಗಳ ಅರ್ಥ ಒಂದೇ ಇದೆ.

ಪ್ರಶ್ನೆ : ಸ್ವಾರ್ಥ ಎಂದರೇನು?

ಉತ್ತರ : Self ಎಂದರೆ ಆತ್ಮ, Selfish ಎಂದರೆ ಸ್ವಾರ್ಥಿ. 'ಸ್ವ' ಎಂದರೆ ತನ್ನ, 'ಅರ್ಥ' ಎಂದರೆ ಸಂಪತ್ತು. 'ಸ್ವಾರ್ಥ' ಎಂದರೆ ತನ್ನ ಸಂಪತ್ತು (ಸುಖ). ಅದು ತನ್ನೊಳಗೇ (ಆತ್ಮ) ಇದೆ.

ಪ್ರಶ್ನೆ : ಯಾವ ಕರ್ಮವನ್ನು ಮಾಡಬಾರದು?

ಉತ್ತರ : ಪಾಪ ಕರ್ಮವನ್ನು ಮಾಡಬಾರದು.

ಪ್ರಶ್ನೆ : ಯಾವ ಕರ್ಮವನ್ನು ಮಾಡಬೇಕು?

ಉತ್ತರ : ಪುಣ್ಯ ಕರ್ಮವನ್ನು ಮಾಡಬೇಕು.

ಪ್ರಶ್ನೆ : ಯಾರ ಸಂಗವನ್ನು ಮಾಡಬೇಕು?

ಉತ್ತರ : ಸಜ್ಜನರ, ಸಾಧಕರ ಮತ್ತು ಆತ್ಮಜ್ಞಾನಿಗಳ ಸಂಗವನ್ನು ಮಾಡಬೇಕು.

ಪ್ರಶ್ನೆ : ಜೀವಿಗಳೊಡನೆ ಹೇಗೆ ನಡೆದುಕೊಳ್ಳಬೇಕು?

ಉತ್ತರ : ಜೀವಿಗಳೊಡನೆ ದಯೆಯಿಂದ ನಡೆದುಕೊಳ್ಳಬೇಕು.



ಪ್ರಶ್ನೆ : ಹೇಗೆ ನಡೆದುಕೊಂಡರೆ ಸುಖ ಇರುವದು?

ಉತ್ತರ : ಕೊರತೆಯಿಲ್ಲದೆ ನಡೆದುಕೊಂಡರೆ ಸುಖ ಇರುವದು.

ಪ್ರಶ್ನೆ : ಅತಿ ಹೆಚ್ಚಿನ ದುರ್ಗುಣ ಯಾವದು?

ಉತ್ತರ : ಕಡು ಲೋಭವೇ ಅತಿ ಹೆಚ್ಚಿನ ದುರ್ಗುಣ.

ಪ್ರಶ್ನೆ : ಕಷ್ಟ ಕಾಲದಲ್ಲಿ ಏನು ಮಾಡಬೇಕು?

ಉತ್ತರ : ಕಷ್ಟ ಕಾಲದಲ್ಲಿ ಧೈರ್ಯವನ್ನು ತಾಳಬೇಕು.

ಪ್ರಶ್ನೆ : ಬಾಲ್ಯದಲ್ಲಿ ಯಾವ ವಿದ್ಯೆಯನ್ನು ಕಲಿಯಬೇಕು?

ಉತ್ತರ : ಬಾಲ್ಯದಲ್ಲಿ ಆತ್ಮವಿದ್ಯೆಯನ್ನು ಕಲಿಯಬೇಕು.

ಪ್ರಶ್ನೆ : ಏನನ್ನು ಮರೆಯಬೇಕು?

ಉತ್ತರ : ಪರರ ದುರ್ಗುಣಗಳನ್ನು ಗುಡ್ಡದಷ್ಟಾದರೂ ಮರೆಯಬೇಕು ಮತ್ತು ನಮ್ಮ ಸದ್ಗುಣಗಳನ್ನು ಗುಡ್ಡದಷ್ಟಾದರೂ ಮರೆಯಬೇಕು.

ಪ್ರಶ್ನೆ : ಏನನ್ನು ಆದರಿಸಬೇಕು?

ಉತ್ತರ : ಪರರ ಸದ್ಗುಣಗಳನ್ನು ಎಳ್ಳು ಕಾಳಿನಷ್ಟಿದ್ದರೂ ಪರ್ವತದಷ್ಟು ಆದರಿಸಬೇಕು. ನಮ್ಮ ದುರ್ಗುಣಗಳನ್ನು ಎಳ್ಳು ಕಾಳಿನಷ್ಟಿದ್ದರೂ ಪರ್ವತದಷ್ಟು ಎತ್ತಿ ತೋರಿಸಬೇಕು.

ಪ್ರಶ್ನೆ : ಪತಿ ಪತ್ನಿಯರು ಹೇಗೆ ಇರಬೇಕು?

ಉತ್ತರ : 'ಭೋಜ್ಯೇಷು ಮಾತಾ' ಎಂದರೆ ಊಟಕ್ಕೆ ನೀಡುವ ಕಾಲಕ್ಕೆ ಪತಿಗೆ ಪತ್ನಿಯ ಬಗ್ಗೆ ಮಾತೃಭಾವ ಇರಬೇಕು, ಪತ್ನಿಗೆ ಪತಿಯ ಬಗ್ಗೆ ವತ್ಸಭಾವ ಇರಬೇಕು. 'ಕಾರ್ಯೇಷು ಮಂತ್ರಿ' ಎಂದರೆ ಕೆಲಸ ಮಡುವ ಕಾಲಕ್ಕೆ ಒಬ್ಬರಿಗೊಬ್ಬರು ಮಂತ್ರಿಯಾಗಿರಬೇಕು. ನಿನಗೆ ವಿಚಾರ ಹೊಳೆದದ್ದನ್ನು ನೀನು ಆಕೆಗೆ ಹೇಳಬೇಕು, ಆಕೆಗೆ ವಿಚಾರ ಹೊಳೆದದ್ದನ್ನು ಆಕೆಯು ನಿನಗೆ ಹೇಳಬೇಕು, ಹೀಗೆ ಪರಸ್ಪರ ಒಬ್ಬರಿಗೊಬ್ಬರು ಮಂತ್ರಿಗಳಾಗಿರಬೇಕು. 'ಸೇವೇಷು ದಾಸಿ' ಎಂದರೆ ಸೇವೆಯನ್ನು ಮಾಡುವ ಕಾಲಕ್ಕೆ ಅವನು ಈಕೆಗೆ ದಾಸ, ಈಕೆಯು ಅವನಿಗೆ ದಾಸಿ.

ಪ್ರಶ್ನೆ : ಸಮಾಜದಲ್ಲಿ ಶಾಂತಿ ನೆಲೆಸುವದು ಹೇಗೆ?

ಉತ್ತರ : ವಿಷಯ ಸುಖಬುದ್ಧಿಯಿಂದಲೇ ವ್ಯಕ್ತಿ ವ್ಯಕ್ತಿಗಳ ನಡುವೆ, ದೇಶ ದೇಶಗಳ ನಡುವೆ ತಿಕ್ಕಾಟ ನಡೆದಿದೆ. ವಿವೇಕದಿಂದ ವಿಷಯ ಸುಖಬುದ್ಧಿಯನ್ನು ತೆಗೆದರೆ ಸಮಾಜದಲ್ಲಿ ಶಾಂತಿ ನೆಲೆಸುವದು.

ಪ್ರಶ್ನೆ : ಸಿಟ್ಟು ಏಕೆ ಬರುವದು?

ಉತ್ತರ : ಆಸೆಗೆ ಅಡ್ಡಿಯಾದರೆ ಸಿಟ್ಟು ಬರುವದು.

ಪ್ರಶ್ನೆ : ಧರ್ಮಪತ್ನಿಯು ಯಾರು?

ಉತ್ತರ : ಸ್ವರೂಪ ಸಾಕ್ಷಾತ್ಕಾರಕ್ಕೆ ಸಹಾಯ ಮಾಡುವವಳೇ ಧರ್ಮಪತ್ನಿಯು.

ಪ್ರಶ್ನೆ : ಶ್ರೇಷ್ಠ ಅಮೃತ ಯಾವದು?

ಉತ್ತರ : ಶ್ರೀ ಗುರು ವಚನವೇ ಶ್ರೇಷ್ಠ ಅಮೃತ.

ಪ್ರಶ್ನೆ : ಶ್ರೇಷ್ಠವಾದ ಸೇವೆ ಯಾವದು?

ಉತ್ತರ : ವಿನಯ ಮತ್ತು ಇನ್ನೊಬ್ಬರನ್ನು ಸಂತೋಷಗೊಳಿಸುವ ಮಾತು, ಇದೇ ಶ್ರೇಷ್ಠವಾದ ಸೇವೆ.

ಪ್ರಶ್ನೆ : ಶ್ರೇಷ್ಠವಾದ ಧರ್ಮ ಯಾವದು?

ಉತ್ತರ : ಕರುಣೆ.

ಪ್ರಶ್ನೆ : ಅತಿ ಹೆಚ್ಚಿನ ಪಾಪ ಯಾವದು?

ಉತ್ತರ : ನಿಂದೆ.

ಪ್ರಶ್ನೆ : ಮಾನವನಿಗೆ ಮರಣ ಯಾವದು?

ಉತ್ತರ : ಚಿಂತೆ.

ಪ್ರಶ್ನೆ : ಶ್ರೇಷ್ಠವಾದ ಗುಣ ಯಾವದು?

ಉತ್ತರ : ಉದಾರತೆ.

ಪ್ರಶ್ನೆ : ತೃಪ್ತಿ ಯಾವದು?

ಉತ್ತರ : ಇಷ್ಟೇ ಸಾಕು ಎನ್ನುವದು.

ಪ್ರಶ್ನೆ : ಅತೃಪ್ತಿ ಯಾವದು?

ಉತ್ತರ : ಇನ್ನಷ್ಟು ಬೇಕು ಎನ್ನುವದು.

ಪ್ರಶ್ನೆ : ಶ್ರೇಷ್ಠ ತಪಸ್ಸು ಯಾವದು?

ಉತ್ತರ : ಕೋಪವಿಲ್ಲದಿರುವದು.

ಪ್ರಶ್ನೆ : ಏಕತ್ರ ಕುಟುಂಬಗಳು ಸುಸೂತ್ರವಾಗಿ ನಡೆಯಲು ಏನು ಮಾಡಬೇಕು?

ಉತ್ತರ : ಏಕತ್ರ ಕುಟುಂಬಗಳು ಸುಸೂತ್ರವಾಗಿ ನಡೆಯಲು ಸ್ವಲ್ಪ ಮಟ್ಟಿಗಾದರೂ ಸ್ವಾರ್ಥ ತ್ಯಾಗವು ಅತಿ ಅವಶ್ಯವಿದೆ. ಸ್ವಾರ್ಥ ತ್ಯಾಗವು ಏಕತ್ರ ಕುಟುಂಬದ ಆಧಾರ ಸ್ಥಂಭವು. ಸ್ವಾರ್ಥ ತ್ಯಾಗದ ಆಧಾರದ ಮೇಲೆ ಕುಟುಂಬದ ವ್ಯವಹಾರವು ನಡೆದರೆ ಎಲ್ಲ ಜೀವಿಗಳ ಕಲ್ಯಾಣವಾಗುವದು. ಇಲ್ಲದಿದ್ದರೆ ಏಕತ್ರ ಕುಟುಂಬಗಳು ಒಡೆದು ಹೋಗುವವು.



ಪ್ರಶ್ನೆ : ಮಾದಕ ಪದಾರ್ಥಗಳ ಸೇವನೆಯಿಂದ ಶಾಶ್ವತ ಸುಖವನ್ನು ಹೊಂದಲು ಸಾಧ್ಯವಿದೆಯೇ?

ಉತ್ತರ : ಮಾದಕ ಪದಾರ್ಥಗಳ ಸೇವನೆಯಿಂದ ಹೊಂದಿದ ಸುಖವು ಸುಖವೇ ಅಲ್ಲ. ಏಕೆಂದರೆ ಅದು ಕ್ಷಣಿಕವು ಮತ್ತು ಅನಾರೋಗ್ಯಕರವು ಆಗಿದೆ. ಮಾದಕ ಪದಾರ್ಥಗಳು ಭೌತಿಕ ಮತ್ತು ಮಾನಸಿಕ ಶಕ್ತಿಯನ್ನು ಕ್ಷಯಿಸುವವು. ಅವುಗಳನ್ನು ಸೇವಿಸಿದಂತೆ ಅವುಗಳ ಚಟಗಳು ಬಲಶಾಲಿಯಾಗಿ ಅವುಗಳನ್ನು ಬಿಡುವದು ಅತಿ ಕಠಿಣವಾಗುವದು, ಅವುಗಳಿಂದ ಬುದ್ಧಿ ಕೆಡುವದು, ಅಶಕ್ತತೆಯು ಉಂಟಾಗುವದು. ನಿದ್ರೆಯು ಆರೋಗ್ಯಕಾರಕವಿರುವದು. ಆದರೆ ಮಾದಕ ಪದಾರ್ಥಗಳು ವಿಶ್ರಾಂತಿಯನ್ನು ಕೊಡುವವು ಎಂದು ಈ ಚಟಗಳಿಗೆ ಅಂಟಿಕೊಂಡಿದ್ದಾದರೆ ಮಾನವನು ಹುಚ್ಚನಾಗುವ ಸಂಭವವಿದೆ. ಗಾಢನಿದ್ರೆಯು ದಣಿವು ಬೇಸರಿಕೆಯನ್ನು ನೈಸರ್ಗಿಕವಾಗಿ ಕಳೆಯುವದು. ಈ ಚಟಗಳು ನಿದ್ರೆಯು ಬರಲಾರದಂತೆ ಮಾಡುವವು ಮತ್ತು ನಿದ್ರೆಯಂತೆ ನೈಸರ್ಗಿಕ ವಿಶ್ರಾಂತಿಯನ್ನು ಕೊಡಲಾರವು. ನಿದ್ರೆಯಿಂದ ಹುಚ್ಚು ಬಿಡುವದು, ನಿದ್ರೆಯಿಂದ ಬುದ್ಧಿ ಕೆಡುವದಿಲ್ಲ.

ಪ್ರಶ್ನೆ : ಸುಖ ಯಾವದು?

ಉತ್ತರ : ಅಭೇದತ್ವವೇ ಸುಖವು, ಭೇದತ್ವವೇ ಭೀತಿಕರವು ಮತ್ತು ದುಃಖಮಯವು ಇರುವದು.

ಪ್ರಶ್ನೆ : ಇನ್ನೊಬ್ಬರನ್ನು ಸಂತೋಷ ಮತ್ತು ಅಸಂತೋಷಗೊಳಿಸಿದ್ದರ ಫಲವೇನು?

ಉತ್ತರ : ಇನ್ನೊಬ್ಬರನ್ನು ಸಂತೋಷಪಡಿಸಿದರೆ ತನ್ನ ಮನಸ್ಸಿಗೆ ಸಮಾಧಾನವಿದ್ದು, ತನ್ನಲ್ಲಿಯ ಮೋಹವು ಕಡಿಮೆಯಾಗುವದು ಮತ್ತು ಬಾಹ್ಯ ವ್ಯವಹಾರವು ಸುರಳಿತವಾಗಿ ನಡೆಯುವದು. ಇನ್ನೊಬ್ಬರನ್ನು ಅಸಂತೋಷಪಡಿಸಿದರೆ ತನ್ನ ಮನಸ್ಸಿಗೆ ಅಸಮಾಧಾನವಾಗುವದು, ಮೋಹವು ಹೆಚ್ಚಾಗುವದು ಮತ್ತು ಬಾಹ್ಯ ವ್ಯವಹಾರವು ಕುಂಠಿತವಾಗುವದು.

ಪ್ರಶ್ನೆ : ಅಧ್ಯಾತ್ಮ ಸಾಧಕರಿಗೆ ಉಪಕಾರ ಎಷ್ಟು ಮಾಡಬೇಕು?

ಉತ್ತರ : ಉಪಕಾರ ಎಷ್ಟು ಅಂದರೆ ಎರಡು ತುತ್ತು ಅನ್ನ, ಎರಡು ತುಂಡು ಬಟ್ಟೆ, ಇಷ್ಟೇ ಸಾಕು.

ಪ್ರಶ್ನೆ : ಜಾಣ ಕೋಣರಿಗೆ ದಾರಿಗಳೆಷ್ಟು?

ಉತ್ತರ : ಜಾಣ ಕೋಣರಿಗೆ ಎರಡು ದಾರಿ, ಜಾಣ ಜಾಣರಿಗೆ ಮೂರು ದಾರಿ, ಕೋಣ ಕೋಣರಿಗೆ ದಾರಿಯೇ ಇಲ್ಲ.

ಪ್ರಶ್ನೆ : ಮಾನವರು ಎಷ್ಟು ಪ್ರಕಾರದವರು ಇರುವರು?

ಉತ್ತರ : ತಮ್ಮ ಸ್ವಾರ್ಥತ್ಯಾಗದಿಂದ ಪರರ ಪ್ರಯೋಜನ ಮಾಡುವವರು ಸತ್ಪುರುಷರು. ತಮ್ಮ ಹಿತವನ್ನು ಸಾಧಿಸಿ ಪರರ ಹಿತವನ್ನು ಮಾಡುವವರು ಸಾಮಾನ್ಯರು. ತಮ್ಮ ಸ್ವಾರ್ಥವನ್ನು ಸಾಧಿಸಿ, ಪರರ ಹಿತವನ್ನು ಹಾಳು ಮಾಡುವವರು ಮಾನವ ರಾಕ್ಷಸರು. ಇಬ್ಬರ ಹಿತವನ್ನು ಕೆಡಿಸುವವರನ್ನು ಹೆಸರಿಸಲು ಬರುವದಿಲ್ಲ.

ಪ್ರಶ್ನೆ : ಗುಣಶಾಲಿಗಳನ್ನು ದ್ವೇಷಿಸಿದರೆ ಏನಾಗುವದು?

ಉತ್ತರ : ಗುಣಶಾಲಿಗಳನ್ನು ದ್ವೇಷಿಸಿದರೆ ಮುಂದೆ ಆಪತ್ತು ಬರುವದು.

ಪ್ರಶ್ನೆ : ಏಕಾಂತದಲ್ಲಿ ತಾಯಿ, ಮಗಳು, ಸಹೋದರಿಯರೊಡನೆ ಹೇಗೆ ವರ್ತಿಸಬೇಕು?

ಉತ್ತರ : ಏಕಾಂತದಲ್ಲಿ ತಾಯಿ, ಮಗಳು, ಸಹೋದರಿಯರೊಡನೆ ಕುಳಿತುಕೊಳ್ಳಬಾರದು, ಏಕೆಂದರೆ ಇಂದ್ರಿಯ ಗ್ರಾಮ ಬಲವಾನವಿರುವದು. ಮನಸ್ಸು ಯಾವಾಗ ವಿಕಾರವಾಗಿ ನಮ್ಮನ್ನು ಬುಡಮೇಲು ಮಾಡುವದು ಹೇಳಲಿಕ್ಕೆ ಬರುವದಿಲ್ಲ.

ಪ್ರಶ್ನೆ : ಸರ್ವಶಾಸ್ತ್ರಜ್ಞ ಯಾರು?

ಉತ್ತರ : ಮನಸ್ಸು ಶಾಂತವಿದ್ದವನು ಸರ್ವಶಾಸ್ತ್ರಜ್ಞ, ಸರ್ವಶಾಸ್ತ್ರ ಕಲಿತರೂ ಮನಸ್ಸಿನ ಶಾಂತಿ ಇಲ್ಲದಿದ್ದರೆ ವ್ಯರ್ಥ.

ಪ್ರಶ್ನೆ : ನುತ ಬ್ರಹ್ಮಚರ್ಯವೆಂದರೇನು?

ಉತ್ತರ : ನುತ ಬ್ರಹ್ಮಚರ್ಯವೆಂದರೆ ಮುಟ್ಟಾದ ಮೊದಲಿನ ಐದು ದಿವಸ, ಗರ್ಭವತಿಯಾದಾಗ, ಹೆರಿಗೆಯಾಗಿ ಋತುಮತಿಯಾಗುವ ತನಕ, ಗಂಡ–ಹೆಂಡತಿ ಹುಟ್ಟಿದ ವಾರ, ತಿಥಿ, ನಕ್ಷತ್ರ, ಏಕಾದಶಿ, ದ್ವಾದಶಿ, ಹುಣ್ಣಿಮೆ, ಅಮವಾಸ್ಯೆ, ಮಹಾತ್ಮರ ಜಯಂತಿ, ಪುಣ್ಯಾರಾಧನೆ ಬಿಟ್ಟು ಉಳಿದ ದಿನಗಳಲ್ಲಿ ಸ್ವಸ್ತ್ರೀ ಅಥವಾ ಪುರುಷರೊಡನೆ ಕೂಡುವದು. ಇದು ಭೋಗದ ಕಡೆಗೆ ಲಕ್ಷ್ಯವಿಲ್ಲದಿದ್ದರೆ ಮಾತ್ರ ಸಾಧಿಸುವದು. ಮಕ್ಕಳು ಬೇಕೆಂದರೆ ಈ ನಿಯಮ, ಬೇಡವೆಂದರೆ ಸ್ತ್ರೀ ಪುರುಷ ವ್ಯವಹಾರವೇ ಇಲ್ಲ.

ಪ್ರಶ್ನೆ : ಮೊದಲಿನ ಋಷಿ ಆಶ್ರಮಗಳಲ್ಲಿ ಶಿಷ್ಯರು ಹೇಗೆ ತಯಾರಾಗುತ್ತಿದ್ದರು?

ಉತ್ತರ : ಮೊದಲಿನ ಋಷಿ ಆಶ್ರಮಗಳಲ್ಲಿ ಶಿಷ್ಯರು ಮೊದಲಿಗೆ ಆತ್ಮಜ್ಞಾನವನ್ನು ಹೊಂದುತ್ತಿದ್ದರು, ನಂತರ ಪ್ರಾರಬ್ಧಕ್ಕನುಸಾರವಾಗಿ ಗೃಹಸ್ಥ ಜೀವನ ಅಥವಾ ನೈಷ್ಠಿಕ ಬ್ರಹ್ಮಚಾರಿ ಜೀವನವನ್ನು ಸಾಗಿಸುತ್ತಿದ್ದರು.



ಪ್ರಶ್ನೆ : ಒಬ್ಬರು ಇನ್ನೊಬ್ಬರನ್ನು ಹೇಗೆ ಕಾಣಬೇಕು?

ಉತ್ತರ : ಒಬ್ಬರು ಇನ್ನೊಬ್ಬರನ್ನು ದೇವರಂತೆ ಕಾಣಬೇಕು ಮತ್ತು ಒಬ್ಬರು ಇನ್ನೊಬ್ಬರ ಸೇವೆ ಮಾಡಬೇಕು.

ಪ್ರಶ್ನೆ : ಭಾರತೀಯರ ತೃಪ್ತಿಯ ಪ್ರಣಾಲಿಯು ಯಾವದು?

ಉತ್ತರ : ಇದ್ದುದರಲ್ಲಿಯೇ ತೃಪ್ತಿಯನ್ನು ಹೊಂದುವದು ಭಾರತೀಯ ಅನುಭವ ಶಾಸ್ತ್ರದ ಪ್ರಣಾಲಿಯು. ಆದ್ದರಿಂದ ಭಾರತ ದೇಶದಲ್ಲಿ ಹುಚ್ಚರ ಸಂಖ್ಯೆ ಕಡಿಮೆ ಇದೆ. ಎಷ್ಟಿದ್ದರೂ ಕೊರತೆ ಎನಿಸುವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹುಚ್ಚರ ಸಂಖ್ಯೆಯು ಹೆಚ್ಚಾಗಿದೆ.

ಪ್ರಶ್ನೆ : ಯಾವಾಗ ಜೀವನವು ಸಹಕಾರದಿಂದ ನಡೆಯುವದು?

ಉತ್ತರ : ವಿಷಯ ವಿರತಿಯು ಬಂದಾಗಲೇ ಸಹಕಾರವು, ಇಬ್ಬರೂ ವಿಷಯ ವಿರತಿಯವರು ಇದ್ದರೆ ಸಹಕಾರವು ನಡೆಯುವದು. ಒಬ್ಬರು ವಿಷಯ ವಿರತಿಯುಳ್ಳವರು, ಇನ್ನೊಬ್ಬರು ವಿಷಯೀ ಇದ್ದರೆ ಸಹಕಾರವು ನಡೆಯುವದಿಲ್ಲ. ನಿಮ್ಮ ದಾರಿ ನಿಮಗೆ, ನಮ್ಮ ದಾರಿ ನಮಗೆ ಎಂಬ ಸ್ಥಿತಿ ಬರುತ್ತದೆ. ಸಹಕಾರಕ್ಕೆ ಸ್ವಾರ್ಥ ತ್ಯಾಗವು ಬೇಕಾಗುತ್ತದೆ. ಒಂದು ಊರೆಂದರೆ ಒಂದೇ ಮನೆಯಂತಿರಬೇಕು. ಈಗ ಒಂದು ಮನೆ ಹೋಗಿ ಒಂದು ಊರಾಗಿದೆ.

ಪ್ರಶ್ನೆ : ಹಣವು ಯಾವುದಕ್ಕಾಗಿ ಖರ್ಚಾಗಬೇಕು?

ಉತ್ತರ : ಹಣವು ರೋಗಪೀಡಿತರಿಗೆ, ಅನಾಥರಿಗೆ, ಅಂಗವಿಕಲರಿಗೆ ಸಹಾಯ ಮಾಡುವದಕ್ಕಾಗಿ ಮತ್ತು ಜ್ಞಾನದಾನವನ್ನು ಮಾಡುವದಕ್ಕಾಗಿ ಖರ್ಚಾಗಬೇಕು.

ಪ್ರಶ್ನೆ : ಸಮಾಜದಲ್ಲಿ ನಾವು ಹೇಗೆ ವ್ಯವಹರಿಸಬೇಕು?

ಉತ್ತರ : ಸಮಾಜದಲ್ಲಿ ನಾವು ವಿಶ್ವವೇ ನಮ್ಮ ಮನೆಯೆಂದು ವ್ಯವಹರಿಸಿದರೆ, ವಿಶ್ವವೇ ನಮ್ಮನ್ನು ತಮ್ಮವನೆಂದು ವ್ಯವಹರಿಸುವದು.

ಪ್ರಶ್ನೆ : ಜಾತಿಯ ಗದ್ದಲ ಯಾವಾಗ ಹೋಗುವದು?

ಉತ್ತರ : ನಾವೆಲ್ಲರೂ ಮಾನವರು, ನಾವೆಲ್ಲರೂ ಒಂದೇ ಎಂದು ತಿಳಿದು ನಡೆದರೆ ಜಾತಿಯ ಗದ್ದಲವು ಹೋಗುವದು.

ಪ್ರಶ್ನೆ : ಮನೆಯವರು ಯಾರು?

ಉತ್ತರ : ಮನೆಯೆಂದರೆ ಸ್ವರೂಪ, ಸ್ವರೂಪದವರೇ ಮನೆಯವರು. ಎಲ್ಲರ ಮನೆ ಆನಂದ ಸ್ವರೂಪವು, ಆನಂದ ಸ್ವರೂಪದಲ್ಲಿರುವವರೇ ಮನೆಯವರು.

ಪ್ರಶ್ನೆ : ಯಾರು ಪೂಜೆಗೊಳ್ಳುವರು?

ಉತ್ತರ : "ಗುಣಾಃ ಪೂಜಾ ಸ್ಥಾನಮ್, ನ ಚ ಲಿಂಗಂ ನ ಚ ವಯಃ" ಅಂದರೆ ಗುಣಗಳೇ ಪೂಜೆಯ ಸ್ಥಾನಗಳು, ವಯಸ್ಸು ಲಿಂಗಗಳು ಪೂಜೆಗೊಳ್ಳುವದಿಲ್ಲ.

ಪ್ರಶ್ನೆ : ತಾಯಿ ತಂದೆಗಳ ಋಣ ಹೇಗೆ ತೀರುವದು?

ಉತ್ತರ : ನಾವು ಸಣ್ಣವರಿದ್ದಾಗ ತಾಯಿ ತಂದೆಗಳು ನಮ್ಮ ಸೇವೆಯನ್ನು ಮಾಡಿರುವರು. ನಾವು ನಮ್ಮ ತಾಯಿ ತಂದೆಯವರ ಮುಪ್ಪಿನ ವಯಸ್ಸಿನಲ್ಲಿ ಅವರ ಸೇವೆಯನ್ನು ಮಾಡಿದರೆ ತಾಯಿ ತಂದೆಯವರ ಋಣವು ತೀರುವದು.

ಪ್ರಶ್ನೆ : ಮಕ್ಕಳೊಡನೆ ಹೇಗೆ ನಡೆದುಕೊಳ್ಳಬೇಕು?

ಉತ್ತರ : ಐದು ವರ್ಷದವರೆಗೆ ಮಕ್ಕಳನ್ನು ಪ್ರೇಮಿಸುವದು, ಹತ್ತು ವರ್ಷದವರೆಗೆ ಬುದ್ಧಿ ಹೇಳುವದು, ಹದಿನೈದು ವರ್ಷಕ್ಕೆ ಸರಿಸಮಾನವೆಂದು ತಿಳಿದುಕೊಳ್ಳಬೇಕು.

ಪ್ರಶ್ನೆ : ದೇವ ಋಣ ಮತ್ತು ಋಷಿ ಋಣ ಹೇಗೆ ತೀರುವದು?

ಉತ್ತರ : ಜೀವಿಗಳನ್ನು ಸಂತೋಷಗೋಳಿಸುವದರಿಂದ ದೇವ ಋಣವು ತೀರುವದು. ತಾನು ಋಷಿಯಾಗಿ ಉಳಿದವರನ್ನು ಋಷಿಗಳನ್ನಾಗಿ ಮಾಡಿದರೆ ಋಷಿ ಋಣವು ತೀರುವದು.

ಪ್ರಶ್ನೆ : ಬ್ರಹ್ಮನಿಷ್ಠರು ರಾಜ್ಯವಾಳುವದು ಅಪರೂಪವೇಕೆ?

ಉತ್ತರ : ಎಂಥವರು ಮತದಾರರಿರುವರೋ ಅವರು ಅಂಥವರನ್ನೇ ಆರಿಸಿ ತರುವರು. ಸಾಮಾನ್ಯವಾಗಿ ಮತದಾರರು ನಿಷಿದ್ಧ ವ್ಯವಹಾರದವರೇ ಬಹು ಸಂಖ್ಯಾತರು ಇರುವರು, ಅವರು ಪಾಪಿಗಳನ್ನೇ ಆರಿಸಿ ತರುವರು. ಆದ್ದರಿಂದ ಬ್ರಹ್ಮನಿಷ್ಠರು ರಾಜ್ಯವಾಳುವದು ಅಪರೂಪವಾಗಿದೆ.

ಪ್ರಶ್ನೆ : ನಿಜವಾದ ಪೂಜೆ ಯಾವದು?

ಉತ್ತರ : ದಿನಾಲು ಹತ್ತು ನಿಮಿಷ ಇನ್ನೊಬ್ಬರಿಗೆ ಉಪಕಾರ ಮಾಡುವ ವೃತ ಹಿಡಿಯಬೇಕು. ಇದೇ ನಿಜವಾದ ಪೂಜೆ.

ಪ್ರಶ್ನೆ : ನಾವು ಯಾರನ್ನು ಅನುಕರಿಸಬೇಕು?

ಉತ್ತರ : ಬಹಳ ಜನರು ಹೇಳಿದಂತೆ ಮಾಡುವದು ಮೂರ್ಖತನ, ಬಹಳ ಜನರು ತಿಳಿಗೇಡಿಗಳೇ ಇರುವರು. Majority Carries the point is only foolish idea. Following the realised souls is the only way. ಸುಖ ಹೊಂದುವದಕ್ಕಾಗಿ ಋಷಿಗಳನ್ನು ಅನುಕರಿಸಬೇಕು.

ಪ್ರಶ್ನೆ : ಗುರು ಕಾಣಿಕೆ ಯಾವದು?

ಉತ್ತರ : ಸ್ವರೂಪದಲ್ಲಿ ಉಳಿಯುವದೇ ಗುರು ಕಾಣಿಕೆ.

ಪ್ರಶ್ನೆ : ಹೇಗೆ ಮಾತನಾಡಿದರೆ ಸಂತೋಷವೆನಿಸುವದು?

ಉತ್ತರ : ಬೆಲ್ಲವಿಲ್ಲದಿದ್ದರೂ ಬೆಲ್ಲದಂಥ ಎರಡು ಮಾತು ಹೇಳಿದರೆ ಸಂತೋಷವೆನಿಸುವದು.



ಪ್ರಶ್ನೆ : ತಪಸ್ಸು ಸಿದ್ಧಿಸಿದುದರ ಗುರುತೇನು?

ಉತ್ತರ : ತಪಸ್ಸು ಸಿದ್ಧಿಸಿದ್ದರೆ ಪರರ ಪಿಶಾಚಿ ಕಾಯಿಲೆಗಳು ಗುಣವಾಗಬೇಕು.

ಪ್ರಶ್ನೆ : ವಿದ್ಯೆಯ ಗುರುತೇನು?

ಉತ್ತರ : ವಿದ್ಯೆ ಇದ್ದರೆ ವಿನಯ ಇರಬೇಕು. "ವಿದ್ಯಾ ವಿನಯೇನ ಶೋಭತೆ".

ಪ್ರಶ್ನೆ : ಶ್ರೇಷ್ಠವಾದ ಸಂಸ್ಕೃತಿ ಯಾವದು?

ಉತ್ತರ : ಸ್ವರೂಪ ಸಾಕ್ಷಾತ್ಕಾರವು ಶ್ರೇಷ್ಠವಾದ ಸಂಸ್ಕೃತಿಯು. "ಆತ್ಮಲಾಭಾತ್ ಅನ್ಯ ಲಾಭೋ ನ ವಿದ್ಯತೆ".

ಪ್ರಶ್ನೆ : ದೇವರ ಸ್ವಭಾವ ಯಾವದು?

ಉತ್ತರ : ತಪ್ಪು ಮಾಡುವದು ಮಾನವನ ಸ್ವಭಾವ, ಕ್ಷಮಿಸುವದು ದೇವರ ಸ್ವಭಾವ.

ಪ್ರಶ್ನೆ : ಕಾಯ್ದೆಭಂಗ ಚಳುವಳಿಯ ಪರಿಣಾಮವೇನು?

ಉತ್ತರ : ಕಾಯ್ದೆಭಂಗ ಚಳುವಳಿಯಿಂದ ಆಸ್ತಿ ಹಾಳು, ಉದ್ಯೋಗ ಹಾಳು, ಸ್ತ್ರೀಯರಿಗೆ ಕಾಟ, ಬಸ್ಸು ಸುಡುವದು, ಕಾಲೇಜು ಬಂದು ಮಾಡುವದು, ಇದು ಪ್ರಯೋಜನವಿಲ್ಲ. ಜೀವಿಗಳನ್ನು ಸಂತೋಷಗೊಳಿಸುವ ಚಳುವಳಿಯನ್ನು ಏಕೆ ಹೂಡಬಾರದು!

ಪ್ರಶ್ನೆ : ಜಗತ್ತಿಗೆ ಯಾರಿಂದ ಕಲ್ಯಾಣವಾಗುವದು?

ಉತ್ತರ : ತ್ಯಾಗಿಗಳಿಂದಲೇ ಜಗತ್ತಿಗೆ ಕಲ್ಯಾಣವಾಗುವದು. ಭೋಗಿಗಳಿಂದ ಜಗತ್ತಿಗೆ ಕಲ್ಯಾಣವಾಗುವದು ಎಂದಿಗೂ ಸಾಧ್ಯವಿಲ್ಲ.

ಪ್ರಶ್ನೆ : ಶಾಸ್ತ್ರ ಸಂಸ್ಕಾರವು ಹೇಗೆ ಆಗುವದು?

ಉತ್ತರ : ಐದರಿಂದ ಹದಿನೈದು ವರ್ಷದೊಳಗಿನ ಮಕ್ಕಳನ್ನು ಶಾಸ್ತ್ರಕ್ಕೆ ಕರೆದುಕೊಂಡು ಬಂದರೆ ಶಾಸ್ತ್ರ ಸಂಸ್ಕಾರವಾಗುವದು.

ಪ್ರಶ್ನೆ : ಭಾರತೀಯರ ಆಸ್ತಿ ಯಾವದು?

ಉತ್ತರ : ತತ್ವಜ್ಞಾನವೇ ಭಾರತೀಯರ ಆಸ್ತಿಯು.

ಪ್ರಶ್ನೆ : ಪ್ರಾಚೀನ ಶಿಕ್ಷಣ ಪದ್ಧತಿಗೂ ಆಧುನಿಕ ಶಿಕ್ಷಣ ಪದ್ಧತಿಗೂ ಇರುವ ಭೇದವೇನು?

ಉತ್ತರ : ಪ್ರಾಚೀನ ಶಿಕ್ಷಣ ಪದ್ಧತಿಯಲ್ಲಿ ನೀತಿಯುಕ್ತ ಜೀವನ, ಆಧುನಿಕ ಜೀವನ ಅನೀತಿಯ ಜೀವನ, ಪ್ರಾಚೀನ ಶಿಕ್ಷಣದ್ದು ತ್ಯಾಗಪೂರ್ವಕ ಭೋಗ, ಈಗಿನ ಜೀವನ ಏನು ಬೇಕಾದದ್ದನ್ನು ಮಾಡಿ ಚೈನಿ ಮಾಡುವದು. ಪ್ರಾಚೀನ ಶಿಕ್ಷಣ ಪದ್ಧತಿಯ ಗುರಿ ಆತ್ಮ ಸಾಕ್ಷಾತ್ಕಾರ. ಆಧುನಿಕ ಶಿಕ್ಷಣ ಪದ್ಧತಿಯ ಗುರಿ ವಿಷಯಗಳ ಅತಿ ಭೋಗವಿಲಾಸ.

*****

# ವೈರಾಗ್ಯ

ಪ್ರಶ್ನೆ : ವಿಷಯೇಂದ್ರಿಯ ಸಂಪರ್ಕ ಭೋಗದಿಂದ ಸುಖವು ಸಿಗುವದೇ?

ಉತ್ತರ : ವಿಷಯೇಂದ್ರಿಯ ಸಂಪರ್ಕ ಭೋಗವು ದಣಿವು ಬೇಸರಿಕೆಯಲ್ಲಿ ಕೊನೆಗೊಳ್ಳುವದು, ಇದು ತೋರಿ ಹೋಗುವ ನರದ ತುರಿಕೆಯು.

ಪ್ರಶ್ನೆ : ವ್ಯವಹಾರವನ್ನು ಬಿಟ್ಟು ನಿದ್ರೆಗೆ ಏಕೆ ಹೋಗುವರು?

ಉತ್ತರ : ಎಚ್ಚರಿಕೆಯಲ್ಲಿ ಹೊಂದಿದ ದಣಿವು, ಬೇಸರಿಕೆಗಳನ್ನು ಕಳೆದುಕೊಳ್ಳಲು ನಿದ್ರೆಗೆ ಹೋಗುವರು.

ಪ್ರಶ್ನೆ : ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಏನು ಮಾಡಬೇಕು?

ಉತ್ತರ : ವಿಷಯಗಳ ಮೋಹದಿಂದಲೇ ಸಮಾಜದಲ್ಲಿ ಅಶಾಂತಿ ಇದೆ. ವಿಷಯಗಳ ಮೋಹವನ್ನು ತೆಗೆದರೆ ಸಮಾಜದಲ್ಲಿಯ ಎಲ್ಲ ಅನಿಷ್ಟ ವ್ಯವಹಾರಗಳು ನಿಂತು ಹೋಗಿ ಶಾಂತಿಯು ನೆಲೆಸುವದು.

ಪ್ರಶ್ನೆ : ರಂಜನೆಯ ಪ್ರಭಾವವೇನು?

ಉತ್ತರ : ರಂಜನೆಯೆಲ್ಲವೂ ಕಾಮನ ಕದನವಾಗಿದೆ.

ಪ್ರಶ್ನೆ : ಸಲಕರಣೆಗಳು ಹೆಚ್ಚಿದ್ದರ ಪರಿಣಾಮವೇನು?

ಉತ್ತರ : ಸಲಕರಣೆಗಳು ಹೆಚ್ಚಿದಷ್ಟು ಮನಸ್ಸಿನೊಳಗೆ ಆಸೆಗಳು ಹೆಚ್ಚಾದವು. ಆ ಆಸೆಗಳನ್ನು ಪೂರೈಸಲಿಕ್ಕಾಗದೆ ಕೊರತೆಯೇ ಉಳಿಯಿತು.

ಪ್ರಶ್ನೆ : ಚಿಂತೆಯು ಯಾವಾಗ ಇರುತ್ತದೆ?

ಉತ್ತರ : ಯಾವದೇ ವಸ್ತುವನ್ನು ನಮ್ಮದೆಂದು ಅಂದಾಗ ಚಿಂತೆ ಹತ್ತುತ್ತದೆ.

ಪ್ರಶ್ನೆ : ಸುಖವು ಯಾವಾಗ ಇರುತ್ತದೆ?

ಉತ್ತರ : ಆಸೆ ಹೆಚ್ಚಿದಷ್ಟು ದುಃಖ ಹೆಚ್ಚು, ಆಸೆ ಕಡಿಮೆ ಇದ್ದಷ್ಟು ದುಃಖ ಕಡಿಮೆ, ಆಸೆ ಇಲ್ಲದಿದ್ದರೆ ಪೂರ್ಣ ಸುಖ. ಅದರಂತೆ ವಿಷಯಗಳು ಹೆಚ್ಚಿದ್ದಷ್ಟು ದುಃಖ ಹೆಚ್ಚು, ವಿಷಯಗಳು ಕಡಿಮೆಯಿದ್ದರೆ ದುಃಖ ಕಡಿಮೆ, ವಿಷಯಗಳೇ ಇಲ್ಲದಿದ್ದರೆ ಪೂರ್ಣ ಸುಖ. ಮನಸ್ಸು ನಿಶ್ಚಲವಾದಾಗ ಸುಖವು ಇರುವದು.



ಪ್ರಶ್ನೆ : ನೈತಿಕ ಅಧಃಪತನ ಏಕೆ ಆಗಿದೆ?

ಉತ್ತರ : ಭೋಗ ವಿಲಾಸ ಹೆಚ್ಚಾಗಿ ನೈತಿಕ ಅಧಃಪತನವಾಗಿದೆ. ಅತಿಯಾದ ಭೋಗ ಲಾಲಸೆಯೇ ಭ್ರಷ್ಟಾಚಾರಕ್ಕೆ ಕಾರಣವಾಗಿದೆ.

ಪ್ರಶ್ನೆ : ಯುದ್ಧಗಳ ಮೂಲ ಕಾರಣವೇನು?

ಉತ್ತರ : ಯುದ್ಧಗಳ ಮೂಲ ಕಾರಣ ವಿಷಯಾಸಕ್ತಿಯಾಗಿದೆ.

ಪ್ರಶ್ನೆ : ಹುಚ್ಚು ಯಾವಾಗ ಹಿಡಿಯುತ್ತದೆ?

ಉತ್ತರ : ನಿದ್ರೆಯನ್ನು ಕೆಡಿಸಿಕೊಂಡಾಗ ಹುಚ್ಚು ಹಿಡಿಯುತ್ತದೆ. ಆರಾಮದಿಂದ ನಿದ್ರೆ ಮಾಡಬೇಕೆಂಬ ಸಮಯದಲ್ಲಿ ವಿಷಯ ವಾಸನೆಯು ಬಂದು ನಿದ್ರೆಯು ಬಾರದಂತೆ ಮಾಡುತ್ತದೆ.

ಪ್ರಶ್ನೆ : ಏನೆಲ್ಲ ಅನಿಷ್ಟ ವ್ಯವಹಾರಗಳು ಏಕೆ?

ಉತ್ತರ : ಕಣ್ಣು ರೆಪ್ಪೆ ಬಡಿಯುವಷ್ಟು ವೇಳೆ ಇರುವ ವಿಷಯ ಸುಖಕ್ಕಾಗಿ ಏನೆಲ್ಲ ಅನಿಷ್ಟ ವ್ಯವಹಾರಗಳು, ದುಷ್ಟಕರ್ಮಗಳು.

ಪ್ರಶ್ನೆ : ವಿಷಯ ಭೋಗದಲ್ಲಿ ಬದಲಾವಣೆ ಏಕೆ?

ಉತ್ತರ : ನಾವು ಯಾವದೇ ವಿಷಯದ ಕಡೆಗೆ ಹೋಗುವಾಗ ಅದರಿಂದ ಸುಖ ಸಿಗುವದೆಂದೇ ಹೋಗುತ್ತೇವೆ. ಅದು ಸಾಕಾಗಿ ಮತ್ತೊಂದು ವಿಷಯದ ಕಡೆಗೆ, ಹೀಗೆ ಎಷ್ಟೇ ಇಂದ್ರಿಯಗಳನ್ನು, ಇಂದ್ರಿಯ ವಿಷಯಗಳನ್ನು ಬದಲಾವಣೆ ಮಾಡಿದರೂ ಸುಖವು ದೊರೆಯಲಾರದು. ಕೊನೆಗೆ ಮರಳಿ ದಣಿವಾಗಿ ನಿದ್ರೆಗೆ ಶರಣು ಬರುತ್ತೇವೆ. ವಿಷಯಗಳಲ್ಲಿ ಸುಖವಿಲ್ಲದ್ದರಿಂದಲೇ ದಣಿವನ್ನು ಹೊಂದುತ್ತೇವೆ. ಅದೇ ಅದರ ಗುರುತು. ಇಡೀ ದಿನವೂ ಅನೇಕ ವಿಷಯಗಳನ್ನು ಬದಲಾವಣೆ ಮಾಡಿದರೂ ಸುಖವು ಪ್ರಾಪ್ತವಾಗದೆ, ದಣಿವು ಬೇಸರಿಕೆಯೇ ಪ್ರಾಪ್ತವಾಗುವದು. ಗಾಢವಾದ ನಿದ್ರೆಯಲ್ಲಿ ಬದಲಾವಣೆಗಳಿಲ್ಲದೆ ನಿರ್ವಿಷಯರಾಗಿ ಸುಖವನ್ನು ಪಡೆಯುತ್ತೇವೆ.

ಪ್ರಶ್ನೆ : ವಿಜ್ಞಾನದ ಪ್ರಗತಿ ಏನು?

ಉತ್ತರ : ವಿಜ್ಞಾನವು ಅಣು ವಿಭಜನೆಗೆ ನಿಂತಿದೆ. ಅಣುವು ಜಡವಿದೆ, ಆದ್ದರಿಂದ ಅದು ಸುಖವಲ್ಲ. ಅದು ತನ್ಮಾತ್ರೆಗಳನ್ನು ಶೋಧಿಸಿಲ್ಲ. ಮೊದಲು ಪ್ರಕೃತಿ, ನಂತರ ಮಹತತ್ವ, ನಂತರ ಅಹಂಕಾರ, ತನ್ಮಾತ್ರೆಗಳು, ಕಡೆಗೆ ಪಂಚಭೂತಗಳು ಮತ್ತು ಶರೀರ ಮೊದಲಾದವುಗಳು. ವಿಜ್ಞಾನವು ಆನಂದದ ವಿಭಜನೆಯನ್ನು ಇನ್ನೂ ಮಾಡಿಲ್ಲ.

ಪ್ರಶ್ನೆ : ವಿಷಯ ದೋಷ ದರುಶನಕ್ಕೆ ಪ್ರಮಾಣವೇನು?

ಉತ್ತರ : ಸ್ತ್ರೀ ಪುರುಷರನ್ನು, ವಿಷಯಗಳನ್ನು ನೋಡಿದಾಗ ಮನಸ್ಸು ವಿಕಾರವಾದರೆ

ಇನ್ನೂ ವಿಷಯ ದೋಷ ದರುಷನವು ಪೂರ್ಣವಾಗಿ ಆಗಿಲ್ಲವೆಂದರ್ಥ. ನಾವು ಸಣ್ಣ ಮಕ್ಕಳಂತೆ ಸ್ತ್ರೀ ಪುರುಷರ ಮಧ್ಯದಲ್ಲಿ ವಿಕಾರವಾಗದಂತೆ ಇರಬೇಕು. ಇದು ಅಭ್ಯಾಸದಿಂದ ಬರುವದು.

ಪ್ರಶ್ನೆ : ಪಿಶಾಚಿಗಳು ಯಾರು?

ಉತ್ತರ : ವಿಷಯಗಳ ಆಸೆ ಉಳ್ಳವರೆಲ್ಲರೂ ಪಿಶಾಚಿಗಳೇ, ಪಿಶಾಚಿ ಸ್ಥಿತಿಯನ್ನು ಮೀರಬೇಕಾದರೆ ವಿಷಯ ವಾಸನೆಗಳನ್ನು ಕಳೆದುಕೊಳ್ಳಬೇಕು.

ಪ್ರಶ್ನೆ : ವ್ಯಾವಹಾರಿಕ ಜಾಗ್ರದ ಬೆಲೆ ಏನು?

ಉತ್ತರ : ದಣಿವು, ಬೇಸರ, ಇದೇ ವ್ಯಾವಹಾರಿಕ ಜಾಗ್ರದ ಬೆಲೆ.

ಪ್ರಶ್ನೆ : ವ್ಯಾವಹಾರಿಕ ಜ್ಞಾನವನ್ನು ಪೂರ್ತಿಗೊಳಿಸುವದು ಸಾಧ್ಯವಿದೆಯೇ?

ಉತ್ತರ : ವ್ಯಾವಹಾರಿಕ ಜ್ಞಾನವನ್ನು ಪೂರ್ತಿಗೊಳಿಸುವದು ಸಾಧ್ಯವಿಲ್ಲ.

ಪ್ರಶ್ನೆ : ಅತಿ ನೋಯಿಸುವ ಶಸ್ತ್ರ ಯಾವದು?

ಉತ್ತರ : ಆಸೆಯೆಂಬ ಬಾಣ.

ಪ್ರಶ್ನೆ : ವಿಷಮ ಯಾವದು?

ಉತ್ತರ : ಸಂಸಾರವು.

ಪ್ರಶ್ನೆ : ಏಕಾನ್ನ ಭೋಜನವು ಏಕೆ ಬೇಸರವಾಗುವದು?

ಉತ್ತರ : ಹಸಿವೆಯು ಮುಗಿಯುವದಕ್ಕಿಂತ ಮೊದಲೇ ಏಕಾನ್ನವು ಬೇಸರವಾಗುವದು. ಏಕೆಂದರೆ ಅದರಲ್ಲಿ ಸುಖವಿಲ್ಲ.

ಪ್ರಶ್ನೆ : ಸ್ತ್ರೀ ಪುರುಷರ ಭೋಗವು ಹೇಗೆ ಇರುವದು?

ಉತ್ತರ : ಸ್ತ್ರೀ ಪುರುಷರ ಭೋಗವು ಪಶು ಪಕ್ಷಿಗಳ ಭೋಗದಂತೆ ಇರುವದು. ಮೂತ್ರ ಬಿಟ್ಟಾಗ ಗುಳು ಗುಳು ಆದಂತೆ ಇಂದ್ರ ಇಂದ್ರಾಣಿಯರ ಭೋಗವು ಇರುವದು.

ಪ್ರಶ್ನೆ : ದೇಹಭಾವದಿಂದ ಸುಖ ಸಿಗುವದೇ?

ಉತ್ತರ : ದೇಹಭಾವವಿದ್ದಾಗ ಹಸಿವು, ನೀರಡಿಕೆ, ಚಳಿ, ಬಿಸಿಲು, ಸೆಕೆ, ಅಪಮಾನ, ರೋಗ, ಮುಪ್ಪು, ವಿಷಯಗಳ ಆಸೆ ಮತ್ತು ಭಯ ಇವುಗಳಿಂದ ದುಃಖವಾಗುವದು. ಗಾಢವಾದ ನಿದ್ರೆಯಲ್ಲಿ ದೇಹಭಾವ ಇರುವದಿಲ್ಲ, ಆನಂದವೇ ಇರುವದು. ಜಾಗ್ರದಲ್ಲಿ ದೇಹಭಾವವನ್ನು ತೆಗೆಯಿರಿ. ಆನಂದವೇ ಇರುವದು.

ಪ್ರಶ್ನೆ : ವಿಷಯದ ಮಾಹಿತಿಯಿಂದ ಏನಾಗುವದು?

ಉತ್ತರ : ವಿಷಯದ ಮಾಹಿತಿಯಿಂದ ವಿಷಯದ ನೆನಪು ಆಗುವದು. ವಿಷಯದ



ನೆನಪಿನಿಂದ ವಿಷಯದ ಸಂಗವಾಗುವದು. ಇದರಿಂದ ವಿಷಯದ ಇಚ್ಛೆಯಾಗುವದು. ವಿಷಯವು ಸಿಗುವದಕ್ಕಾಗಿ ಏನಾದರೂ ಅಡ್ಡಿಯಾದರೆ ಕ್ರೋಧ ಉಂಟಾಗುವದು. ಕ್ರೋಧದಿಂದ ಸಮ್ಮೋಹ, ಸಮ್ಮೋಹದಿಂದ ಸ್ಮೃತಿ ವಿಭ್ರಮ, ಇದರಿಂದ ಬುದ್ಧಿ ನಾಶವಾಗಿ ಜೀವನು ನಾಶ ಹೊಂದುತ್ತಾನೆ.

ಪ್ರಶ್ನೆ : ವಿಷಯ ವ್ಯವಹಾರವು ಹೇಗಿರುವದು?

ಉತ್ತರ : ವಿಷಯ ವ್ಯವಹಾರವು ಕಷ್ಟಸಾಧ್ಯ, ವೈರಸ್ಯ ಕಾರಣ, ಅತ್ಯಲ್ಪ ಅನಿತ್ಯ ಸುಖ, ಅರಿಷಡ್ವರ್ಗ ಸನ್ನಿಹಿತ, ನಿತ್ಯಾನಂದ ಪ್ರತಿಬಂಧಕ, ಜ್ಞಾನ ಪ್ರತಿಬಂಧಕವಿರುವದು.

ಪ್ರಶ್ನೆ : ತಂಬಾಕು, ಚಹ, ಕಾಫಿ ಸೇವನೆಯಿಂದ ಏನಾಗುವದು?

ಉತ್ತರ : ತಂಬಾಕು, ಕಾಫಿ, ಚಹ ಸೇವನೆಯಿಂದ ಕ್ಯಾನ್ಸರ್ ಉಂಟಾಗುವದು. ಚಹ ಸಿಗರೇಟುಗಳಿಂದ ರಕ್ತಸುಟ್ಟು ದಮ್ಮು ಹೆಚ್ಚಾಗುವದು.

ಪ್ರಶ್ನೆ : ತ್ರಿಕಾಲ ಜ್ಞಾನವು ಜೀವನನ್ನು ಸಂಸಾರ ಬಂಧನದಿಂದ ಮುಕ್ತ ಮಾಡಲು ಸಾಧ್ಯವಿದೆಯೇ?

ಉತ್ತರ : ತ್ರಿಕಾಲ ಜ್ಞಾನವು ಜೀವನನ್ನು ಸಂಸಾರ ಬಂಧನದಿಂದ ಮುಕ್ತ ಮಾಡಲು ಸಾಧ್ಯವಿಲ್ಲ.

ಪ್ರಶ್ನೆ : ಅಧ್ಯಾತ್ಮಿಕ ತಾಪವೆಂದರೇನು?

ಉತ್ತರ : ಅಧ್ಯಾತ್ಮಿಕ ತಾಪವೆಂದರೆ ಶರೀರ ಭಾವದಿಂದ ಆಗುವ ತಾಪ.

ಪ್ರಶ್ನೆ : ಆದಿಭೌತಿಕ ತಾಪವೆಂದರೇನು?

ಉತ್ತರ : ಆದಿಭೌತಿಕ ತಾಪವೆಂದರೆ ಪ್ರಾಣಿಗಳಿಂದ, ದುಷ್ಟ ಸಂಬಂಧಿಕರಿಂದ, ಚಳಿ, ಮಳೆ, ಬಿಸಿಲು, ಸಿಡಿಲು, ಬಿರುಗಾಳಿ, ಭೂಕಂಪ, ಜ್ವಾಲಾಮುಖಿ, ಪ್ರವಾಹ, ಬೆಂಕಿ ಇವುಗಳಿಂದ ಆಗುವ ತಾಪ.

ಪ್ರಶ್ನೆ : ಆದಿ ದೈವಿಕ ತಾಪವೆಂದರೇನು?

ಉತ್ತರ : ಆದಿ ದೈವಿಕ ತಾಪವೆಂದರೆ ಸೂಕ್ಷ್ಮ ಶರೀರಗಳಿಂದ ಆಗುವ ತಾಪ.

ಪ್ರಶ್ನೆ : ಉಂಡ ಸುಖವು ಏಕೆ ಉಳಿಯುವದಿಲ್ಲ?

ಉತ್ತರ : ಏಕೆಂದರೆ ಸುಖ ಯಾವದರಿಂದ ಉಂಟಾಯಿತು ಎಂಬುದು ತಿಳಿದಿಲ್ಲ.

ಪ್ರಶ್ನೆ : ಸುಖವು ಬೇಸರವಾಗುವದೇ?

ಉತ್ತರ : ಸುಖವು ಬೇಸರವಾಗುವದಿಲ್ಲ. ನಿದ್ರೆಯು ಯಾರಿಗೆ ಬೇಸರವಾಗಿದೆ? ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಲ್ಲವೂ ಬೇಸರವಾಗುವವು. ಏಕಾನ್ನ ಮತ್ತು ವ್ಯಂಜಕ ಪದಾರ್ಥಗಳು ಬೇಸರವಾಗುವವು. ಆದ್ದರಿಂದ ವಿಷಯ ಭೋಗ ದುಃಖದಾಯಕವು.

ಪ್ರಶ್ನೆ : ಜನನ ಮರಣಗಳ ದುಃಖ ಹೇಗೆ ಇರುವದು?

ಉತ್ತರ : ಜನನ ಮರಣಗಳಿಂದ ಅತಿ ಭೀಕರ ದುಃಖವಾಗುವದು. ಜನನದ ಕಾಲಕ್ಕೆ ಕಂಬೆಚ್ಚಿನಲ್ಲಿ ಹಾಕಿ ಎಳೆದಂತಾಗುವದು. ಪ್ರಸೂತಿ ವಾಯುವಿನಿಂದ ಸ್ತ್ರೀಯು ಹಡೆಯುವಾಗ ಎಚ್ಚರ ತಪ್ಪಬಹುದು. ಎಚ್ಚರ ತಪ್ಪಿ ತಾಯಿ ಮತ್ತು ಮಗು ಸಾಯಬಹುದು. ಮರಣವು ಅತಿ ದುಃಖದಾಯಕವು. ಮರಣದ ಕಾಲಕ್ಕೆ ಹಲ್ಲು ಕಡಿಯುವರು. ಕೈಕಾಲು ಎಳೆದುಕೊಳ್ಳುವರು, ಕಣ್ಣುತಿರುವುವರು.

ಪ್ರಶ್ನೆ : ಕನಸು ಜಾಗ್ರಗಳಲ್ಲಿ ದುಃಖ ಏಕೆ ಇದೆ?

ಉತ್ತರ : ಕನಸು ಜಾಗ್ರಗಳಲ್ಲಿ ದೇಹ ಮತ್ತು ಜಗತ್ತಿನ ಭಾವ ಇರುವದರಿಂದ ದುಃಖವಿದೆ.

ಪ್ರಶ್ನೆ : ಗಾಢನಿದ್ರೆಯಲ್ಲಿ ಸುಖ ಏಕೆ ಇದೆ?

ಉತ್ತರ : ಗಾಢನಿದ್ರೆಯಲ್ಲಿ ಬರೇ ಸ್ವರೂಪ ಇರುವದು, ಆದ್ದರಿಂದ ಸುಖ ಇರುವದು.

ಪ್ರಶ್ನೆ : ವಿಷಯ ಏನು ಮಾಡುವದು?

ಉತ್ತರ : ಅದು ಜಗಳ ಹಚ್ಚುವದು. ಕುತ್ತಿಗೆ ಕೊಯ್ಯಿಸುವದು, ಕುತ್ತಿಗೆ ಹಿಸುಕಿಸುವದು, ವಿಷ ಹಾಕಿಸುವದು.

ಪ್ರಶ್ನೆ : ಜಾಗ್ರದ ಪರಿಣಾಮವೇನು?

ಉತ್ತರ : ಜಾಗ್ರವು ಬೇಸರವಾಗುವದು. ಜಾಗ್ರದ ಗುರು-ಶಿಷ್ಯರ ಬೋಧೆಯು ಬೇಸರವಾಗುವದು.

ಪ್ರಶ್ನೆ : ವೈಜ್ಞಾನಿಕ ಪ್ರಗತಿಯ ಪರಿಣಾಮವೇನು?

ಉತ್ತರ : ವಿಜ್ಞಾನವು ಅಸಂಖ್ಯ ಭೋಗದ ವಸ್ತುಗಳನ್ನು ಪೂರೈಸುವದು, ಸೌಕರ್ಯಗಳಿಂದ ಶಿತೋಷ್ಣಗಳನ್ನು ತಡೆಯಲಿಕ್ಕೆ ಆಗುವದಿಲ್ಲ. ಕೃತ್ರಿಮ ಆಹಾರ ವಿಹಾರದಿಂದ ಅಸಂಖ್ಯ ರೋಗಗಳು ಬಂದಿವೆ. ಅತಿ ಭೋಗದಿಂದ ರೋಗಗಳು ಬರುವವು. ವೈಜ್ಞಾನಿಕ ಔಷಧಗಳು ದೇಹಕ್ಕೆ ವಿಷಕಾರಕವಾಗುವವು. ಭೋಗದ ವಸ್ತುಗಳು ಸಿಗದಿದ್ದರೆ ಮಾನಸಿಕ ಅಶಾಂತಿ. ಆದ್ದರಿಂದ ವಿಜ್ಞಾನದಿಂದ ಶಾರೀರಿಕ ಮತ್ತು ಮಾನಸಿಕ ದುಃಖವಾಗುವದು. ಅದು ಮೋಹ, ಈರ್ಷೆ, ಸ್ಪರ್ಧೆಗಳಿಗೆ ಕಾರಣೀಭೂತವಾಗುವದು. ವೈಜ್ಞಾನಿಕ ಸಂಶೋಧನೆಗಳೆಲ್ಲ ಅಮಾನುಷ ಕೃತಿಯಲ್ಲಿ ಪರಿಸಮಾಪ್ತಿಯಾಗುತ್ತವೆ. ಪದಾರ್ಥ ವಿಜ್ಞಾನವು ಸುಮ್ಮನೆ ಜಗತ್ತಿನ ನೀರು, ಹವೆ, ಭೂಮಿಗಳನ್ನು ದೂಷಿತಗೊಳಿಸುತ್ತಿದೆ. ನೀತಿಯು ಮಾಯವಾಗುತ್ತ ನಡೆದಿದೆ. ಚೈನಿಯಿಂದ ಶರೀರದ ಆರೋಗ್ಯ ಕೆಟ್ಟಿದೆ. ಕೋರ್ಟು ಕಚೇರಿಗಳು ಹೆಚ್ಚಾಗಿವೆ. ವಿಷಯಾಸಕ್ತಿಯಿಂದ ಮನಸ್ಸು ಅಸಮಾಧಾನವಾಗಿದೆ.



ಪ್ರಶ್ನೆ : ನಮ್ಮ ವೈರಿಗಳು ಯಾರು?

ಉತ್ತರ : ರಾಗದ್ವೇಷಗಳೇ ನಮ್ಮ ವೈರಿಗಳು, ರಾಗಕ್ಕೆ ಪ್ರತಿಕೂಲವಾದರೆ ದ್ವೇಷ.

ಪ್ರಶ್ನೆ : ಇಂದಿನ ಸಮಾಜದಲ್ಲಿ ಸಹಕಾರ ಏಕೆ ಇಲ್ಲ?

ಉತ್ತರ : ವಿಷಯ ಸುಖಬುದ್ಧಿಯಿಂದ ಸಹಕಾರವಿಲ್ಲ. ವಿಷಯ ಸುಖಬುದ್ಧಿ ನಾಶವಾದರೆ ಮಾತ್ರ ನಾವು ಸಹಕಾರದಿಂದ ಜೀವನ ನಡೆಸಬಲ್ಲೆವು. ವಿಷಯ ಸುಖಬುದ್ಧಿಯಿಂದಲೇ ವ್ಯಕ್ತಿ ವ್ಯಕ್ತಿಗಳ ನಡುವೆ, ದೇಶ ದೇಶಗಳ ನಡುವೆ ತಿಕ್ಕಾಟಗಳಿವೆ.

ಪ್ರಶ್ನೆ : ವಿಷಯಗಳ ಭೋಗ ದುಃಖಮಯ ಹೇಗೆ?

ಉತ್ತರ : ವಿಷಯಗಳ ಪಾಲನೆ ಪೋಷಣೆ, ಸಂರಕ್ಷಣೆ ದುಃಖಮಯ, ವಿಷಯಗಳ ಭೋಗದಿಂದ ರೋಗ ಉಂಟಾಗುವದು. ವಿಷಯಗಳು ಜೀರ್ಣವಾಗುವವು, ನಾಶವಾಗುವವು. ಶರೀರವು ಜೀರ್ಣವಾಗುವದು, ನಾಶವಾಗುವದು. ವಿಷಯುಗಳನ್ನು ಗಳಿಸುವದಕ್ಕಾಗಿ ಮನಸ್ಸಿಗೆ ಚಿಂತೆ, ದೇಹಕ್ಕೆ ದುಃಖವಾಗುವದು.

ಪ್ರಶ್ನೆ : ಯಾವದು ಸುಖಮಯವೆನ್ನುವಿರೋ ಅದನ್ನು ಆ ಇಂದ್ರಿಯಕ್ಕೆ ಜೋಡಿಸಿದರೆ ಏನಾಗುವದು?

ಉತ್ತರ : ನಾಲಿಗೆಯ ಮೇಲೆ ಕಾಯಂ ತಂಬಾಕು ಇಟ್ಟರೆ ಅದೆಲ್ಲವೂ ಬೇಸರವಾಗುವದು.

ಪ್ರಶ್ನೆ : ಮೊದಲನೆಯ ತುತ್ತಿನ ಆನಂದವು ಎರಡನೆಯ ತುತ್ತಿಗೆ ಇಲ್ಲ, ಎರಡನೆಯ ತುತ್ತಿನ ಆನಂದವು ಮೂರನೆಯ ತುತ್ತಿಗೆ ಇಲ್ಲ, ಏಕೆ?

ಉತ್ತರ : ವಿಷಯಗಳನ್ನು ಭೋಗಿಸುತ್ತ ಹೋದಂತೆ ಅವು ಬೇಸರವಾಗುತ್ತ ಹೋಗಿ, ಕೊನೆಯ ತುತ್ತು 'ವಯಕ್' ಎನಿಸುವದು.

ಪ್ರಶ್ನೆ : ಶರೀರವೆಂದರೆ ಇಂದ್ರಜಾಲದ ಆಟ ಹೇಗೆ?

ಉತ್ತರ : ಶರೀರಕ್ಕೆ ಅಸಂಖ್ಯ ರಂಧ್ರಗಳಿದ್ದರೂ ವಾಯುವು ಹೊರಗೆ ಹೋಗುವದಿಲ್ಲ, ಅದು ಹೊರಗೆ ಹೋಗುವ ಕಾಲ ಬಂದಾಗ ನಿಲ್ಲುವದಿಲ್ಲ.

ಪ್ರಶ್ನೆ : ವಿಷಯ ವ್ಯಾಮೋಹವು ಹೆಚ್ಚಿನ ವಿಷ ಹೇಗೆ?

ಉತ್ತರ : ವಿಷವು ಒಂದು ಶರೀರವನ್ನು ನಾಶ ಮಾಡುವದು, ವಿಷಯ ವ್ಯಾಮೋಹವು ಅನೇಕ ಶರೀರಗಳನ್ನು ನಾಶ ಮಾಡುವದು.

ಪ್ರಶ್ನೆ : ಹುಚ್ಚು ಹೇಗೆ ಹಿಡಿಯುವದು?

ಉತ್ತರ : ಕಾಮ, ಕ್ರೋಧಗಳಿಂದ ಮತ್ತು ಅಮಲಿನ ಪದಾರ್ಥಗಳ ಸೇವನೆಯಿಂದ ಹುಚ್ಚು ಹಿಡಿಯುವದು.

ಪ್ರಶ್ನೆ : ಮೈಥುನದ ಪರಿಣಾಮವೇನು?

ಉತ್ತರ : ಮೈಥುನದಿಂದ ವೀರ್ಯವು ಸೋರಿ, ಶರೀರವು ರೋಗಕ್ಕೆ ಗುರಿಯಾಗುವದು.

ಪ್ರಶ್ನೆ : ದೇಹವು ಹೇಗೆ ಇದೆ?

ಉತ್ತರ : ದೇಹವು ಮಲದ ರಾಶಿಯು, ಅದನ್ನು ಸ್ವಚ್ಛ ಮಾಡುವದು ಎಂದಿಗೂ ಸಾಧ್ಯವಿಲ್ಲ. ಮನಸ್ಸನ್ನು ಸ್ವಚ್ಛ ಮಾಡಿಕೊ.

ಪ್ರಶ್ನೆ : ಶೃಂಗಾರ ಚಟದ ಪರಿಣಾಮವೇನು?

ಉತ್ತರ : ಶೃಂಗಾರವು ಮೂರು ಲೋಕಗಳನ್ನು ಹಾಳು ಮಾಡುತ್ತದೆ. ರಂಜನೆ ಪ್ರಾರಂಭವಾದರೆ ಅಧ್ಯಾತ್ಮವು ಮುಕ್ತಾಯವಾದಂತೆಯೇ.

ಪ್ರಶ್ನೆ : ವಿಷಯಗಳು ಹೇಗಿರುವವು?

ಉತ್ತರ : ವಿಷಯಗಳನ್ನು ಕಂಡಕೂಡಲೆ ಅವು ಆನಂದದಾಯಕವೆನಿಸುವವು. ಉಂಡಾಗ ಎಲ್ಲವೂ ವಿರಸವೆನಿಸುವವು.

ಪ್ರಶ್ನೆ : ಬಾಳ್ವೆಯು ಏನು ಮಾಡುವದು?

ಉತ್ತರ : ಬಾಳ್ವೆ ಯಿಂದ ಹುಚ್ಚು ಹಿಡಿಯುವದು, ನಿದ್ರೆ ಮಾಡಿದರೆ ಹುಚ್ಚು ಬಿಡುವದು.

****



# ಜ್ಞಾನ

ಪ್ರಶ್ನೆ : ಆನಂದ ಸ್ವರೂಪ ಯಾವದು?

ಉತ್ತರ : ಮನಸ್ಸು ಜಾಗ್ರದ ವ್ಯವಹಾರದಿಂದ ಸ್ವಾಭಾವಿಕವಾಗಿ ದಣಿವನ್ನು ಹೊಂದಿ, ಜಾಗ್ರದ ವ್ಯವಹಾರವು ದಣಿವು ಕೊಡತಕ್ಕದ್ದು ಎಂದು ತಿಳಿಯದೆಯೇ ಗಾಢನಿದ್ರೆಯಲ್ಲಿ ತನ್ನ ಎಲ್ಲ ವಾಸನೆಗಳೊಡನೆ ಅಜ್ಞಾನದಲ್ಲಿ ಅಡಗಿರುತ್ತದೆ. ಜಾಗ್ರದ ವ್ಯವಹಾರವು ದಣಿವನ್ನು ಕೊಡುವಂಥದ್ದು ಎಂಬುದು ತಿಳಿಯದೆ ಮನಸ್ಸು ಸುಖವನ್ನು ಪಡೆಯಲು ಮತ್ತೆ ಬಹಿರ್ಮುಖವಾಗಿ ಜಾಗ್ರಕ್ಕೆ ಬರುತ್ತದೆ. ಗಾಢನಿದ್ರೆಯಲ್ಲಿ ಮನಸ್ಸು ತನ್ನ ಎಲ್ಲ ವಾಸನೆಗಳೊಡನೆ ಅಜ್ಞಾನದಲ್ಲಿ ಅಡಗಿದಾಗ ಅನುಭವಕ್ಕೆ ಬಂದ ಆನಂದವು ತನ್ನ ನಿಜ ಸ್ವರೂಪದ್ದೇ. ಏಕೆಂದರೆ ಗಾಢನಿದ್ರೆಯಲ್ಲಿ ತನ್ನ ಬಿಟ್ಟು ಬೇರೆ ಏನೂ ಇಲ್ಲ. ಅದರಂತೆ ರಾಗದ ವಿಷಯವು ಸಿಕ್ಕಾಗ ಮನಸ್ಸು ಕ್ಷಣಮಾತ್ರವಾಗಿ ನಿಂತಾಗ ಸ್ವರೂಪಾನಂದವೇ ಪ್ರತಿಫಲಿಸಿ ಆನಂದವು ಅನುಭವಕ್ಕೆ ಬರುತ್ತದೆ. ಆದ್ದರಿಂದ ಆನಂದವು ಮಾತ್ರ ತನ್ನ ಸ್ವರೂಪದ್ದೇ. ಆದರೆ ಅಜ್ಞಾನದಿಂದ ಗಾಢನಿದ್ರೆ ಮತ್ತು ವಿಷಯಗಳೆಂಬ ಉಪಾಧಿಗಳ ಮೂಲಕ ಸುಖ ಸಿಗುತ್ತದೆ ಎಂಬ ಭ್ರಾಂತಿಯಾಗಿದೆ. ಆದ್ದರಿಂದ ತಾನೇ ಆನಂದ ಸ್ವರೂಪನು.

ಪ್ರಶ್ನೆ : ಸ್ವಧರ್ಮ ಯಾವದು?

ಉತ್ತರ : ಆನಂದರೂಪವಾದ ತನ್ನ ಸ್ವರೂಪವೇ ಸ್ವಧರ್ಮವು.

ಪ್ರಶ್ನೆ : ಪರಧರ್ಮ ಯಾವದು?

ಉತ್ತರ : ದೇಹ, ಇಂದ್ರಿಯ, ಮನ, ಬುದ್ಧಿ, ಚಿತ್ತ, ಅಹಂಕಾರಗಳ ಧರ್ಮವೇ ಪರಧರ್ಮವು.

ಪ್ರಶ್ನೆ : ಜಡ, ಜಡಾಜಡ, ಅಜಡ ದೃಶ್ಯಗಳೆಂದರೇನು?

ಉತ್ತರ : ದೇಹವು ಜಡವಿರುವದು, ಅದನ್ನು ನಾವು ತಿಳಿಯುವೆವು. ಆದ್ದರಿಂದ ದೇಹವು ಜಡದೃಶ್ಯವು. ಮನಸ್ಸು ಜಡಾಜಡ ದೃಶ್ಯವು. ಅದು ಆತ್ಮನಿಂದ ಚೈತನ್ಯವನ್ನು ಪಡೆದು, ಉಳಿದ ವಸ್ತುಗಳನ್ನು ಬೆಳಗುವದು. ಅಜ್ಞಾನ ಮತ್ತು ಜ್ಞಾನವನ್ನು ತಿಳಿಯುವ ರೂಪದಿಂದ ಇರುವದೇ ಅಜಡ ದೃಶ್ಯವು. ನೀನು ದೃಶ್ಯ ವಿಲಕ್ಷಣನು.

ಪ್ರಶ್ನೆ : ಪ್ರಪಂಚವು ಯಾರಿಗೆ ಕಾಣಿಸುವದು?

ಉತ್ತರ : ಪ್ರಪಂಚವು ಮನಸ್ಸಿಗೆ ಕಾಣಿಸುವದು, ನಿನಗೆ ಕಾಣಿಸುವದಿಲ್ಲ. ಮನಸ್ಸು ನಿದ್ರೆಯಲ್ಲಿ ಅಡಗಿದಾಗ ನೀನಿರುವಿ. ಆಗ ನಿನಗೆ ಜಗತ್ತು ಕಾಣಿಸುತ್ತದೆಯೇ? ಇಲ್ಲ.

ಪ್ರಶ್ನೆ : ಶರೀರ ಮತ್ತು ಮನಸ್ಸಿನ ಪರಿಣಾಮ ಆತ್ಮನ ಮೇಲೆ ಆಗುವದೇನು?

ಉತ್ತರ : ಶರೀರದ ರೋಗಾದಿಗಳು ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವವು. ಮನಸ್ಸಿನ ಕಲ್ಪನೆಗಳ ಚಿಂತೆಯು ಶರೀರದ ಮೇಲೆ ಪರಿಣಾಮ ಮಾಡುವದು. ಆದರೆ ಶರೀರ ಮತ್ತು ಮನಸ್ಸಿನ ಪರಿಣಾಮ ಆತ್ಮನ ಮೇಲೆ ಆಗುವದಿಲ್ಲ.

ಪ್ರಶ್ನೆ : ಇರುವು, ಅರಿವು, ಆನಂದ ಯಾವಾಗ ಪ್ರಕಟವಾಗುವವು?

ಉತ್ತರ : ಇರುವು ಎಲ್ಲರಲ್ಲಿಯೂ ಪ್ರಕಟವಾಗುವದು, ಅರಿವು ಅಂತಃಕರಣದಲ್ಲಿ ಮಾತ್ರ ಪ್ರಕಟವಾಗುವದು. ಆನಂದವು ಅಂತಃಕರಣದ ನಿಶ್ಚಲತೆಯಲ್ಲಿ ಮಾತ್ರ ಪ್ರಕಟವಾಗುವದು. ಅಂತಃಕರಣದ ಚಂಚಲತೆಯಲ್ಲಿ ಪ್ರಕಟವಾಗುವದಿಲ್ಲ.

ಪ್ರಶ್ನೆ : ಸುಖವು ಎಲ್ಲಿರುವದು?

ಉತ್ತರ : ಸುಖವು ತನ್ನೊಳಗೇ ಇರುವದು, ನಿದ್ರೆಯ ಆರಾಮ ನಮ್ಮೊಳಗೇ ಇರುವದು, ಅದಕ್ಕಾಗಿ ಬಡಿದಾಡುವ ಪ್ರಸಂಗವಿಲ್ಲ.

ಪ್ರಶ್ನೆ : ನಂದಾದೀಪ ಯಾವದು?

ಉತ್ತರ : ಎಂದೆಂದಿಗೂ ಆರದ ಚೈತನ್ಯ ಸ್ವರೂಪನಾದ ನಂದಾದೀಪನೇ ತಾನು, ಅಂದಮೇಲೆ ಎಣ್ಣೆಯ ಅಥವಾ ತುಪ್ಪದ ದೀಪ ಏಕೆ ಬೇಕು?

ಪ್ರಶ್ನೆ : ಆನಂದವನ್ನು ತಯಾರಿಸಲು ಬರುವದೇ?

ಉತ್ತರ : ಜಗತ್ತಿನ ಎಲ್ಲ ವಿಶ್ವವಿದ್ಯಾಲಯಗಳು ಪದಾರ್ಥ ವಿಜ್ಞಾನದ ಎಲ್ಲ ಉಪಕರಣಗಳನ್ನು ಬಳಸಿಕೊಂಡು ಆನಂದವನ್ನು ತಯಾರಿಸಲಾರವು. ಪಂಚಭೂತಗಳು ಜಡವಾದ, ಆನಂದರಹಿತ ವಸ್ತುಗಳಾದ್ದರಿಂದ ಇವುಗಳಿಂದ ಆನಂದವೆಂದಿಗೂ ದೊರೆಯಲಾರದು.

ಪ್ರಶ್ನೆ : ಲಿಂಗವೆಂದರೇನು?

ಉತ್ತರ : ಲಿಂಗವೆಂದರೆ ಜ್ಞಾನ, ಲಿಂಗವಂತನೆಂದರೆ ಸ್ವರೂಪ ಜ್ಞಾನವುಳ್ಳವನು.

ಪ್ರಶ್ನೆ : ಸುಖವು ಯಾವದು?

ಉತ್ತರ : ಯಾವದು ಬೇಸರವಾಗುವದಿಲ್ಲವೋ ಅದು ಸುಖವು. ವಿಷಯಗಳೆಲ್ಲವೂ ಬೇಸರವಾಗುವವು, ಆದ್ದರಿಂದ ಅವು ದುಃಖಮಯವು. ಆದರೆ ಗಾಢನಿದ್ರೆಯು ಬೇಸರವಾಗುವದಿಲ್ಲ, ಆದ್ದರಿಂದ ಅದು ಸುಖಮಯವು. ಗಾಢನಿದ್ರೆಯಲ್ಲಿ ಆತ್ಮನಿರುವನು, ವಿಷಯ ವಸ್ತುಗಳು ಇರುವದಿಲ್ಲ. ಗಾಢನಿದ್ರೆಯ ಆನಂದವು ಆತ್ಮನ ಆನಂದವೇ. ಏಕೆಂದರೆ ಆನಂದದಾಯಕನಾದ ಆತ್ಮನು ಬೇಸರವಾಗುವದಿಲ್ಲ.



ಪ್ರಶ್ನೆ : ಆನಂದದ ಗುರುತು ಇಡಲು ಬರುವದೇ?

ಉತ್ತರ : ಆನಂದಕ್ಕೆ ಗುರುತಿಲ್ಲ. ಗುರುತು ಜಗಳವನ್ನು ಹಚ್ಚುವದು. ದೃಶ್ಯವಿರುವವರೆಗೆ ಆನಂದಾನುಭೂತಿಯು ಇರಲಾರದು. ಅಜ್ಞಾನ ಸಹಿತ ಅದರ ಕಾರ್ಯವೆಲ್ಲವೂ ದೃಶ್ಯವು ಇರುತ್ತದೆ. ಆದ್ದರಿಂದ ಅಜ್ಞಾನದ ಕಾರ್ಯವಾದ ವಿಶ್ವಾದಿಗಳು ಆನಂದದ ಗುರುತಾಗಲಾರವು. ಶರೀರವು ಹೇಗೆ ತನ್ನ ಸಚ್ಚಿದಾನಂದದ ಗುರುತಾಗಲಾರದೋ ಹಾಗೆ ಬ್ರಹ್ಮಾಂಡವೂ ಆಗಲಾರದು. ನಾಮ, ರೂಪ, ಕ್ರಿಯಾದಿಗಳನ್ನು ತಿಳುವಳಿಕೆಯಿಂದ ತೆಗೆದುಹಾಕಿ ಸಚ್ಚಿದಾನಂದ ಭಾವದಲ್ಲಿ ಇದ್ದಾಗ ಆನಂದದ ಅನುಭವವಾಗುವದು, ನಿಜಸುಖ ಬೇಕಾದವನಿಗೆ ಗುರುತು ಬೇಕಾಗಿಲ್ಲ.

ಪ್ರಶ್ನೆ : ಆನಂದದ ವಿಭಜನೆ ಮಾಡಲು ಬರುವದೇ?

ಉತ್ತರ : ದೃಶ್ಯವಾದ ಭೂತಗಳಲ್ಲಿ ಒಂದಾದ ಆಕಾಶವನ್ನು ವಿಭಜನೆ ಮಾಡಲಿಕ್ಕೆ ಬರುವದಿಲ್ಲ. ಅಂದಮೇಲೆ ದೃಶ್ಯ ವಿಲಕ್ಷಣವಾದ ಆನಂದಮಯವಾದ ತನ್ನ ಇರುವನ್ನು ಹೇಗೆ ವಿಭಜನೆ ಮಾಡುವದು? ವಿಭಜನೆ ಮಾಡಲು ಬರುವದಿಲ್ಲ.

ಪ್ರಶ್ನೆ : ಆನಂದಕ್ಕೆ ಆಕಾರವಿದೆಯೇ?

ಉತ್ತರ : ಆನಂದವು ನಿರಾಕಾರವು, ಗಾಢನಿದ್ರೆಯಲ್ಲಿ ಯಾವ ಆಕಾರವೂ ಇಲ್ಲ. ಆದರೆ ಆನಂದದ ಅನುಭವವು ಇದೆ. ಸಾಕಾರವನ್ನು ಹಿಡಿದರೆ ನಿರಾಕಾರವಾದ ಆನಂದವು ಸಿಗುವದಿಲ್ಲ.

ಪ್ರಶ್ನೆ : ನಿದ್ರೆ ಯಾರಿಗೆ?

ಉತ್ತರ : ಬುದ್ಧಿಗೆ ನಿದ್ರೆ, ಬುದ್ಧಿಗೆ ದಣಿವು, ಅದಕ್ಕೇ ವಿಶ್ರಾಂತಿ. ಆತ್ಮನಿಗೆ ದಣಿವು ಇಲ್ಲ, ವಿಶ್ರಾಂತಿಯೂ ಇಲ್ಲ. ಆತ್ಮನಿಗೆ ನಿದ್ರೆಯಿಲ್ಲ, ಸೂಕ್ಷ್ಮ ಶರೀರಕ್ಕೆ ನಿದ್ರೆಯು.

ಪ್ರಶ್ನೆ : ಜೀವ ಚೈತನ್ಯವು ಅವಿಕಾರಿ ಇರುವದೇ?

ಉತ್ತರ : ನೀರು, ಕನ್ನಡಿ ಕಾಯುವವು, ಪ್ರತಿಬಿಂಬವು ಕಾಯುವದಿಲ್ಲ. ಅದರಂತೆ ಮನಸ್ಸು ಕಾಯುವದು, ಜೀವಚೈತನ್ಯವು ಕಾಯುವದಿಲ್ಲ.

ಪ್ರಶ್ನೆ : ಸುಖ–ದುಃಖ ಯಾರಿಗೆ?

ಉತ್ತರ : ಸುಖ–ದುಃಖ ಮನಸ್ಸಿಗೆ, ಆತ್ಮನಿಗಲ್ಲ. ನೀನು ಆತ್ಮ, ನಿನಗೆ ಸುಖ ದುಃಖಗಳಿಲ್ಲ.

ಪ್ರಶ್ನೆ : ಕಾಶಿ ಎಂದರೇನು?

ಉತ್ತರ : 'ಕ' ಎಂದರೆ ಬ್ರಹ್ಮ, 'ಕೇಶತೇತಿ ಕಾಶಿ'. ಕಾಶಿ ಎಂದರೆ ಬ್ರಹ್ಮನಲ್ಲಿ ನೆಲೆಯಾಗಿ ನಿಲ್ಲುವದು, ದೇಹಭಾವ ಹೋಗುವದು.

ಪ್ರಶ್ನೆ : ಅರಿವು ಸ್ವರೂಪ ಯಾವದು?

ಉತ್ತರ : ನೀನು ಅರಿವು ಸ್ವರೂಪನು, ನೀನು ಅರುವಿಲ್ಲದೆ ಇರಲಾರೆ, ನಿದ್ರೆಯಲ್ಲಿಯೂ ಅರುವಿದೆ. ನಿದ್ರೆಯಲ್ಲಿ ಆರಾಮವಿತ್ತೆಂದು ನೀನು ಹೇಳುವಿ. ಶರೀರವು ನಿನ್ನನ್ನು ಬಿಟ್ಟು ಹೋಗುವದು, ಅರಿವು ನಿನ್ನನ್ನು ಬಿಟ್ಟು ಹೋಗಲಾರದು, ಎಲ್ಲವನ್ನು ಅರಿಯುವ ಅರಿವೇ ನೀನು.

ಪ್ರಶ್ನೆ : ಜೀವ ಚೈತನ್ಯಗಳೆಂದರೇನು?

ಉತ್ತರ : ಜೀವ ಚೈತನ್ಯಗಳೆಂದರೆ ಕಲ್ಪಿತ ಚೈತನ್ಯಗಳು. ಕಲ್ಪನೆ ತೆಗೆದರೆ ಆತ್ಮ ಒಂದೇ ಉಳಿಯುವದು.

ಪ್ರಶ್ನೆ : ಕಣ್ಣು ಮುಚ್ಚಿದಾಗ ಕತ್ತಲೆಯನ್ನು ತಿಳಿಯುವವನು ಯಾರು?

ಉತ್ತರ : ಕಣ್ಣು ಮುಚ್ಚಿದಾಗ ಕತ್ತಲೆಯನ್ನು ತಿಳಿಯುವವನು ತಾನೇ, ಏನೂ ತಿಳಿಯುವದಿಲ್ಲ ಎಂದು ತಿಳಿಯುವವನು ತಾನೇ.

ಪ್ರಶ್ನೆ : ವೇದದ ಕಾಲ ಯಾವದು?

ಉತ್ತರ : ವೇದ ಸಾಹಿತ್ಯದ ಕಾಲ ನಿರ್ಣಯ ಮಾಡುವರು. ವೇದದ (ಅರುವಿನ) ಕಾಲ ನಿರ್ಣಯ ಮಾಡುವದು ಸಾಧ್ಯವಿಲ್ಲ. ಅರಿವು ಕಾಲಾತೀತವು.

ಪ್ರಶ್ನೆ : ಅರುವಿಗೆ ನೋವಿದೆಯೇ?

ಉತ್ತರ : ಗಾಢನಿದ್ರೆಯಲ್ಲಿ ಬುದ್ಧಿ ಅಡಗುವದು, ಅರಿವು ಇರುವದು, ಆಗ ನೋವು ಇಲ್ಲ. ಬುದ್ಧಿಗೆ ಶರೀರ ಮತ್ತು ಜಗತ್ತು ಇವೆ, ಆದರೆ ಅರುವಿಗಿಲ್ಲ. ಅರುವಿಗೆ ಶರೀರವೂ ಇಲ್ಲ, ಅದರ ನೋವೂ ಇಲ್ಲ. ಬುದ್ಧಿಗೆ ನಿದ್ರೆ, ಅರುವಿಗೆ ನಿದ್ರೆ ಇಲ್ಲ.

ಪ್ರಶ್ನೆ : ಇಷ್ಟಲಿಂಗವೆಂದರೇನು?

ಉತ್ತರ : ಇಷ್ಟ ಎಂದರೆ ಬೇಕಾದದ್ದು, ಬೇಕಾದದ್ದು ಸುಖವು. ಲಿಂಗ ಎಂದರೆ ಜ್ಞಾನ, ಇಷ್ಟಲಿಂಗವೆಂದರೆ ಸುಖದ ಜ್ಞಾನ.

ಪ್ರಶ್ನೆ : ಯಾವದು ಶಾಶ್ವತ ಇರುವದು?

ಉತ್ತರ : ಆತ್ಮ ಒಂದೇ ಶಾಶ್ವತ ಇರುವದು. ಉಳಿದದ್ದೆಲ್ಲವೂ ಅಶಾಶ್ವತವು.

ಪ್ರಶ್ನೆ : ಸಮ ಯಾವದು?

ಉತ್ತರ : ಆತ್ಮವು ಸಮವು.



ಪ್ರಶ್ನೆ : ಜೀವನ ಪ್ರಪ್ರಥಮ ಅನುಭವವು ಯಾವದು?

ಉತ್ತರ : ಜೀವನ ಪ್ರಪ್ರಥಮ ಅನುಭವವು ಆನಂದವೇ ಇರುವದು, ಆದರೆ ದುಃಖವಲ್ಲ.

ಪ್ರಶ್ನೆ : ಜೀವನು ಆನಂದವನ್ನು ಪೂರ್ಣವಾಗಿ ಮರೆತಿದ್ದಾನೆಯೇ?

ಉತ್ತರ : ಜೀವನು ಆನಂದವನ್ನು ಪೂರ್ಣವಾಗಿ ಮರೆತಿಲ್ಲ. ಒಂದು ವೇಳೆ ಆನಂದವನ್ನು ಪೂರ್ಣವಾಗಿ ಮರೆತಿದ್ದರೆ, ಅವನು ಆನಂದವನ್ನು ಬೇಡುತ್ತಿರಲಿಲ್ಲ.

ಪ್ರಶ್ನೆ : ಎಲ್ಲ ಜೀವಿಗಳಿಗೆ ಆನಂದದ ಗುರ್ತು ಯಾವಾಗ ಆಯಿತು?

ಉತ್ತರ : ಎಲ್ಲ ಜೀವಿಗಳಿಗೆ ಆನಂದದ ಗುರ್ತು ಪ್ರಥಮಾನುಭೂತಿಯಿಂದಲೇ ಇದೆ.

ಪ್ರಶ್ನೆ : ಎಲ್ಲ ಜೀವಿಗಳ ಮೊಟ್ಟ ಮೊದಲನೆಯ ಹೆಸರು ಯಾವದು?

ಉತ್ತರ : ಎಲ್ಲ ಜೀವಿಗಳ ಮೊಟ್ಟ ಮೊದಲನೆಯ ಹೆಸರು "ನಾನು" ಎಂಬುದೇ ಆಗಿದೆ.

ಪ್ರಶ್ನೆ : ಜಾಗ್ರ ಮತ್ತು ಕನಸುಗಳನ್ನು ಯಾರು ಸೃಷ್ಟಿಸುವರು?

ಉತ್ತರ : ಸ್ವರೂಪದ ಅಜ್ಞಾನವು ಜಾಗ್ರ, ಕನಸುಗಳೆಂಬ ವಿಕೃತ ದೃಶ್ಯಗಳನ್ನು ಸೃಷ್ಟಿಸುವದು.

ಪ್ರಶ್ನೆ : ಜೀವ ಚೈತನ್ಯ ಮತ್ತು ಪರಮ ಚೈತನ್ಯ ಬೇರೆ ಬೇರೆ ಇರುವವೇ?

ಉತ್ತರ : ಜೀವ ಚೈತನ್ಯವು ಪರಮ ಚೈತನ್ಯವೇ ಇರುವದು. ಘಟಾಕಾಶವು ಮಹಾಕಾಶವಿದ್ದಂತೆ.

ಪ್ರಶ್ನೆ : ವಿಶ್ವವು ಯಾವಾಗ ನಾಶವಾಗುವದು?

ಉತ್ತರ : ವಿಶ್ವವು ಕಲ್ಪಾಂತದಲ್ಲಿ ನಾಶವಾಗುವದಿಲ್ಲ, ವಿಷಯ ವಾಸನೆಗಳು ನಾಶವಾಗಿ ಸ್ವರೂಪಜ್ಞಾನವಾದಾಗ ವಿಶ್ವವು ನಾಶವಾಗುವದು.

ಪ್ರಶ್ನೆ : ಜ್ಞಾನಿಯು ಹೇಗೆ ನಡೆಯುವನು?

ಉತ್ತರ : ಜ್ಞಾನಿಯು ಜಾಗ್ರದ ಘಟನೆಗಳನ್ನು ಕನಸಿನ ಘಟನೆಗಳಂತೆ ತಿಳಿದುಕೊಳ್ಳುವನು. ವ್ಯಾವಹಾರಿಕ ಎಚ್ಚರಿಕೆಗೆ ಬಂದವನಿಗೆ ಯಾವ ರೀತಿ ಕನಸಿನ ಬಗ್ಗೆ ಆಸಕ್ತಿ, ಚಿಂತೆ, ವ್ಯಸನಗಳು ಇರುವದಿಲ್ಲವೋ, ಅದರಂತೆ ಸ್ವರೂಪದ ಎಚ್ಚರವಾದವನಿಗೆ ವ್ಯಾವಹಾರಿಕ ಎಚ್ಚರದ ಬಗ್ಗೆ ಆಸಕ್ತಿ, ಚಿಂತೆ, ವ್ಯಸನಗಳು ಇರುವದಿಲ್ಲ.

ಪ್ರಶ್ನೆ : ಜಾಗ್ರವು ಯಾರ ಕಲ್ಪನೆ?

ಉತ್ತರ : ಕನಸೆಲ್ಲವೂ ಇವನ ಕಲ್ಪನೆ, ಅದರಂತೆ ಜಾಗ್ರವೂ ಇವನ ಕಲ್ಪನೆ. ಎರಡನೆಯವರ ಕಲ್ಪನೆ ಆದರೆ ಇವನಿಗೆ ಅಡಗಿಸಲಿಕ್ಕೆ ಹೇಗೆ ಬರುತ್ತದೆ? ನನ್ನ ಕಲ್ಪನೆಯನ್ನು ನನಗೆ ಅಡಗಿಸಲಿಕ್ಕೆ ಬರುತ್ತದೆ. ಅವನಿಗೆ ಕನಸು

ಬಿದ್ದಿರುವದು, ಅದನ್ನು ನೀನು ಅಡಗಿಸುವೆಯಾ? ಇನ್ನೊಬ್ಬರು ಯಾರಾದರೂ ಮಾಡಿದ್ದರೆ ಮನಸ್ಸಿನ ಕಲ್ಪನಾರೂಪ ಕನಸು ಜಾಗ್ರಗಳು ಅಡಗಬಾರದು. ಮನಸ್ಸನ್ನು ಅಡಗಿಸಿರಿ ಸುಖ ಹೊಂದಿರಿ. ಮನಸ್ಸು ತಾನೇ ಕಲ್ಪಿಸಿ, ತಾನೇ ದುಃಖ ಹೊಂದುತ್ತದೆ.

ಪ್ರಶ್ನೆ : ಆರಾಮವು ಎಲ್ಲಿ ಅನುಭವಕ್ಕೆ ಬರುವದು?

ಉತ್ತರ : ಆರಾಮವು ಅಂತರಂಗದಲ್ಲಿ ಅನುಭವಕ್ಕೆ ಬರುವದು, ಅಂತರಂಗದಲ್ಲಿ ಹಿಡಿದುಕೊಂಡದ್ದೆಲ್ಲವನ್ನು ಬಿಟ್ಟಾಗ ಆರಾಮ ಇರುವದು.

ಪ್ರಶ್ನೆ : ನಾನು ಬ್ರಹ್ಮ ಎಂಬ ಜ್ಞಾನವು ಯಾರಿಗೆ ಉಂಟಾಗುವದು?

ಉತ್ತರ : ಚಿದಾಭಾಸನಿಗೆ ನಾನು ಬ್ರಹ್ಮ ಎಂಬ ಜ್ಞಾನ ಉಂಟಾಗುವದು, ಕೂಟಸ್ಥನಿಗೆ ಅಲ್ಲ. ಜೀವನೇ ಬದ್ಧನಾಗಿದ್ದಾನೆ, ಅವನಿಗೇ ಮುಕ್ತಿ.

ಪ್ರಶ್ನೆ : ಮೂರೂ ಅವಸ್ಥೆಗಳು ಸುಳ್ಳು ಹೇಗೆ?

ಉತ್ತರ : ಅವಸ್ಥೆಗಳು ಒಂದರೊಳಗೆ ಒಂದಿಲ್ಲ, ಆದರೆ ಮೂರೂ ಅವಸ್ಥೆಗಳಲ್ಲಿ ನೀನಿರುವೆ. ಆದ್ದರಿಂದ ಮೂರೂ ಅವಸ್ಥೆಗಳು ಸುಳ್ಳು, ನೀನೇ ಸತ್ಯ.

ಪ್ರಶ್ನೆ : ಶಾಶ್ವತ ಸುಖ ಯಾವದು?

ಉತ್ತರ : ಎಚ್ಚರಿಕೆಯದು 30 ಸೆಕೆಂಡು ಸುಖ, ನಿದ್ರೆಯದು 6 ತಾಸು ಸುಖ, ಅದೂ ತಾತ್ಪೂರ್ತಿಕ, ಆದರೆ ಸ್ವರೂಪ ಸುಖ ಶಾಶ್ವತವಾದುದು.

ಪ್ರಶ್ನೆ : ನೀನು ಪರಿಪೂರ್ಣ ಹೇಗೆ?

ಉತ್ತರ : ಆಕಾಶವು ಮನಸ್ಸಿನಲ್ಲಿ ತೋರುವದು, ಮನಸ್ಸು ನಿನ್ನಲ್ಲಿ ತೋರುವದು, ಆದ್ದರಿಂದ ನೀನು ಪರಿಪೂರ್ಣನು.

ಪ್ರಶ್ನೆ : ಹೆದರಿಕೆಯು ಯಾವಾಗ ಇಲ್ಲ?

ಉತ್ತರ : ತಾನೇ ಸಚ್ಚಿದಾನಂದ ಸ್ವರೂಪನು, ತನಗನ್ಯವಾಗಿ ಏನೂ ಇಲ್ಲ. ಆದ್ದರಿಂದ ತನಗೆ ಭಯ, ಶೋಕ, ಮೋಹಗಳು ಇರಲಾರವು. ಸಚ್ಚಿದಾನಂದ ಸ್ವರೂಪಕ್ಕೆ ಅನ್ಯವಾದದ್ದೆಲ್ಲವೂ ಸಚ್ಚಿದಾನಂದ ಸ್ವರೂಪದ ಆಧಾರದ ಮೇಲೆ ತೋರಿದೆ. ಇದು ಅಜ್ಞಾನದಿಂದ ದೂಷಿತವಾದ ಮನಸ್ಸಿನ ಭ್ರಾಂತಿಯು (ಕಲ್ಪನೆಯು). ಅಭೇದದಲ್ಲಿ ಹೆದರಿಕೆ ಇಲ್ಲ. ಎಚ್ಚರಿಕೆಯಲ್ಲಿ ಭೇದ ಇರುವದರಿಂದ ದೇಹವು ನಾನು ಎಂಬ ಭಾವವು ಬಂದು ಹೆದರುತ್ತೇವೆ.

ಪ್ರಶ್ನೆ : ಸತ್ಯ ಯಾವದು?

ಉತ್ತರ : ಸಚ್ಚಿದಾನಂದವೇ ಸತ್ಯವು, ನಾಮ ರೂಪಗಳು ಕಾಲ್ಪನಿಕ ಮತ್ತು ಮಿಥ್ಯೆಯಾಗಿವೆ. ದೇಹ, ಇಂದ್ರಿಯಗಳು, ಪ್ರಾಣಗಳು, ವಿಷಯವಸ್ತುಗಳು, ಮನ, ಬುದ್ಧಿ, ಚಿತ್ತ, ಅಹಂಕಾರ ಮತ್ತು ಸ್ವರೂಪದ ಅಜ್ಞಾನ ಇವೆಲ್ಲವೂ ತೋರಿಕೆಗಳು. ಇವು ಸುಳ್ಳು ಮತ್ತು ಕಾಲ್ಪನಿಕವಾಗಿವೆ, ತಾನೇ ಸತ್ಯವು.



ಪ್ರಶ್ನೆ : ಬ್ರಾಹ್ಮಣನೆಂದರೆ ಯಾರು?

ಉತ್ತರ : ಸತ್ಯದ ಜ್ಞಾನವನ್ನು ಯಾವನು ಹೊಂದಿರುವನೋ ಅವನೇ ಬ್ರಾಹ್ಮಣನು. ಬರೇ ಆತ್ಮವಿದ್ಯೆಯನ್ನು ಯಾವನು ಅಭ್ಯಸಿಸುವನೋ ಅವನು ವಿಪ್ರನು. ಶೃತಿಯಲ್ಲಿ ಹೇಳಿದ ಕರ್ಮಗಳನ್ನು ಮಾಡುವವನು ದ್ವಿಜನು.

ಪ್ರಶ್ನೆ : ವಿದ್ಯೆಯೆಂದರೇನು?

ಉತ್ತರ : "ವಸ್ತು ಸ್ವರೂಪಾವಧಾರಣಮ್ ವಿದ್ಯಾ" ಅಂದರೆ ವಸ್ತು ಸ್ವರೂಪದ ಅವಧಾರಣೆಯೇ ವಿದ್ಯೆಯು.

ಪ್ರಶ್ನೆ : ಬ್ರಹ್ಮವು ಯಾವದು?

ಉತ್ತರ : ಯಾವದು ಅದು ಇದು ಎಂದು ಧ್ಯಾನಿಸಲ್ಪಡುವದೋ ಅಥವಾ ಅದು ಇದು ಎಂದು ಪೂಜಿಸಲ್ಪಡುವದೋ ಅದು ಬ್ರಹ್ಮವಲ್ಲ.

ಪ್ರಶ್ನೆ : ಅಸ್ಪೃಶ್ಯತೆ ಯಾವದು?

ಉತ್ತರ : ಅನಾತ್ಮವೇ ಅಸ್ಪೃಶ್ಯತೆಯು.

ಪ್ರಶ್ನೆ : ಎಚ್ಚರಕೆಯೂ ಒಂದು ಕನಸು ಇದ್ದಂತೆ ಹೇಗೆ?

ಉತ್ತರ : ಎಚ್ಚರಿಕೆಯೂ ಒಂದು ಕನಸು ಇದ್ದಂತೆ. ಹೇಗೆಂದರೆ, ನಿನ್ನಿನ ದಿನ ಮಾಡಿದ ಬಾಳ್ವೆ ಈ ದಿನ ಇಲ್ಲ. ನಿನ್ನಿನ ಬಾಳ್ವೆ ಇಂದಿನ ಕನಸು, ನಿನ್ನಿನ ಬಾಳ್ವೆಯ ನೆನಪು ಮಾತ್ರ ಇದೆ. ಅದರಂತೆ ಕನಸಿನ ನೆನಪು ಮಾತ್ರ ಇದೆ. ನಿನ್ನೆ ಉಂಡದ್ದು ಈಗ ಉಳಿಯುವದಿಲ್ಲ. ಕನಸಿನಲ್ಲಿ ಉಂಡದ್ದು ಉಳಿಯುವದಿಲ್ಲ. ಎರಡರದೂ ಕೇವಲ ನೆನಪು ಉಳಿದಿದೆ. ಆದ್ದರಿಂದ ಎಚ್ಚರಿಕೆಯೂ ಒಂದು ಕನಸು.

ಪ್ರಶ್ನೆ : ಆಕಾಶದ ಸ್ವರೂಪವೇನು?

ಉತ್ತರ : ಆಕಾಶವು ಜಡವು, ಅದು ಅವಸ್ಥೆಯಿಂದ ಪರಿಚ್ಛಿನ್ನವಿದೆ.

ಪ್ರಶ್ನೆ : ಸಂಸಾರವು ಹೇಗೆ ಇರುವದು?

ಉತ್ತರ : ಸಂಸಾರವು ವಿಷಮ ಮತ್ತು ಕನಸಿನಂತೆ ಇರುವದು.

ಪ್ರಶ್ನೆ : ದೇವರಿಗೆ ಗುಡಿ ಕಟ್ಟಲಿಕ್ಕೆ ಬರುವದೇ?

ಉತ್ತರ : ದೇವರು ಎಂದರೆ ತಿಳುವಳಿಕೆಯು, ತಿಳುವಳಿಕೆಯು ಬೈಲಿಗಿಂತ ವ್ಯಾಪಕವು. ಬೈಲಿಗೆ ಗುಡಿ ಕಟ್ಟಲಿಕ್ಕೆ ಬರುವದಿಲ್ಲ, ಅಂದಮೇಲೆ ತಿಳುವಳಿಕೆಗೆ ಗುಡಿ ಕಟ್ಟಲು ಬರುವದು ಸಾಧ್ಯವಿಲ್ಲ.

ಪ್ರಶ್ನೆ : ಆತ್ಮನ ಸ್ವರೂಪವೇನು?

ಉತ್ತರ : ಆತ್ಮವು ನಿತ್ಯವು, ದೃಶ್ಯ ಸಮೂಹವೆಲ್ಲವೂ ಅನಿತ್ಯವು. ದೃಶ್ಯವು ಇಂದ್ರಿಯಗಮ್ಯವು,

ಸ್ವರೂಪವು ಅನುಭವಗಮ್ಯವು. ದೃಶ್ಯವು ಜಡ, ಸ್ವರೂಪವು ಚೈತನ್ಯವು. ದೃಶ್ಯ ವಿಕಾರಿ, ಸ್ವರೂಪವು ಅವಿಕಾರಿ. ದೃಶ್ಯವು ಪರಿಚ್ಛಿನ್ನವು, ಸ್ವರೂಪವು ವ್ಯಾಪಕವು.

ಪ್ರಶ್ನೆ : ತನ್ನ ಸ್ವರೂಪ ಯಾವದು?

ಉತ್ತರ : ನಾನು ತಿಳಿಯುವೆ, ನಾನು ಇದ್ದೇನೆ ಎನ್ನುವಿ, ಶರೀರವು ತಿಳಿಯುವದಿಲ್ಲ. ಅಂದಮೇಲೆ ಶರೀರ ನಾನೇಕೆ ಎನ್ನುವಿ? ನೀನು ಶರೀರವನ್ನು ತಿಳಿಯುವದರಿಂದ ಶರೀರವು ನೀನಲ್ಲ. ತಿಳುವಳಿಕೆಯೇ ನೀನು.

ಪ್ರಶ್ನೆ : ಅರುವಿಗೆ ಕಾಲವಿದೆಯೇ?

ಉತ್ತರ : ಅರುವಿಗೆ ಕಾಲವಿಲ್ಲ. ಅರುವು ಇದ್ದೇ ಕಾಲವನ್ನು ಹೇಳಬೇಕಾಗುವದು. ಆದ್ದರಿಂದ ಅರುವು ಕಾಲಾತೀತವು.

ಪ್ರಶ್ನೆ : ಜಾನಪದವೆಂದರೇನು?

ಉತ್ತರ : ಜಾನಪದ ಎಂದರೆ ಜ್ಞಾನಪದ, ಸ್ವರೂಪ ಜ್ಞಾನಪದ.

ಪ್ರಶ್ನೆ : ಜನ್ಮದಿನೋತ್ಸವ ಯಾರಿಗೆ?

ಉತ್ತರ : ಆನಂದಮಯ ಇರುವಿಗೆ ಜನ್ಮವಿಲ್ಲ. ತಾನು ಆನಂದಮಯ ಇರುವು. ಜನ್ಮದಿನೋತ್ಸವವು ಶರೀರ ಭಾವವನ್ನು ನೆಲೆಗೊಳಿಸುವದು.

ಪ್ರಶ್ನೆ : ಅವಿದ್ಯೆಯು ಸಾದಿಸಾಂತವು ಹೇಗೆ?

ಉತ್ತರ : ಅವಿದ್ಯೆಯು ಪ್ರಥಮಾನುಭೂತಿಯ ನಂತರದ್ದು, ಅದು ತೂರ್ಯದಲ್ಲಿ ಬಾಧಿತವಾಗುತ್ತದೆ. ಆದ್ದರಿಂದ ಅದು ಸಾದಿಸಾಂತವು. ಇರುವು ಮಾತ್ರ ಅನಾದಿ ಅನಂತವು. ಅದು ಅನಾದಿ ಅನಂತವಾಗಿದ್ದರೆ ಅದನ್ನು ಯಾವದೇ ಉಪಾಯ ಅಥವಾ ಜ್ಞಾನದಿಂದ ತೆಗೆದು ಹಾಕಲು ಅಥವಾ ನಾಶ ಮಾಡಲು ಬರುತ್ತಿರಲಿಲ್ಲ. ಅನಾದಿ ಅನಂತವಾದದ್ದು ಯಾವಾಗಲೂ ಇರುವದು. ಆದರೆ ಅವಿದ್ಯೆಯು ವಿವೇಕದಿಂದ ತೆಗೆದುಹಾಕಲ್ಪಡುತ್ತದೆ.

ಪ್ರಶ್ನೆ : ಅರುವಿನ ಫೋಟೊ ತೆಗೆಯುವದು ಸಾಧ್ಯವಿದೆಯೇ?

ಉತ್ತರ : ಜಡದ ಫೋಟೊ ತೆಗೆಯಬಹುದು, ಅರುವಿನ ಫೋಟೊ ತೆಗೆಯುವದು ಸಾಧ್ಯವಿಲ್ಲ. ಜಡವು ಜಡದ ಫೋಟೊ ತೆಗೆಯುವದು.

ಪ್ರಶ್ನೆ : ವಿಶ್ವವು ಬ್ರಹ್ಮಸ್ವರೂಪವೇ?

ಉತ್ತರ : ವಿಶ್ವವು ಬಾಧಪಡಿಸಿ ಬ್ರಹ್ಮ, ವಿಶ್ವವು ಇದ್ದಕ್ಕಿದ್ದಂತೆ ಬ್ರಹ್ಮವಲ್ಲ. ಹಾವನ್ನು ಬಾಧಪಡಿಸಿ ಹಗ್ಗ, ಹಾವು ಇಲ್ಲ, ಹಗ್ಗ ಇದೆ. ಹಾಗೆ ಬ್ರಹ್ಮ ಇದೆ, ವಿಶ್ವವಿಲ್ಲ.



ಪ್ರಶ್ನೆ : ನಾರಾಯಣ ಎಂದರೇನು?

ಉತ್ತರ : ನರಾಣಾಂ ಅಯನ (ಗುರಿ) = ನಾರಾಯಣ (ಸುಖ). ಮಾನವನ ಗುರಿ ಸುಖ.

ಪ್ರಶ್ನೆ : I and My Father are one ನಾನು ಮತ್ತು ನನ್ನ ತಂದೆಯು ಒಂದೇ, ಇದರ ಅರ್ಥವೇನು?

ಉತ್ತರ : ನಾನು ಮತ್ತು ನನ್ನ ತಂದೆಯ ದೇಹಗಳು ಒಂದಲ್ಲ, ಸ್ವರೂಪ ಒಂದು ಎಂದು ಅರ್ಥ.

ಪ್ರಶ್ನೆ : ವಿಜ್ಞಾನಿಗಳ ಅಜ್ಞಾನವು ಹೋಗಿರುವದೇ?

ಉತ್ತರ : ವಿಜ್ಞಾನಿಗಳು ಏನೆಲ್ಲ ಸಂಶೋಧನೆ ಮಾಡಿದರೂ ಅವರಿಗೆ ಅಜ್ಞಾನದ ಕರೆ ಗೆರೆ ಇದ್ದೇ ಇರುವದು.

ಪ್ರಶ್ನೆ : ದೇಹ ಮತ್ತು ಜಗತ್ತು ಯಾವಾಗ ಕಾಣುವವು?

ಉತ್ತರ : ಹಗ್ಗವು ಕಾಣದಾಗ, ಹಗ್ಗವೇ ಹಾವಾಗಿ ಕಾಣುವಂತೆ, ಸ್ವರೂಪವು ಕಾಣದಾಗ ಸ್ವರೂಪವೇ ದೇಹ, ಜಗತ್ತಿನ ರೂಪದಲ್ಲಿ ಕಾಣುವದು.

ಪ್ರಶ್ನೆ : ಅರಿವು ತಿಳಿಯುವ ಕೆಲಸವನ್ನು ಮಾಡುವದೇ?

ಉತ್ತರ : ಅರಿವು ಬೆಳಗುವದು, ತಿಳಿಯುವ ಕೆಲಸವನ್ನು ಮಾಡುವದಿಲ್ಲ. ಅರಿವಿನ ಸಾನಿಧ್ಯದಲ್ಲಿ ಮನಸ್ಸು ಮತ್ತು ಬುದ್ಧಿಯ ಕೆಲಸಗಳು ನಡೆಯುವವು. ಬಿಂಬಕ್ಕೂ ಪ್ರತಿಬಿಂಬಕ್ಕೂ ಬಾಧೆಯಿಲ್ಲ. ಬುದ್ಧಿಯ ಉಪಾಧಿಯಿಂದ ಪ್ರತಿಬಿಂಬವು ಬಾಧವಾದಂತೆ ತೋರುವದು. (ಕಾಜು ಒಡೆದರೆ ಪ್ರತಿಬಿಂಬವು ಛಿನ್ನವಿಚ್ಛಿನ್ನವಾಗಿ ತೋರುವಂತೆ)

ಪ್ರಶ್ನೆ : ಜಾಗ್ರವು ಮನಸ್ಸಿನ ವಿಕಾರವು ಹೇಗೆ?

ಉತ್ತರ : ಕನಸಿನಲ್ಲಿ ತಾನೊಬ್ಬನೇ ಇದ್ದು ಭೇದಮಯ ಅನೇಕ ಜೀವರು ತೋರುವರು, ಇದೆಲ್ಲವೂ ಮನಸ್ಸಿನ ವಿಕಾರವು, ಕನಸಿನಂತೆ ಜಾಗ್ರವೂ ಮನಸ್ಸಿನ ವಿಕಾರವೇ.

ಪ್ರಶ್ನೆ : ಪ್ರಳಯ ಎಂದರೇನು?

ಉತ್ತರ : ಪ್ರಳಯವೆಂದರೆ ನಾಶ. ನಿದ್ರೆಯಲ್ಲಿ ಜಾಗ್ರದ ಪ್ರಳಯವಾಗುವದು, ಇದು ನಿತ್ಯ ಪ್ರಳಯವು. ಚಂಡಮಾರುತ, ಜ್ವಾಲಾಮುಖಿ ಮುಂತಾದವುಗಳಿಂದ ಖಂಡ ಪ್ರಳಯವಾಗುವದು. ಮಹಾಪ್ರಳಯ ಕಾಲದಲ್ಲಿ ಪದಾರ್ಥವೆಲ್ಲ ನಾಶವಾಗಿ ವಿಶ್ವವು ಬರೇ ಶಕ್ತಿ ರೂಪದಿಂದ ಉಳಿದುಕೊಳ್ಳುವದು.

ಪ್ರಶ್ನೆ : ಜೀವಾತ್ಮನು ಯಾರು?

ಉತ್ತರ : ಜೀವಾತ್ಮನು ಜಡ ಶರೀರದ ಯಜಮಾನನು, ಇಂದ್ರಿಯಗಳು ಕುದುರೆಗಳು, ಬುದ್ಧಿಯು ಸಾರಥಿಯು, ಜೀವ ಚೈತನ್ಯವು ರಥಿಕನು.

ಪ್ರಶ್ನೆ : ಅನುಭವ ಇದರ ಅರ್ಥವೇನು?

ಉತ್ತರ : 'ಅನು' ಎಂದರೆ ಹಿಂಬಾಲಿಸು, 'ಭವ' ಎಂದರೆ ಇರುವಿಕೆ. ಇರುವಿಕೆಯನ್ನು ಹಿಂಬಾಲಿಸುವದೇ ಅನುಭವ, 'ಅನುಭಾವ' ಎಂದರೆ ಇರುವಿಕೆಯಂತೆ ಭಾವ ಮಾಡುವದು.

ಪ್ರಶ್ನೆ : ನಿದ್ರೆಯನ್ನು ಯಾರು ತಿಳಿಯುವರು?

ಉತ್ತರ : ನಿದ್ರೆಯಲ್ಲಿ ಯಾವದೇ ಇಂದ್ರಿಯಗಳ ಸಹಾಯವಿಲ್ಲದೆ ನೀನು ತಿಳಿಯುವಿ. ಆದ್ದರಿಂದ ನೀನು ತಿಳಿಯುವ ಸ್ವರೂಪದವನಿರುವಿ.

ಪ್ರಶ್ನೆ : ಆನಂದವು ಕಣ್ಣಿಗೆ ಕಾಣಿಸುವದೇ?

ಉತ್ತರ : ಆನಂದವು ಕಣ್ಣಿಗೆ ಕಾಣಿಸುವದಿಲ್ಲ, ಅದು ಅನುಭವಕ್ಕೆ ಗೋಚರವಾಗುತ್ತದೆ. ನಾನು ಇದ್ದೇನೆ ಎಂಬುದನ್ನು ಅನುಭವದಿಂದಲೇ ನೋಡಿಕೊಂಡಿರುವಿ. ನಿದ್ರೆಯನ್ನು ಇಂದ್ರಿಯಗಳಿಂದ ನೋಡುವದಿಲ್ಲ. ಕನಸು, ಜಾಗ್ರ, ನಿದ್ರೆ, ಬಾಲ್ಯ, ಯೌವ್ವನ, ಮುಪ್ಪುಗಳನ್ನು, ಅನೇಕ ಜನ್ಮಗಳನ್ನು ತಿಳಿಯುವವನೇ ನೀನು. ಅರಿವು ಮರವೆಗಳನ್ನು ತಿಳಿಯುವವನೇ ನೀನು.

ಪ್ರಶ್ನೆ : ವ್ಯಾಪಕ ಚೈತನ್ಯವು ತಿಳಿಯುವದೇ?

ಉತ್ತರ : ವ್ಯಾಪಕ ಚೈತನ್ಯವು ತಿಳಿಯುವದಿಲ್ಲ, ಅದು ಅರಿವು ಇರುವಿನ ಗಟ್ಟಿ.

ಪ್ರಶ್ನೆ : ವೇದಾಂತವೆಂದರೇನು?

ಉತ್ತರ : 'ವಿದ್' ಎಂದರೆ ತಿಳಿ, ವೇದಾಂತವೆಂದರೆ ತಿಳುವಳಿಕೆಯ ಕೊನೆ. ತಿಳಿತೇನಿ, ತಿಳಿತೇನಿ ಎನ್ನುವದು ಮುಗಿದಾಗ, ಗ್ರಹಣ ಮಾಡಲಿಕ್ಕೆ ಯಾವ ವಿಷಯವೂ ಉಳಿಯದಿದ್ದಾಗ ಅರಿವು ಉಳಿಯುವದು.

ಪ್ರಶ್ನೆ : ಆತ್ಮಗಳು ಎಷ್ಟಿರುವವು?

ಉತ್ತರ : ಆತ್ಮ ಒಂದೇ ಇರುವದು. ದೇಹದ ಉಪಾಧಿಯಿಂದ ಪ್ರತ್ಯಗಾತ್ಮ, ದೇಹದ ಉಪಾಧಿ ಇಲ್ಲದ್ದರಿಂದ ಪರಾಗಾತ್ಮ.

*****



## ಸಾಧನೆ

ಪ್ರಶ್ನೆ : ಕರ್ಮದಿಂದ ದುಃಖವು ಹೋಗುವದೇ?

ಉತ್ತರ : ಕರ್ಮದಿಂದ ದುಃಖವು ಹೋಗುವದಿಲ್ಲ. ಏಕೆಂದರೆ ಕರ್ಮ ಮಾಡದೇ ಇರುವದರಿಂದ ದುಃಖವು ಬಂದಿಲ್ಲ. ತನ್ನ ನಿಜದ ಅಜ್ಞಾನದಿಂದ ದುಃಖವು ಬಂದಿದೆ. ಆದ್ದರಿಂದ ತನ್ನ ನಿಜದ ಜ್ಞಾನದಿಂದ ದುಃಖವು ಹೋಗುತ್ತದೆ. ಎಲ್ಲಿಯವರೆಗೆ ಶರೀರವು ತಾನಲ್ಲ, ಸಚ್ಚಿದಾನಂದವೇ ತಾನು ಎಂದು ತಿಳಿಯುವದಿಲ್ಲವೋ ಅಲ್ಲಿಯವರೆಗೆ ಕೋಟಿ ಜನ್ಮಗಳಲ್ಲಿ ಉಗ್ರ ತಪಸ್ವಿಯಾದರೂ ದುಃಖವು ಹೋಗುವದಿಲ್ಲ.

ಪ್ರಶ್ನೆ : ಪ್ರಥಮಾನುಭೂತಿ ಎಂದರೇನು? ಅದು ಸ್ವರೂಪ ಸಾಧನೆಗೆ ಹೇಗೆ ಸಹಾಯ ಮಾಡಬಲ್ಲದು?

ಉತ್ತರ : ಪ್ರಥಮಾನುಭೂತಿ ಎಂದರೆ ತರ್ಕ ಅಥವಾ ವಿಶ್ಲೇಷಣೆ ರಹಿತ ಸಾಕ್ಷಾತ್ ಜ್ಞಾನವು. ಮೊಟ್ಟ ಮೊದಲಿಗೆ ಸಚ್ಚಿದಾನಂದವೇ (ಭಾವರಹಿತ ಇರುವು) ಇತ್ತು. ಅದು ತಾನೇ ಸಚ್ಚಿದಾನಂದ ಎಂದು ಅನ್ವಾಲೋಚನೆ ಮಾಡಿಕೊಂಡಿತು. ಇದೇ ಜಿವನ ಪ್ರಪ್ರಥಮ ಕರ್ಮ, ಅನುಭವ. ಈ ಸ್ಥಿತಿಯು ಹೇಗೋ ಅಪೂರ್ಣವಾಗಿ ಮರೆಯಿತು. ಇದೇ ಜೀವನ ಅಜ್ಞಾನ. ಈ ಅಜ್ಞಾನದಲ್ಲಿ ಜೀವನು ಅನೇಕ ಕನಸುರೂಪಿ ಜನ್ಮಗಳನ್ನು ಕಲ್ಪಿಸಿಕೊಂಡನು. ದೇಹವೇ ತಾನೆಂದು ಕಲ್ಪಿಸಿಕೊಂಡನು. ವಿಷಯೇಂದ್ರಿಯ ಸಂಪರ್ಕ ಭೋಗದಿಂದ ಸುಖವು ಸಿಗುವದೆಂದು ತಾನೇ ಕಲ್ಪಿಸಿಕೊಂಡನು. ಪ್ರತಿಯೊಬ್ಬರಿಗೂ ಪ್ರಥಮಾನುಭೂತಿಯ ಆನಂದದ ತಿಳುವಳಿಕೆ ಇದ್ದೇ ಇದೆ. ಇದರ ಆಧಾರದ ಮೇಲೆಯೇ ಪ್ರತಿಯೊಬ್ಬನು ಆನಂದವನ್ನು ಬೇಡುತ್ತಿದ್ದಾನೆ. ಆದ್ದರಿಂದ ಪ್ರಥಮಾನುಭೂತಿಯ ಆನಂದದ ಸ್ಥಿತಿಯು ಅಪೂರ್ಣವಾಗಿ ಮರೆತು ಹೋಗಿದೆ. ಆದರೆ ಆನಂದದ ನೆನಪು ಇದೆ. ಜೀವನು ತನ್ನ ಸಚ್ಚಿದಾನಂದ ಸ್ವರೂಪದ ಪ್ರಥಮಾನುಭೂತಿಯ ಆನಂದವನ್ನು ಪುನಃ ನೆನಪಿಸಿಕೊಂಡು ಜನನ ಮರಣ ಚಕ್ರದಿಂದ ತಾನೇ ಮುಕ್ತನಾಗಬೇಕು.

ಪ್ರಶ್ನೆ : ಅಮನಸ್ಕ ಯೋಗ ಎಂದರೇನು?

ಉತ್ತರ : ತೋರಿಕೆಯು ಇರುವಿಕೆಯಲ್ಲಿ ಯಾವ ಬದಲಾವಣೆಯನ್ನೂ ಉಂಟುಮಾಡಲಾರದು. ತೋರಿಕೆಗೆ ಅಸ್ತಿತ್ವವು ಇಲ್ಲವೆಂಬುದು ತಿಳಿದಾಗ ಮನಸ್ಸು ಉಳಿಯುವದಿಲ್ಲ. ಇದೇ ಅಮನಸ್ಕ ಯೋಗವು.

ಪ್ರಶ್ನೆ : ಮನಸ್ಸಿನ ನಾಶವು ಯಾವಾಗ ಆಗುವದು?

ಉತ್ತರ : ಶರೀರಭಾವ ಇರುವದರಿಂದಲೇ, ಮನಸ್ಸು ಶರೀರದ ಸಲುವಾಗಿ ಸಿಡಿಮಿಡಿಗೊಳ್ಳುವದು. ಶರೀರಭಾವ ನಾಶವಾದಾಗ ಮನಸ್ಸಿನ ನಾಶವಾಗುವದು.

ಪ್ರಶ್ನೆ : ವಿಷಯಗಳ ಮೋಹವನ್ನು ಕಳೆದುಕೊಳ್ಳುವದು ಹೇಗೆ?

ಉತ್ತರ : ವಿಷಯ ಭೋಗ ನಡೆದಾಗಲೆಲ್ಲ ಮನಸ್ಸಿನ ನಿಶ್ಚಲತೆಯಿಂದಲೇ ಸ್ವರೂಪದ ಆನಂದವು ತೋರಿತು, ಆದರೆ ವಿಷಯಗಳ ಭೋಗದಿಂದ ಅಲ್ಲವೆಂಬ ವಿಚಾರವು ನಡೆಯಬೇಕು. ಅಂದರೆ ಮಾತ್ರ ವಿಷಯಗಳ ಮೋಹವು ಹೋಗುವದು.

ಪ್ರಶ್ನೆ : ನರ ಜನ್ಮವು ಶ್ರೇಷ್ಠ ಜನ್ಮವು ಏಕೆ?

ಉತ್ತರ : ಮಾನವನಿಗೆ ವಿವೇಕವಿದೆ. ಈ ವಿವೇಕದಿಂದ ದುಃಖರೂಪಿ ಜನನ–ಮರಣ ಚಕ್ರದಿಂದ ಪಾರಾಗಲಿಕ್ಕೆ ಬರುತ್ತದೆ. ಮಾನವನಿಗೆ ಮೂರು ಅವಸ್ಥೆಗಳು ಇವೆ. ಒಂದೊಂದು ಅವಸ್ಥೆಯ ಮುಖಾಂತರ ಒಂದೊಂದು ಅನುಭವವನ್ನು ತಿಳಿದುಕೊಳ್ಳಲಿಕ್ಕೆ ಬರುತ್ತದೆ. ವ್ಯಾವಹಾರಿಕ ಜಾಗ್ರಾವಸ್ಥೆಯಿಂದ ಅದು ದಣಿವು ಬೇಸರಿಕೆಯುಳ್ಳದ್ದು ಎಂದು ತಿಳಿದುಕೊಳ್ಳಲು ಬರುತ್ತದೆ. ಗಾಢನಿದ್ರೆಯಿಂದ ತಾನೇ ಆನಂದ ಸ್ವರೂಪನು ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಬರುತ್ತದೆ. ಏಕೆಂದರೆ ಗಾಢನಿದ್ರೆಯಲ್ಲಿ ಅರಿವಿನ ರೂಪದಿಂದ ತಾನೊಬ್ಬನೇ ಇರುವನು. ಅಲ್ಲಿ ದೇಹ ಮತ್ತು ವಿಷಯಗಳು ಇರುವದಿಲ್ಲ, ಆನಂದ ಮಾತ್ರ ಇದೆ. ಆದ್ದರಿಂದ ತಾನೇ ಆನಂದ ಸ್ವರೂಪನು. ಕನಸಿನ ಅವಸ್ಥೆಯಿಂದ ಮನಸ್ಸೇ ಎಲ್ಲ ಕನಸಿನ ವಿಷಯ ವಸ್ತುಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ತಿಳಿದುಕೊಳ್ಳಲು ಬರುವದು. ಅದರಂತೆ ಮನಸ್ಸೇ ಕನಸಿನಲ್ಲಿಯ ಎಲ್ಲ ವಿಷಯ ವಸ್ತುಗಳನ್ನು ಸೃಷ್ಟಿಸುವಂತೆ, ಜಾಗ್ರಾವಸ್ಥೆಯಲ್ಲಿಯ ಎಲ್ಲ ವಿಷಯ ವಸ್ತುಗಳನ್ನು ಸೃಷ್ಟಿಸುವದು ಎಂಬುದನ್ನು ತಿಳಿದುಕೊಳ್ಳಲು ಬರುವದು, ಆದ್ದರಿಂದ ವಿವೇಕಯುತ ನರ ಜನ್ಮವೇ ಶ್ರೇಷ್ಠವು.

ಪ್ರಶ್ನೆ : ಮಾನವನ ಜನ್ಮಸಿದ್ಧ ಹಕ್ಕು ಯಾವದು?

ಉತ್ತರ : ಸ್ವರೂಪದಲ್ಲಿ ನೆಲೆಯಾಗಿ ನಿಲ್ಲುವದೇ ಮಾನವನ ಜನ್ಮಸಿದ್ಧ ಹಕ್ಕು.

ಪ್ರಶ್ನೆ : ಜ್ಞಾನವು ವಂಶ ಪರಂಪರೆಯಾಗಿ ಮುಂದುವರೆಯುವದೇ?

ಉತ್ತರ : ಯೋಗಿಗಳ ಮಕ್ಕಳು ಯೋಗಿಗಳೇ ಆಗುವರು ಎಂಬುದು ಅಪವಾದವೇ ಸರಿ. ಹಿಂದಿನ ಜನ್ಮದಲ್ಲಿ ಆತ್ಮ ಚಿಂತನೆಯ ದುಡಿಕೆಯಿದ್ದು, ಬ್ರಹ್ಮನಿಷ್ಠರಿಂದ ಜನಿಸಿ, ಅವರ ಸಂಗದಲ್ಲಿದ್ದುಕೊಂಡು, ಆತ್ಮ ಚಿಂತನೆಯನ್ನು ಮುಂದುವರೆಸಿದರೆ ಸ್ವರೂಪಾವಸ್ಥಿತಿಯನ್ನು ಹೊಂದಬಹುದು. ಹಿಂದಿನ ಜನ್ಮದ ದುಡಿಕೆಯಿದ್ದರೂ, ಬ್ರಹ್ಮನಿಷ್ಠರಿಂದ ಜನಿಸಿದರೂ, ಈ ಜನ್ಮದಲ್ಲಿ



ಸ್ವರೂಪ ಅಭ್ಯಾಸಿಗಳ ಸಂಗ ಮತ್ತು ಸ್ವತಃ ಪ್ರಯತ್ನವಿಲ್ಲದಿದ್ದರೆ ಸ್ವರೂಪಾವ ಸ್ಥಿತಿಯನ್ನು ಪಡೆಯುವದು ಸಾಧ್ಯವಿಲ್ಲ. ಸ್ವತಃ ಪ್ರಯತ್ನವಿಲ್ಲದಿದ್ದರೆ ವಂಶ ಪರಂಪರೆಯು ಮತ್ತು ಶಿಷ್ಯ ಪರಂಪರೆಯು ಮುಂದುವರೆಯುವದಿಲ್ಲ. ಪ್ರಯತ್ನ ಮಾಡುವವರು ವಂಶದವರೇ ಆಗಲಿ ಅಥವಾ ಶಿಷ್ಯರೇ ಆಗಲಿ ಸ್ವರೂಪಾವ ಸ್ಥಿತಿಯನ್ನು ಪಡೆಯಬಹುದು. ಯೋನಿಯಲ್ಲಿ ಶರೀರದ ಬೀಜವನ್ನು ಬಿತ್ತಲಿಕ್ಕೆ ಬರುತ್ತದೆ. ಆದರೆ ಜ್ಞಾನವನ್ನು ಬಿತ್ತಲಿಕ್ಕೆ ಬರುವದಿಲ್ಲ. ಜ್ಞಾನವನ್ನು ಪರಿಶುದ್ಧ ಅಂತಃಕರಣದಲ್ಲಿ ಮಾತ್ರ ಬಿತ್ತಲು ಬರುವದು. ಜ್ಞಾನವು ವಂಶ ಪರಂಪರೆಯಾಗಿ ಬರುವದಿಲ್ಲ, ಬರುವಂತಿದ್ದರೆ ಬೇರೆ ವಂಶದಲ್ಲಿ ಜ್ಞಾನಿಗಳು ಹುಟ್ಟಬಾರದಾಗಿತ್ತು. ಅದರಂತೆ ಜ್ಞಾನಿಯ ಪೀಳಿಗೆಯೆಲ್ಲ ಜ್ಞಾನಿಗಳೇ ಆಗಬೇಕಾಗಿತ್ತು, ಹಾಗೆ ಆಗುವದಿಲ್ಲ. ಜ್ಞಾನಿಗಳ ಮಕ್ಕಳನ್ನು ಜ್ಞಾನಿಗಳೆಂದು ನಂಬಬೇಡಿರಿ, ಅವರದು ಜ್ಞಾನಿಯ ಸ್ಥಿತಿ ಇದ್ದರೆ ಮಾತ್ರ ಅವರನ್ನು ಜ್ಞಾನಿಗಳೆಂದು ನಂಬಿರಿ.

ಪ್ರಶ್ನೆ : ಸಾಧಕನ ಸಾಧನ, ಸಿದ್ಧನ ಲಕ್ಷಣ ಎಂದರೇನು?

ಉತ್ತರ : ಸಮಾಧಿಯಿಂದ ಉತ್ಥಾನರಾದವರು ಸಮಾಧಿ ಹೊಂದಲು ಸಾಧಕವಾದ ನಿಯಮಗಳನ್ನು, (ನೀತಿ, ವೈರಾಗ್ಯ, ಜ್ಞಾನ) ಸಹಜಾವಸ್ಥೆಯಲ್ಲಿ ಪಾಲಿಸುವರು. ಅವರು ನೀತಿ ಬಾಹಿರ ವ್ಯವಹಾರ ಮಾಡುವದಿಲ್ಲ. ದೃಢ ವೈರಾಗ್ಯವು ಅವರಲ್ಲಿ ನೆಲೆಯಾಗಿ ನಿಂತಿರುವದು.

ಪ್ರಶ್ನೆ : ಆನಂದ ಹೊಂದಲು ಶ್ವಾಸೋಚ್ಛ್ವಾಸವನ್ನು ನಿಲ್ಲಿಸಬೇಕಾಗುವದೇನು?

ಉತ್ತರ : ನಿದ್ರೆಯಲ್ಲಿ ಶ್ವಾಸೋಚ್ಛ್ವಾಸವು ನಡೆದಿದೆ, ಆನಂದವಿದೆ. ಆದ್ದರಿಂದ ಆನಂದವನ್ನು ಹೊಂದಲಿಕ್ಕೆ ಶ್ವಾಸೋಚ್ಛ್ವಾಸವನ್ನು ನಿಲ್ಲಿಸಬೇಕಾಗಿಲ್ಲ. ಆನಂದದ ಸ್ವಾದ ಹತ್ತಬೇಕಾದರೆ ಮನಸ್ಸು ನಿಲ್ಲಬೇಕು. ಆನಂದ ಹೊಂದಲು ಪ್ರಾಣ ಅಪಾನಗಳ ಗೊಡವೆ ಏತಕೆ?

ಪ್ರಶ್ನೆ : ಗುಹಾ ಪ್ರವೇಶ ಎಂದರೇನು?

ಉತ್ತರ : ತನ್ನ ಸ್ವರೂಪ ಪ್ರವೇಶ ಮಾಡುವದೇ ಗುಹಾ ಪ್ರವೇಶವು.

ಪ್ರಶ್ನೆ : ಯೋಗಿಗಳ ಕುಲದವರು ಯಾರು?

ಉತ್ತರ : ಯೋಗಿಗಳಾಗುವವರೇ ಯೋಗಿಗಳ ಕುಲದವರು, ಉಳಿದವರೆಲ್ಲರೂ ಕೂಳು ಕುಂಬಳಿ ಕುಲದವರು. ಯಾವಾಗಲೂ ಸ್ವರೂಪ ಚಿಂತನೆಯಲ್ಲಿ ಇರುವವರೇ ಯೋಗಿಯ ಕುಲದವರು, ಇತರರಲ್ಲ. ಸಾಧಕರ ಮತ್ತು ಸಿದ್ಧರ ಬಳಗವೇ ಯೋಗಿಗಳ ಬಳಗವು. ಭೋಗದಿಂದ ಶರೀರವನ್ನು ಹಡೆಯುವಿರಿ. ಶರೀರದಲ್ಲಿ ಜ್ಞಾನದ ಬೀಜವನ್ನು ಬಿತ್ತುವದಿಲ್ಲ. ಆಸ್ತಿಯ ವಾರಸಾ ಕೂಡ ಬೇರೆ ಬೇರೆ ಸರ್ಕಾರಗಳಿಂದ ಬದಲಾವಣೆಯಾಗುವದು.

ಪ್ರಶ್ನೆ : ನಿಜವಾದ ಶೂರತನ ಯಾವದು?

ಉತ್ತರ : ಕಾಮ, ಕ್ರೋಧಾದಿಗಳನ್ನು ಗೆಲ್ಲುವದೇ ನಿಜವಾದ ಶೂರತನವು.

ಪ್ರಶ್ನೆ : ಜೀವಭಾವ ಎಂದರೇನು?

ಉತ್ತರ : ಕರ್ತೃತ್ವ ಭೋಕ್ತೃತ್ವ ಬುದ್ಧಿಯೇ ಜೀವಭಾವ. ವಿಷಯಗಳನ್ನು ಗಳಿಸಬೇಕು, ಭೋಗಿಸಬೇಕು, ಆ ಭೋಗದಿಂದ ಸುಖಿಯಾಗಬೇಕು ಎಂಬ ತಿಳುವಳಿಕೆಯೇ ಜೀವಭಾವ.

ಪ್ರಶ್ನೆ : ಪುಣ್ಯತಿಥಿ, ಜಯಂತಿ ಎಂದರೇನು?

ಉತ್ತರ : ಮಹಾತ್ಮರು ಪಡೆದ ಆನಂದೈಕ ಸ್ಥಿತಿಯನ್ನು ಪಡೆಯುವದಕ್ಕೆ ಧ್ಯಾನೈಕ ತತ್ಪರನಾಗಿ ಜ್ಞಾನ ಸಮಾಧಿಯನ್ನು ಸಾಧಿಸುವದೇ ಪುಣ್ಯತಿಥಿ, ಜಯಂತಿ.

ಪ್ರಶ್ನೆ : ಮಾನವನ ಜೀವನದ ಗುರಿಗಳೆಷ್ಟು? ಅವುಗಳನ್ನು ಸಾಧಿಸಲು ಮಾರ್ಗಗಳೆಷ್ಟು?

ಉತ್ತರ : ಜಡವನ್ನು ಹೊಂದುವದಕ್ಕೆ ಅನೇಕ ದಾರಿಗಳು, ಅಜಡವಾದ ಇರುವನ್ನು ಹೊಂದಲು ದಾರಿಯೇ ಇಲ್ಲ. ಎಲ್ಲ ಜೀವ ಮಾತ್ರರ ಗುರಿ ಶಾಶ್ವತ ಸುಖವನ್ನು ಹೊಂದುವದೇ ಆಗಿದೆ. ಅದನ್ನು ಸಾಧಿಸಲು ಕೂಡ ಒಂದೇ ಸಾಧನ ಕ್ರಮವಿರುವದು. ಅದೆಂದರೆ ಆನಂದಭಾವದಲ್ಲಿರುವದು. ಗಾಢನಿದ್ರೆಯನ್ನು ಮಾಡಲಿಕ್ಕೆ ನಿದ್ರೆಯ ಸೂತ್ರವು ಒಂದೇ ಇರುವದು, ಅದರಂತೆ ನಿಜಸುಖವನ್ನು ಹೊಂದಲಿಕ್ಕೆ ಒಂದೇ ಒಂದು ಮಾರ್ಗ, ಆನಂದಭಾವ. ಎಲ್ಲರ ಗುರಿ ಶಾಶ್ವತ ಸುಖ, ಸಾಧನೆ ವಿಷಯಾಸಕ್ತಿ ಮತ್ತು ದೇಹಭಾವವನ್ನು ತೆಗೆಯುವದು ಮತ್ತು ಆತ್ಮನಲ್ಲಿ ನೆಲೆಯಾಗಿ ನಿಲ್ಲುವದು, ಸಾಧ್ಯ ಶಾಶ್ವತ ಸುಖ. ಇವೆಲ್ಲ ಒಂದೇ ಇದ್ದರೂ ಅವು ಬೇರೆ ಬೇರೆ ಇವೆ ಎಂದು ಸುಮ್ಮನೆ ಬಡಿದಾಡುವರು.

ಪ್ರಶ್ನೆ : ಮನಸ್ಸು ಎಂದರೇನು?

ಉತ್ತರ : "ಸಂಕಲ್ಪ ವಿಕಲ್ಪಾತ್ಮಕಂ ಹಿ ಮನಃ" ಅಂದರೆ ಸಂಕಲ್ಪ ವಿಕಲ್ಪ ಆದದ್ದೇ ಮನಸ್ಸು. ಸಂಕಲ್ಪ ವಿಕಲ್ಪ ಅಡಗಿದರೆ ತಾತ್ಪೂರ್ತಿಕ ಸುಖವಿರುವದು. ಅಡಗಿದ್ದು ಏಳುವದು, ದುಃಖವಾಗುವದು. ಸಂಕಲ್ಪ ವಿಕಲ್ಪಗಳು ನಾಶವಾದರೆ ಮತ್ತೆ ಏಳುವದಿಲ್ಲ. ಅವು ನಾಶವಾಗಿ ತೋರಿದರೂ ಸಹ ಮನಸ್ಸಿಗೆ ಇರುವಿಕೆ ಇಲ್ಲ. ಸುಟ್ಟ ಹಗ್ಗ ತೋರುತ್ತದೆ, ಆದರೆ ಕಟ್ಟಿಹಾಕುವದಿಲ್ಲ. ಅದರಂತೆ ನಾಶವಾದ ಮನದ ತೋರಿಕೆ ಬಂಧನಕ್ಕೀಡು ಮಾಡುವದಿಲ್ಲ. ಜಡ ಶರೀರವೇ ನಾನು ಎಂಬ ಭಾವವೇ ಮನಸ್ಸು.

ಪ್ರಶ್ನೆ : ಮಾನವನು ಸುಖವನ್ನು ಹೊಂದಲು ಯಾವ ಸಂಪತ್ತು ಬೇಕು?

ಉತ್ತರ : ಮಾನವನು ಸುಖವನ್ನು ಹೊಂದಲು ವಿರತಿ ಸಂಪತ್ತು ಬೇಕು. ವಿರತಿ ಸಂಪತ್ತೆಂದರೆ ದೇವಾತೀತವೃತ್ತಿಯು, ದೇವಾತೀತವೃತ್ತಿ ಎಂದರೆ ಇಹಲೋಕ ಪರಲೋಕ ಭೋಗ ವಿರತಿಯು.

ಪ್ರಶ್ನೆ : ಗೃಹಸ್ಥನು ಯಾರು?

ಉತ್ತರ : ಸ್ವರೂಪವೇ ಗೃಹ, ಸ್ವರೂಪದಲ್ಲಿ ನೆಲೆಯಾಗಿ ನಿಂತವನೇ ಗೃಹಸ್ಥನು.



ಪ್ರಶ್ನೆ : ಮನಸ್ಸು ಚಂಚಲ ಏಕೆ ಆಗುವದು?

ಉತ್ತರ : ವಿಷಯಗಳ ಸುಖಬುದ್ಧಿ ಮನಸ್ಸಿನ ಚಂಚಲತೆಗೆ ಕಾರಣ.

ಪ್ರಶ್ನೆ : ಸಿಂಹಾಸನವೆಂದರೆ ಏನು?

ಉತ್ತರ : "ಸಿಂ ಹಂತಿ ಇತಿ ನೃಸಿಂಹ", 'ಸಿಂ' ಅಂದರೆ ಅಜ್ಞಾನ, 'ಹಂತಿ' ಎಂದರೆ ನಾಶ ಮಾಡುವದು. ಸಿಂಹಾಸನವೆಂದರೆ ಸ್ವರೂಪದ ಅಜ್ಞಾನವನ್ನು ನಾಶಮಾಡುವ ಸ್ವರೂಪ ಜ್ಞಾನಾಸನ. ಸ್ವರೂಪ ಜ್ಞಾನಾಸನದಲ್ಲಿ ಕೂಡ್ರುವವನೇ ಸಿಂಹಾಸನಸ್ಥ. ಕಲ್ಲು ಕಟ್ಟಿಗೆಯ ಆಸನದ ಮೇಲೆ ಕುಳಿತರೆ ಸಿಂಹಾಸನದ ಮೇಲೆ ಕುಳಿತಂತೆ ಆಗುವದಿಲ್ಲ.

ಪ್ರಶ್ನೆ : ಮೋಹವು ಹೇಗೆ ಹೋಗುವದು?

ಉತ್ತರ : ಹೇಳಲಿಕ್ಕೆ ಬಂದರೆ ಮೋಹ ಹೋಗುವದಿಲ್ಲ. ಇಂದ್ರಿಯ ನಿಗ್ರಹವನ್ನು ತಿಳುವಳಿಕೆಯಿಂದ (ವಿವೇಕದಿಂದ) ಧರಿಸಿದರೆ ಮಾತ್ರ ಮೋಹವು ಹೋಗುತ್ತದೆ. ಬೇರೆ ಯಾವ ಸಾಧನೆಯಿಂದಲೂ ವಿಷಯ ವ್ಯಾಮೋಹವು ಹೋಗುವದಿಲ್ಲ.

ಪ್ರಶ್ನೆ : ಮನಸ್ಸು ನಿಶ್ಚಲವಾದಾಗ ಅನುಭವಕ್ಕೆ ಬರುವ ಆನಂದವು ಯಾರದು?

ಉತ್ತರ : ರಾಗದ ವಿಷಯವು ಸಿಕ್ಕಾಗ ಮನಸ್ಸು ನಿಶ್ಚಲವಾಗಿ ಜೀವ ಚೈತನ್ಯದ ಪ್ರತಿಫಲನದಿಂದ ಅದು ಆನಂದವನ್ನು ಅನುಭವಿಸುವದು. ಆಗ ದೇಹಭಾವವೂ ಇರುವದಿಲ್ಲ, ವಿಷಯ ಭಾವವೂ ಇರುವದಿಲ್ಲ, ಆನಂದ ಭಾವವು ಮಾತ್ರ ಇರುವದು. ಆನಂದದ ಭಾವ ಇರುವದರಿಂದಲೇ ಆನಂದದ ಅನುಭವ ಆಗುವದು. ಗಾಢವಾದ ನಿದ್ರೆಯಲ್ಲಿ ಬುದ್ಧಿಯು ಅಡಗಲು ಆನಂದವು ಮಾಯಾವೃತ್ತಿ ಸಾಧನದ ಮುಖಾಂತರ ತೋರುವದು, ಸುಖವು ಮಾತ್ರ ತನ್ನ ಸ್ವರೂಪವೇ ಇರುವದು.

ಪ್ರಶ್ನೆ : ಶರೀರ ತಾನು ಎಂಬ ಭಾವವನ್ನು ಹೇಗೆ ಬಿಡಬೇಕು?

ಉತ್ತರ : ಆತ್ಮ ತಾನು ಎಂಬ ಭಾವದಿಂದ, ಶರೀರ ತಾನು ಎಂಬ ಭಾವವನ್ನು ಬಿಡಬೇಕು.

ಪ್ರಶ್ನೆ : ವ್ಯಾವಹಾರಿಕ ಎಚ್ಚರಿಕೆಯು ಯಾವಾಗ ಬಾಧವಾಗುವದು?

ಉತ್ತರ : ಕನಸಿನಲ್ಲಿ ಇದ್ದ ಜೀವನು ಜಾಗ್ರಾವಸ್ಥೆಗೆ ಬಂದೊಡನೆ ಕನಸು ಹೇಗೆ ಬಾಧವಾಗುವದೋ ಹಾಗೆ, ವ್ಯಾವಹಾರಿಕ ಎಚ್ಚರಿಕೆಯಲ್ಲಿದ್ದ ಜೀವನು ಸ್ವರೂಪದ ಎಚ್ಚರಿಕೆಗೆ ಬಂದೊಡನೆ ವ್ಯಾವಹಾರಿಕ ಎಚ್ಚರಿಕೆಯು ಬಾಧವಾಗುವದು.

ಪ್ರಶ್ನೆ : ಮಹಾತ್ಮರ ಶಿಷ್ಯತ್ವವನ್ನು ವಹಿಸುವದು ಹೇಗೆ?

ಉತ್ತರ : ಸ್ವರೂಪ ಜ್ಞಾನವನ್ನು ಪಡೆಯುವದೇ ಮಹಾತ್ಮರ ಶಿಷ್ಯತ್ವವನ್ನು ವಹಿಸುವದು ಎಂದರ್ಥ.

ಪ್ರಶ್ನೆ : ಶಾಶ್ವತ ಸುಖವನ್ನು ಹೊಂದಲು ಯಾರು ಸಹಾಯಕರಾಗಬಲ್ಲರು?

ಉತ್ತರ : ಆತ್ಮ ಸಾಕ್ಷಾತ್ಕಾರವನ್ನು ಹೊಂದಿದವರು ಮಾತ್ರ ಶಾಶ್ವತ ಸುಖವನ್ನು ಹೊಂದಲು ಸಹಾಯಕರಾಗಬಲ್ಲರು.

ಪ್ರಶ್ನೆ : ದುಃಖವನ್ನು ಕಳೆದುಕೊಳ್ಳಲು ಕಾಲದ ಬಂಧನವಿದೆಯೇ?

ಉತ್ತರ : ನಿದ್ರೆ ಮಾಡಲು ಹೇಗೆ ಕಾಲದ ಬಂಧನವಿಲ್ಲವೋ, ಹಾಗೆ ಸುಖವನ್ನು ಹೊಂದಬೇಕಾದರೆ ಕಾಲದ ಬಂಧನವಿಲ್ಲ.

ಪ್ರಶ್ನೆ : ಜೀವನ್ಮುಕ್ತಿ ಎಂದರೇನು?

ಉತ್ತರ : ಶರೀರವು ಜೀವಂತ ಇರುವಾಗಲೇ ಜೀವನು ತನ್ನ ನಿಜವಲ್ಲದ್ದನ್ನು ಅರಿತು ಬಿಟ್ಟ ಇರುವಿಕೆಯೇ ಜೀವನ್ಮುಕ್ತಿಯು.

ಪ್ರಶ್ನೆ : ಆನಂದವು ಇಂದ್ರಿಯಗಮ್ಯವೇ?

ಉತ್ತರ : ಆನಂದವು ಇಂದ್ರಿಯಗಮ್ಯವಲ್ಲ, ಅದು ಅನುಭವಕ್ಕೆ ಬರುವದು. ಆನಂದಾನುಭವಕ್ಕೆ ಜ್ಞಾನೇಂದ್ರಿಯಗಳ ಅವಶ್ಯಕತೆ ಇಲ್ಲ.

ಪ್ರಶ್ನೆ : ನಿದ್ರೆಯನ್ನು ಮೀರುವದು ಹೇಗೆ?

ಉತ್ತರ : ಮರವೆಯ ಸುಳಿವು ತಿಲಮಾತ್ರವಿಲ್ಲದೆ, ಆನಂದೈಕ ಸೂತ್ರವು ತಿಳಿವಿನಲ್ಲಿ ಬಂದು, ಅದನ್ನು ಅನನ್ಯ ಚಿಂತನೆಯಿಂದ ದೃಢಪಡಿಸಿ ನಿಲ್ಲುವಂಥವನಿಗೆ ನಿದ್ರೆಯು ಬರಲಾರದು. ಅವನು ನಿದ್ರೆಯನ್ನು ಮೀರುತ್ತಾನೆ.

ಪ್ರಶ್ನೆ : ವೈರಾಗ್ಯವು ಯಾವಾಗ ಪೂರ್ತಿಗೊಳ್ಳುವದು?

ಉತ್ತರ : ತನ್ನ ಆತ್ಮನಲ್ಲಿ ಆನಂದವಿದೆ ಎಂಬ ತಿಳುವಳಿಕೆ ಇದ್ದವನಿಗೆ ಇಹಲೋಕ ಪರಲೋಕ ಭೋಗ ವಿರಾಗವು ಪೂರ್ತಿಗೊಂಡಿರುವದು.

ಪ್ರಶ್ನೆ : ಸಮಾಧಿ ಎಂದರೇನು?

ಉತ್ತರ : ಬುದ್ಧಿ ಸಮವಾಗಿರುವಿಕೆಯು ಸಮಾಧಿ. ಆದರೆ ಕುಣಿ ತೆಗೆದು, ಅದರಲ್ಲಿ ಹೆಣ ಹುಗಿದು, ಮೇಲೆ ಕಟ್ಟೆಯನ್ನು ಕಟ್ಟಿದರೆ ಸಮಾಧಿಯಲ್ಲ. ಅಲ್ಲೇನಿರುವದು? ಎಲುಬು, ಹುಳು ಹುಪ್ಪಡಿ ಇರುವವು.

ಪ್ರಶ್ನೆ : ಬುದ್ಧಿಯು ಯಾವಾಗ ಸಮವಾಗುವದು?

ಉತ್ತರ : ಬುದ್ಧಿಯು ಸಮ ಇರುವಿನ ಕಡೆಗೆ ಹೋದರೆ ಸಮ ಆಗುವದು. ವಿಷಮ ದೇಹ ಮತ್ತು ವಿಷಯ ವಸ್ತುಗಳ ಕಡೆಗೆ ಹೋದರೆ ವಿಷಮವಾಗುವದು.

ಪ್ರಶ್ನೆ : ಆತ್ಮ ಸಾಕ್ಷಾತ್ಕಾರವಾಗಬೇಕಾದರೆ ಸಮಾಧಿಯನ್ನು ಹೊಂದಲೇಬೇಕೇನು?

ಉತ್ತರ : ಜ್ಞಾನ ಸಮಾಧಿಯನ್ನು ಹೊಂದಿದಾಗ ಮಾತ್ರ ಆತ್ಮ ಸಾಕ್ಷಾತ್ಕಾರ ಹೊರತು, ಬಾಯಿಲೆ ಬ್ರಹ್ಮ ಎಂದರೆ ಆತ್ಮ ಸಾಕ್ಷಾತ್ಕಾರ ಆಗುವದಿಲ್ಲ.



ಪ್ರಶ್ನೆ : ಸಂಧ್ಯಾ ಎಂದರೇನು?

ಉತ್ತರ : "ನಷ್ಟೇ ಪೂರ್ವ ವಿಕಲ್ಪೇತು ಯಾವತ್ ನ ಅನ್ಯಸ್ಯ ಉದಯಃ ನಿರ್ವಿಕಲ್ಪಕ ಚೈತನ್ಯಂ ತಾವತ್ ಸ್ಪಷ್ಟಂ ವಿಭಾಸತೆ" ಅಂದರೆ ಒಂದು ಕಲ್ಪನೆಯು ಅಡಗಿ, ಇನ್ನೊಂದು ಕಲ್ಪನೆಯು ಉದಯವಾಗುವ ಪೂರ್ವದಲ್ಲಿ, ಎರಡು ಕಲ್ಪನೆಗಳ ನಡುವಿನ ಕಲ್ಪನಾರಹಿತ, ಅರಿವು ಸಹಿತ, ಆನಂದಾನುಭೂತಿಯ ನಿಶ್ಚಲ ಸ್ಥಿತಿಯೇ ಸಂಧ್ಯಾ.

ಪ್ರಶ್ನೆ : ದುಃಖವನ್ನು ಹೇಗೆ ಕಳೆದುಕೊಳ್ಳಬೇಕು?

ಉತ್ತರ : ವಿಷಯಗಳ ಮೇಲಿನ ಮೋಹವನ್ನು ತೆಗೆದುಹಾಕಿ, ಶರೀರದ ಮೇಲಿನ ಮೋಹವನ್ನು ತೆಗೆದು ಹಾಕಿ, ಶರೀರ ಭಾವವನ್ನು ನಾಶಮಾಡಿ, ಆತ್ಮನಲ್ಲಿ ನೆಲೆನಿಂತಾಗ ದುಃಖವು ನಾಶವಾಗುವದು.

ಪ್ರಶ್ನೆ : ಸಮಾಧಿಯನ್ನು ಏಕೆ ಹೊಂದಬೇಕು?

ಉತ್ತರ : ದೇಹಭಾವವನ್ನು ನಾಶಮಾಡಿಕೊಳ್ಳುವದಕ್ಕಾಗಿ ಸಮಾಧಿಯನ್ನು ಹೊಂದಬೇಕು.

ಪ್ರಶ್ನೆ : ವಿಷಯ ವ್ಯಾಮೋಹವು ಮೇಲಿಂದ ಮೇಲೆ ಏಕೆ ಬರುವದು?

ಉತ್ತರ : ಹಿಂದಿನ ಜನ್ಮದ ಸಂಸ್ಕಾರವಿರುವದರಿಂದ ವಿಷಯ ವ್ಯಾಮೋಹವು ಬರುವದು.

ಪ್ರಶ್ನೆ : ವಿಷಯಗಳ ಮೇಲಿನ ಆಶೆಯನ್ನು ಬಿಡುವದು ಹೇಗೆ?

ಉತ್ತರ : ವಿಷಯಗಳಿಂದ ಸುಖ ಸಿಗುವದೆಂದು ಅವುಗಳ ಆಶೆಯನ್ನು ಹಿಡಿಯುತ್ತೇವೆ. ವಿಷಯಗಳಿಂದ ಸುಖ ಸಿಗುವದಿಲ್ಲ ಎಂದು ತಿಳಿದುಕೊಂಡು ವಿಷಯಗಳ ಆಸೆಯನ್ನು ಬಿಡಬೇಕು.

ಪ್ರಶ್ನೆ : ನಿದ್ರೆ ಎಂದರೆ ಅಜ್ಞಾನ ಸಮಾಧಿ, ತೂರ್ಯಾವಸ್ಥೆಯೆಂದರೆ ಜ್ಞಾನ ಸಮಾಧಿ ಹೇಗೆ?

ಉತ್ತರ : ಗಾಢನಿದ್ರೆಯಲ್ಲಿ ಮನಸ್ಸಿನಲ್ಲಿರುವ ರಾಗದ್ವೇಷಗಳನ್ನು ಮರೆತು ಬಿಟ್ಟಿರುವೆವು. ಅದರಂತೆ ದೇಹದ ಆಸೆ, ಶರೀರ ಭಾವವನ್ನು ಮರೆತುಬಿಟ್ಟು, ಮರೆತು ಆತ್ಮರಾಗಿ ಉಳಿದಿರುವೆವು. ಇಲ್ಲಿ ಬುದ್ಧಿಯು ಅಜ್ಞಾನದಿಂದ ಸಮವಾಗಿರುವದು. ಆದ್ದರಿಂದ ಇದು ಅಜ್ಞಾನ ಸಮಾಧಿಯು. ತೂರ್ಯಾವಸ್ಥೆಯನ್ನು ಹೊಂದಬೇಕಾದರೆ, ಈ ವ್ಯಾವಹಾರಿಕ ಎಚ್ಚರಿಕೆಯಲ್ಲಿ ಮನಸ್ಸಿನಲ್ಲಿರುವ ರಾಗದ್ವೇಷಗಳನ್ನು ಅವು ದುಃಖಮಯವೆಂದು ತಿಳಿದು ಬಿಡಬೇಕು. ಅದರಂತೆ ದೇಹದ ಆಸೆ, ದೇಹದ ಭಾವವನ್ನು ದುಃಖಮಯವೆಂದು ತಿಳಿದು ಬಿಡಬೇಕು. ದೇಹವು ಜಡವು, ತಾನು ಚೈತನ್ಯ ಸ್ವರೂಪನು ಎಂದು ತಿಳಿದು ಆತ್ಮನಾಗಿ ಉಳಿಯಬೇಕು. ಇಲ್ಲಿ ಜ್ಞಾನದಿಂದ ಬುದ್ಧಿಯು ಸಮವಾಗಿರುವದು. ಆದ್ದರಿಂದ ಇದು ಜ್ಞಾನ ಸಮಾಧಿಯು.

ಪ್ರಶ್ನೆ : ಕಾಯಕವೆಂದರೇನು?

ಉತ್ತರ : ಕೈಲಾಸಕ್ಕೆ ಹೋಗುವ ಕೆಲಸವೇ ಕಾಯಕ. ಹೊಟ್ಟೆ ತುಂಬಿಕೊಳ್ಳುವ ದುಡಿಮೆಯಿಂದ ಕೈಲಾಸವೆಂದಿಗೂ ಸಿಗಲಾರದು. ಬ್ರಹ್ಮಸೂತ್ರವೇ ಕಾಯಕ, ಬ್ರಹ್ಮೀಭೂತ ಸ್ಥಿತಿಯೇ ಕೈಲಾಸ.

ಪ್ರಶ್ನೆ : ಹೊಟ್ಟೆಗಾಗಿ ಎಷ್ಟು ಬೇಕು?

ಉತ್ತರ : ಹೊಟ್ಟೆಗಾಗಿ ಒಂದು ಮುಟ್ಟಿಗೆ ಹಿಟ್ಟು, ಒಂದು ಉಪ್ಪಿನ ಹಳ್ಳು ಸಾಕು.

ಪ್ರಶ್ನೆ : ಯೋಗನಿದ್ರೆ ಮತ್ತು ಸಾಮಾನ್ಯ ನಿದ್ರೆಯಲ್ಲಿಯ ಭೇದವೇನು?

ಉತ್ತರ : ಯೋಗನಿದ್ರೆಯಲ್ಲಿ ಅರಿವು ಮಾತ್ರ ಇರುತ್ತದೆ. ಸಾಮಾನ್ಯ ನಿದ್ರೆಯಲ್ಲಿ ಅರಿವು ಇರುವದಿಲ್ಲ. ಆನಂದವು ಮಾತ್ರ ಸಾಮಾನ್ಯ ನಿದ್ರೆ ಹಾಗೂ ಯೋಗನಿದ್ರೆಯಲ್ಲಿ ಒಂದೇ ಇರುತ್ತದೆ.

ಪ್ರಶ್ನೆ : ನಿಜವಾದ ಸಿದ್ಧಿ ಯಾವದು?

ಉತ್ತರ : ಆನಂದದ ಪ್ರಾಪ್ತಿಯೇ ನಿಜವಾದ ಸಿದ್ಧಿ. ಪವಾಡಗಳಿಂದ ಆನಂದದ ಸಿದ್ಧಿಯಾಗುವದಿಲ್ಲ. ಸಿದ್ಧಿಗಳೆಲ್ಲ ಜಾದೂಗಾರನ ಆಟಗಳಾಗಿವೆ. ಆದ್ದರಿಂದ ಇವುಗಳ ಬೆನ್ನು ಹತ್ತಬಾರದು.

ಪ್ರಶ್ನೆ : ಬಯಕೆಗಳನ್ನು ಪೂರೈಸಿಕೊಳ್ಳುವದು ಹೇಗೆ?

ಉತ್ತರ : ಬಯಕೆಗಳನ್ನು ಪೂರೈಸಿಕೊಳ್ಳುವದೆಂದರೆ ಬಯಕೆಗಳನ್ನು ಬಿಡುವದೇ ಆಗಿದೆ.

ಪ್ರಶ್ನೆ : ಶ್ರವಣವೆಂದರೇನು?

ಉತ್ತರ : ಸಂಶಯವು ಮರಳಿ ಹುಟ್ಟದಂತೆ ಕೇಳುವದೇ ಶ್ರವಣ.

ಪ್ರಶ್ನೆ : ಏತಕ್ಕಾಗಿ ಪ್ರಪಂಚ ಮಾಡಬೇಕು?

ಉತ್ತರ : ಪಾರಮಾರ್ಥಕ್ಕಾಗಿ ಪ್ರಪಂಚ ಮಾಡಬೇಕು, ಪ್ರಪಂಚಕ್ಕಾಗಿ ಪಾರಮಾರ್ಥ ಮಾಡಬಾರದು.

ಪ್ರಶ್ನೆ : ದೀಕ್ಷೆ ಎಂದರೇನು?

ಉತ್ತರ : ಯಾವದು ಆತ್ಮಜ್ಞಾನವನ್ನು ಕೊಡುತ್ತದೆಯೋ ಮತ್ತು ಬಂಧನವನ್ನು ನಾಶ ಮಾಡುತ್ತದೆಯೋ ಅದೇ ದೀಕ್ಷೆ.

ಪ್ರಶ್ನೆ : ಮನುಷ್ಯನು ಯಾರು?

ಉತ್ತರ : ಮನಸ್ಸಿಲ್ಲದವನೇ ಮನುಷ್ಯನು, ಮನಸ್ಸನ್ನು ಗೆದ್ದವನೇ ಮನುಷ್ಯನು.

ಪ್ರಶ್ನೆ : ಬಲವು ಎಲ್ಲಿದೆ?

ಉತ್ತರ : ಬಲವು ಮನಸ್ಸಿನಲ್ಲಿದೆ. ಮನೋ ಬಲವೇ ಬಲ, ಮಂತ್ರದಲ್ಲಿ ಬಲವಿಲ್ಲ. ಮನೋ ಬಲದಿಂದಲೇ ಮಂತ್ರಕ್ಕೆ ಬಲವಲ್ಲದೆ, ಬರೇ ಮಂತ್ರಕ್ಕೆ ಯಾವ ಬಲವೂ ಇಲ್ಲ.



ಪ್ರಶ್ನೆ : ಅಜ್ಞಾನಿಗಳ, ಸಾಮಾನ್ಯರ ಮತ್ತು ಶ್ರೇಷ್ಠರ ಕಾಲವು ಹೇಗೆ ಕಳೆಯುವದು?

ಉತ್ತರ : ಅಜ್ಞಾನಿಗಳ ಕಾಲವು ಜೂಜು, ಕುಡಿತ, ಜಗಳ ಇತ್ಯಾದಿಗಳಲ್ಲಿ ಕಳೆದು ಹೋಗುವದು. ಸಾಮಾನ್ಯರ ಕಾಲವು ಶಾಸ್ತ್ರ ವಿಚಾರದಲ್ಲಿ ಕಳೆಯುವದು. ಶ್ರೇಷ್ಠರ ವೇಳೆಯು ಬ್ರಹ್ಮನಿಷ್ಠರ ಸಂಗದಲ್ಲಿ ಕಳೆಯುವದು. ಇದಕ್ಕಿಂತಲೂ ಶ್ರೇಷ್ಠವಾದುದು ತನ್ನ ಸ್ವರೂಪದಲ್ಲಿ ನೆಲೆಯಾಗಿ ಇರುವದು.

ಪ್ರಶ್ನೆ : ಪ್ರತ್ಯಾಹಾರವೆಂದರೇನು?

ಉತ್ತರ : ಮನಸ್ಸನ್ನು ಇಂದ್ರಿಯಗಳಿಂದ ಹೊರಳಿಸಿ ಆತ್ಮನತ್ತ ತಿರುಗಿಸುವದೇ ಪ್ರತ್ಯಾಹಾರವು.

ಪ್ರಶ್ನೆ : ಆತ್ಮನನ್ನು ತಿಳಿಯುವದು ಹೇಗೆ?

ಉತ್ತರ : ಆತ್ಮನನ್ನು ತಿಳಿಯುವದೆಂದರೆ ಆತ್ಮನೇ ಇರುವದು.

ಪ್ರಶ್ನೆ : ಮಡಿ ಎಂದರೇನು?

ಉತ್ತರ : ಶರೀರ ಭಾವವನ್ನು ಬಿಡುವದೇ ಮಡಿ.

ಪ್ರಶ್ನೆ : ಕುಂಭಕ ಸಾಧಿಸುವದರಿಂದ ಆತ್ಮಜ್ಞಾನವಾಗುವದೇ?

ಉತ್ತರ : ಕುಂಬಕ ಸಾಧಿಸುವವರ ಸ್ಥಿತಿ ನಿದ್ರೆಮಾಡಿ ಎದ್ದವರಂತೆ ಇರುತ್ತದೆ. ಇವರ ದೇಹಭಾವ ವಿಷಯ ವಾಸನೆಗಳು ನಾಶವಾಗಿರುವದಿಲ್ಲ. ಆದ್ದರಿಂದ ತಿಳುವಳಿಕೆಯಿಂದ ದೇಹಭಾವ ಮತ್ತು ವಿಷಯ ವಾಸನೆಗಳನ್ನು ತ್ಯಾಗಮಾಡಿ, ಸ್ವರೂಪದಲ್ಲಿ ನೆಲೆಯಾಗಿ ನಿಲ್ಲಬೇಕು.

ಪ್ರಶ್ನೆ : ಆತ್ಮಜ್ಞಾನ ಹೊಂದಲು ಶರೀರವು ಬತ್ತಲೆಯಾಗಬೇಕೆ?

ಉತ್ತರ : ಶರೀರವನ್ನು ಬತ್ತಲೆ ಮಾಡಿದರೆ ಉಪಯೋಗವಿಲ್ಲ, ಮನಸ್ಸು ಬತ್ತಲೆಯಾಗಬೇಕು. ಮನಸ್ಸಿನಲ್ಲಿಯ ಕಾಮ, ಕ್ರೋಧಾದಿಗಳನ್ನು ಕಳಚಿ ಹಾಕಬೇಕು, ಅಂದರೆ ನಿಜವಾಗಿ ಬತ್ತಲೆಯಾದಂತೆ ಆಗುತ್ತದೆ.

ಪ್ರಶ್ನೆ : ಎಲ್ಲವೂ ಯಾವಾಗ ತಿಳಿಯುತ್ತದೆ?

ಉತ್ತರ : ಸ್ವರೂಪದಲ್ಲಿ ನೆಲೆಯಾಗಿ ನಿಂತು ನೋಡಿದಾಗ ಎಲ್ಲವೂ ತಿಳಿಯುತ್ತದೆ. ದೇವಾನುದೇವತರು ನಿನಗೆ ಕೈ ಮುಗಿದು ಲೆಕ್ಕ ಒಪ್ಪಿಸುತ್ತಾರೆ.

ಪ್ರಶ್ನೆ : ಎಲ್ಲ ವಿಷಯ ವಸ್ತುಗಳು ಯಾವಾಗ ತೋರುತ್ತವೆ?

ಉತ್ತರ : ನಿನ್ನ ಕಲ್ಪನಾ ನಕಾಶೆಯಲ್ಲಿಯೇ (ಮನಸ್ಸು) ಎಲ್ಲ ವಸ್ತುಗಳು ತೋರುತ್ತವೆ. ಕಲ್ಪನಾ ನಕಾಶೆಯನ್ನು ಸುತ್ತಿದಾಗ ಏನೂ ತೋರುವದಿಲ್ಲ, ಕಲ್ಪನಾ ಹಾರಿದರೆ

ಏನೂ ಇಲ್ಲ. ಮನಸ್ಸು ಆತ್ಮನಲ್ಲಿ ನೆಲೆ ನಿಲ್ಲದಾಗ ಎಲ್ಲ ವಿಷಯ ವಸ್ತುಗಳು ತೋರುತ್ತವೆ.

ಪ್ರಶ್ನೆ : ಜೈನರೆಂದರೆ ಯಾರು?

ಉತ್ತರ : ಬಾಹ್ಯ ಮತ್ತು ಅಂತರ್ ಇಂದ್ರಿಯಗಳನ್ನು ಗೆದ್ದವರೇ ಜೈನರು.

ಪ್ರಶ್ನೆ : ನಿರ್ಗುಣ ಯೋಗವೆಂದರೇನು?

ಉತ್ತರ : ಶರೀರವನ್ನೊಳಗೊಂಡು ಎಲ್ಲ ವಿಷಯಗಳ ವೈರಾಗ್ಯವೇ ಯಮವು. ಆತ್ಮನ ಒಲವು ಇರುವದೇ ನಿಯಮವು, ವಿಚಾರವನ್ನು ಒಳಮುಖಗೊಳಿಸುವದೇ ಪ್ರತ್ಯಾಹಾರವು, ಅರುವುಮಯವಾದ ಇರುವನ್ನು ಅಗಲದಿರುವದೇ ಸಮಾಧಿಯು.

ಪ್ರಶ್ನೆ : ನಾಮ ರೂಪಗಳು ಯಾವಾಗ ಇಲ್ಲದಾಗುತ್ತವೆ?

ಉತ್ತರ : ಇರುವಿನ ಕಡೆಗೆ ಲಕ್ಷ್ಯ ಕೊಟ್ಟರೆ ನಾಮ ರೂಪಗಳು ಇಲ್ಲದಾಗುತ್ತವೆ.

ಪ್ರಶ್ನೆ : ಗಾಢನಿದ್ರೆಯಿಂದ ಶಾಶ್ವತ ಸುಖ ಸಿಗುವದೇ?

ಉತ್ತರ : ಗಾಢನಿದ್ರೆಯು ಇರುವವರೆಗೆ ಮಾತ್ರ ಆನಂದ ಇರುವದು. ಗಾಢನಿದ್ರೆಯಿಂದ ವ್ಯಾವಹಾರಿಕ ಎಚ್ಚರಿಕೆಗೆ ಬಂದಾಗ ಮತ್ತೆ ದುಃಖವು ಪ್ರಾರಂಭವಾಗುವದು. ಆದ್ದರಿಂದ ಗಾಢನಿದ್ರೆಯಿಂದ ಶಾಶ್ವತ ಸುಖವು ಸಿಗಲಾರದು. ಸ್ವರೂಪಾವ ಸ್ಥಿತಿಯನ್ನು ಹೊಂದಿದಾಗ ಮಾತ್ರ ಶಾಶ್ವತ ಸುಖವು ಸಿಗುವದು.

ಪ್ರಶ್ನೆ : ಮಹಾ ಶಿವರಾತ್ರಿಯನ್ನು ಆಚರಿಸುವದೆಂದರೇನು?

ಉತ್ತರ : ಮಹಾ ಶಿವರಾತ್ರಿಯನ್ನು ಆಚರಿಸುವದೆಂದರೆ ಧ್ಯಾನಸ್ಥರಾಗಿ ಸ್ವರೂಪಾವ ಸ್ಥಿತಿಯನ್ನು ಹೊಂದುವದೇ ಆಗಿದೆ. 'ಶಿವಯೋಗ'ವೆಂದರೆ ಆನಂದದೊಡನೆ, ತನ್ನ ನಿಜ ಸ್ವರೂಪದೊಡನೆ ಕೂಡುವಿಕೆ. 'ಶಿವ' ಎಂದರೆ ಆನಂದ, ಸುಖ, ಅದರೊಡನೆ ಯೋಗ, ಅದರೊಡನೆ ಸಮರಸವಾಗುವದು. ಯಾರಿಗೆ ಆನಂದ ಬೇಕಾಗಿದೆ ಅವರಿಗೆ ಯೋಗ. ಮಹಾ ಶಿವರಾತ್ರಿಯಲ್ಲಿ ಜಾಗರಣೆ ಮಾಡುವದೆಂದರೆ ತನ್ನ ನಿಜದ ಎಚ್ಚರಿಕೆಯಲ್ಲಿರಬೇಕು. ತಾನು ಸಚ್ಚಿದಾನಂದ ಸ್ವರೂಪವೇ ಇದ್ದಾನೆ. ಅಜ್ಞಾನ ಮಾತ್ರ ಭಂಗವಾಗಬೇಕಾಗಿದೆ. ಅದನ್ನು ಬಿಟ್ಟು ರಾತ್ರಿಯೆಲ್ಲವೂ ಗದ್ದಲ ಹಾಕಿದರೆ ಅದು ಜಾಗರಣೆಯಾಗಲಾರದು. ಸ್ವರೂಪ ಜ್ಞಾನದಲ್ಲಿ ನೆಲೆ ನಿಲ್ಲುವದೇ ಜಾಗರಣೆ.

ಪ್ರಶ್ನೆ : ನಿದ್ರೆಯ ಗುಳಿಗೆಗಳ ಪರಿಣಾಮವೇನು?

ಉತ್ತರ : ನಿದ್ರೆಯ ಗುಳಿಗೆಗಳು ಮಬ್ಬನ್ನು ಉಂಟುಮಾಡುತ್ತವೆ. ಅವುಗಳಿಂದ ಶರೀರದ ನರನಾಡಿಗಳು ದುರ್ಬಲವಾಗುತ್ತವೆ ಮತ್ತು ಕೆಡುತ್ತವೆ, ಶರೀರವು



ವಿಷಮಯವಾಗುತ್ತದೆ. ಆದರೆ ಸಾಮಾನ್ಯ ನಿದ್ರೆಯಿಂದ ಶರೀರದ ನರನಾಡಿಗಳು ಚೇತರಿಸಿಕೊಂಡು ಶರೀರವು ಆರೋಗ್ಯದಿಂದ ಇರುತ್ತದೆ.

ಪ್ರಶ್ನೆ : ಪ್ರಸಾದವೆಂದರೇನು?

ಉತ್ತರ : ಪ್ರಿಯ ವಸ್ತುಗಳಲ್ಲಿ ರಾಗ, ಅಪ್ರಿಯ ವಸ್ತುಗಳಲ್ಲಿ ದ್ವೇಷ, ಇವುಗಳಿಂದ ಬಿಡುಗಡೆಯನ್ನು ಹೊಂದಿ, ತನ್ನ ವಶದಲ್ಲಿರುವ ಇಂದ್ರಿಯಗಳಿಂದ ವಿಷಯಗಳನ್ನು ಅನುಭವಿಸುತ್ತಿರುವ ಮತ್ತು ಮನಸ್ಸನ್ನು ವಶಪಡಿಸಿಕೊಂಡಿರುವ ಮನುಷ್ಯನು ಆತ್ಮಧ್ಯಾನದ ಮೂಲಕ ಪ್ರಸಾದವನ್ನು (ಸುಖ) ಪ್ರಸನ್ನತೆಯನ್ನು ಹೊಂದುವನು, ಇದೇ ಪ್ರಸಾದ.

ಪ್ರಶ್ನೆ : ವಿಷಯಗಳನ್ನು ನೆನಪು ಮಾಡಿದರೆ ಏನಾಗುವದು?

ಉತ್ತರ : ವಿಷಯಗಳನ್ನು ನೆನಪು ಮಾಡಿದರೆ ಅವುಗಳ ಸಂಗವಾಗುವದು, ಅವುಗಳ ಸಂಗದಿಂದ ಅವುಗಳ ಇಚ್ಛೆಯಾಗುವದು. ವಿಷಯಗಳನ್ನು ಯಾರಾದರೂ ಕಸಿದುಕೊಳ್ಳಲು ಬಂದರೆ ಅವರ ಮೇಲೆ ಕ್ರೋಧ ಉಂಟಾಗುವದು. ವಿಷಯಗಳನ್ನು ಭೋಗಿಸಿದಂತೆ, ಅವುಗಳಲ್ಲಿ ಸುಖ ಬುದ್ಧಿಯು ಗಟ್ಟಿಯಾಗುತ್ತ ಹೋಗಿ, ಮೋಹ ಲೋಭ ಮದಗಳುಂಟಾಗುತ್ತವೆ. ನಮಗಿಂತ ಹೆಚ್ಚಿನ ಪ್ರಮಾಣದಲ್ಲಿ ಯಾರಾದರೂ ವಿಷಯಗಳನ್ನು ಭೋಗಿಸುತ್ತಿದ್ದರೆ ಅವರ ಮೇಲೆ ದ್ವೇಷ (ಮತ್ಸರ) ಉಂಟಾಗುವದು. ಹೀಗೆ ವಿಷಯಗಳ ನೆನಪಿನಿಂದ ಮನಸ್ಸಿನಲ್ಲಿ ಆರು ವೈರಿಗಳು ತಯಾರಾಗುತ್ತಾರೆ. ವಿಷಯಗಳ ಸಲುವಾಗಿಯೇ ಹೊರಗೂ ವೈರಿಗಳು ತಯಾರಾಗುತ್ತಾರೆ. ಹೀಗೆ ವಿಷಯಗಳ ನೆನಪಿನಿಂದ ಮನಸ್ಸಿನಲ್ಲಿಯೂ ವೈರಿಗಳು, ಹೊರಗೂ ವೈರಿಗಳು, ಸಂಕಟವೇ ಸಂಕಟ.

ಪ್ರಶ್ನೆ : ಆತ್ಮನನ್ನು ನೆನಪು ಮಾಡಿದರೆ ಏನಾಗುವದು?

ಉತ್ತರ : ಆತ್ಮನನ್ನು ನೆನಪು ಮಾಡಿದರೆ ಆನಂದ ರೂಪನಾದ ಆತ್ಮನ ಸಂಗವಾಗುತ್ತದೆ. ಇದರಿಂದ ಆನಂದದ ಆಸೆಯು ನಾಶವಾಗುತ್ತದೆ. ಆನಂದವನ್ನು ಯಾರಾದರೂ ಕಸಿದುಕೊಳ್ಳುವರು ಎಂದು ಕ್ರೋಧವಾಗುವದಿಲ್ಲ. ಆನಂದವನ್ನು ಹೊಂದಬೇಕೆಂಬ ಮೋಹ ಲೋಭಗಳು ಉಂಟಾಗುವದಿಲ್ಲ. ಆನಂದವನ್ನು ಹೊಂದಿರುವೆನೆಂದು ಮದ ಬರುವದಿಲ್ಲ. ಆನಂದವನ್ನು ಇನ್ನೊಬ್ಬರು ಹೊಂದುವರೆಂದು ಮತ್ಸರ ಉಂಟಾಗುವದಿಲ್ಲ. ಹೀಗೆ ಆನಂದದ (ಆತ್ಮನ) ಧ್ಯಾನ ಮಾಡುವದರಿಂದ ಮನಸ್ಸಿನೊಳಗೆ ವೈರಿಗಳಿಲ್ಲ, ಹೊರಗೂ ವೈರಿಗಳಿರುವದಿಲ್ಲ, ಬರೇ ಆನಂದವೇ ಆನಂದವಿರುವದು.

ಪ್ರಶ್ನೆ : ವಿಷಯ ಭೋಗವು ನಡೆದಂತೆ ಆಶೆಯು ಏಕೆ ಹೆಚ್ಚಾಗುವದು?

ಉತ್ತರ : ವಿಷಯಗಳನ್ನು ಭೋಗಿಸಿದಂತೆ ಪ್ರತಿ ನೋಟಕ್ಕೂ, ಪ್ರತಿ ತುತ್ತಿಗೂ, ಪ್ರತಿ ಸ್ಪರ್ಶಕ್ಕೂ, ಪ್ರತಿ ವಾಸನೆಗೂ ವಿಷಯ ಭೋಗವೇ ಸುಖ ಎಂಬುದು ಗಟ್ಟಿಯಾಗುತ್ತ, ಅವುಗಳ ಆಸೆಯು ಹೆಚ್ಚಾಗುತ್ತ ಹೋಗುವದು.

ಪ್ರಶ್ನೆ : ಕಾಮನ ಉದಯಕ್ಕೆ ಏನು ಕಾರಣವು?

ಉತ್ತರ : ವಿಷಯಗಳಲ್ಲಿ ಸುಖ ಸಿಗುವದೆಂಬ ತಪ್ಪು ತಿಳುವಳಿಕೆಯೇ ಕಾಮನ ಉದಯಕ್ಕೆ ಕಾರಣವು.

ಪ್ರಶ್ನೆ : ವಿಷಯ ಭೋಗದಿಂದ ತೋರಿದ ಸುಖವು ಏಕೆ ಉಳಿಯುವದಿಲ್ಲ?

ಉತ್ತರ : ರಾಗದ ವಿಷಯವು ಸಿಕ್ಕಾಗ ಮನಸ್ಸು ಕ್ಷಣಕಾಲ ನಿಶ್ಚಲವಾಗಿ ಆತ್ಮನ ಆನಂದವೇ ಪ್ರತಿಬಿಂಬಿಸಿ ಅನುಭವಕ್ಕೆ ಬರುವದು. ನಂತರ ವಿಷಯ ಭೋಗವು ಬೇಸರವಾಗಿ ಮನಸ್ಸು ಚಂಚಲವಾಗಿ, ಇನ್ನೊಂದು ವಿಷಯದ ಕಡೆಗೆ ಹರಿಯುವದು. ಹೀಗೆ ಮನಸ್ಸು ಚಂಚಲವಾಗುವದರಿಂದಲೇ ಸುಖವು ಉಳಿಯದೆ ದುಃಖವು ಉಳಿಯುವದು.

ಪ್ರಶ್ನೆ : ವಿಷಯಗಳು ಸುಖರೂಪವಾದರೆ ಒಂದು ವಿಷಯ ಒಬ್ಬನಿಗೆ ಸುಖ ಕೊಟ್ಟರೆ, ಇನ್ನೊಬ್ಬನಿಗೆ ಅದೇ ವಿಷಯವು ದುಃಖವನ್ನು ಏಕೆ ಕೊಡುವದು?

ಉತ್ತರ : ಒಬ್ಬನು ಒಂದು ವಿಷಯ ವಸ್ತುವು ಸುಖ ಕೊಡುವದು ಎಂದು ತಿಳಿಯುತ್ತಾನೆ. ಆ ವಸ್ತುವು ಪ್ರಾಪ್ತವಾದಾಗ ಮನಸ್ಸು ನಿಶ್ಚಲವಾಗಿ ಸುಖವು ತೋರುವದು. ಆದರೆ ಮತ್ತೊಬ್ಬನು ಅದೇ ವಿಷಯವು ದುಃಖ ಕೊಡುವದು ಎಂದು ತಿಳಿಯುತ್ತಾನೆ. ಆ ವಿಷಯವು ಸಿಕ್ಕಾಗ ಅವನ ಮನಸ್ಸು ಚಂಚಲವಾಗಿ ದುಃಖವಾಗುವದು.

ಪ್ರಶ್ನೆ : ವಿಷಯಗಳ ವ್ಯವಹಾರವನ್ನು ಹೇಗೆ ಮಾಡಬೇಕು?

ಉತ್ತರ : ವಿಷಯಗಳನ್ನು ಶರೀರ ಚರಿತಾರ್ಥವಾಗಿ ಹೊರಗೆ ಹಿಡಿಯಬೇಕು. ಮನಸ್ಸಿನೊಳಗೆ ವಿಷಯಗಳನ್ನು ಸುಖದ ಬುದ್ಧಿಯಿಂದ ಹಿಡಿದುಕೊಳ್ಳುವದನ್ನು ಬಿಡಬೇಕು.

ಪ್ರಶ್ನೆ : ಸುಖವನ್ನು ಹೊಂದಲು ಹೊರಗಿನ ವಿಷಯ ವಸ್ತುಗಳ ಅವಶ್ಯಕತೆ ಇರುವದೇ?

ಉತ್ತರ : ಮನಸ್ಸು ನಿಂತಾಗ ಸುಖ ಇರುವದು. ಮನಸ್ಸು ಮತ್ತು ಸುಖ ಒಳಗೇ ಇರುವದರಿಂದ ಸುಖವನ್ನು ಹೊಂದಲು ಹೊರಗಿನ ವಸ್ತುಗಳ ಅವಶ್ಯಕತೆಯೇ ಇಲ್ಲ.

ಪ್ರಶ್ನೆ : ಮನುಷ್ಯತ್ವ ಎಂದರೇನು?

ಉತ್ತರ : ಮನುಷ್ಯತ್ವವೆಂದರೆ ಪಶುತ್ವದ ನಾಶ. ದೇಹಾತ್ಮ ಬುದ್ಧಿ ಇರುವವರೆಗೆ ಆಹಾರ, ನಿದ್ರೆ, ಭಯ ಮತ್ತು ಮೈಥುನಗಳು ಇರುವವೇ. ಮಾನವನು ಎಲ್ಲಿಯೇ ಇದ್ದರೂ ಜೀವ ಹೋದಿತೆಂಬ ಭಯವು ಇದ್ದದ್ದೇ. ಅದರಂತೆ ಮೈಥುನವೂ ಇರುವದೇ. ಅಲ್ಲದೆ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳು ಇರುವವೇ. ಯಾವನು ಇಂದ್ರಿಯಗಳನ್ನು ಗೆದ್ದಿರುವನೋ ಮತ್ತು ದೇಹಭಾವವನ್ನು ಮೀರಿ ಆತ್ಮನಲ್ಲಿ ರತನಾಗಿರುವನೋ ಅವನೇ ಮಾನವನು. ಆಹಾರ, ನಿದ್ರೆ, ಭಯ, ಮೈಥುನಗಳನ್ನು ಜಯಿಸಿ ಆತ್ಮರತನಾದವನೇ ಮಾನವನು, ಅಂದರೆ ಆತ್ಮಜ್ಞಾನಿಯೇ ಮಾನವನು.



ಪ್ರಶ್ನೆ : ಚಟಗಳನ್ನು ಬಿಡುವದು ಹೇಗೆ?

ಉತ್ತರ : ಚಟಗಳನ್ನು ಅವು ಸುಖ ಕೊಡುವವು ಎಂದು ತಿಳಿದು, ಅವುಗಳನ್ನು ಕಲಿತಿರುವಿರಿ, ಚಟಗಳಲ್ಲಿ ಸುಖವಿಲ್ಲ, ಅವುಗಳಲ್ಲಿ ದುಃಖವಿದೆಯೆಂದು ತಿಳಿದು ಚಟಗಳನ್ನು ಬಿಡಬೇಕು.

ಪ್ರಶ್ನೆ : ವ್ಯಾವಹಾರಿಕ ಎಚ್ಚರಿಕೆಗಿಂತ ಕನಸು ಮತ್ತು ಗಾಢನಿದ್ರೆ ಶ್ರೇಷ್ಠ ಹೇಗೆ?

ಉತ್ತರ : ಗಾಢನಿದ್ರೆಯಲ್ಲಿ ಪಡೆದ ಆನಂದದ ಅನುಭೂತಿಯು ಎಚ್ಚರಿಕೆಯಲ್ಲಿ ನೆನಪಿಗೆ ಬರುವದು, ಕನಸಿನ ನೆನಪು ಎಚ್ಚರಿಕೆಯಲ್ಲಿ ಬರುವದು. ಆದರೆ ಎಚ್ಚರಿಕೆಯ ನೆನಪು, ಕನಸು ಮತ್ತು ಗಾಢನಿದ್ರೆಯಲ್ಲಿ ಬರುವದಿಲ್ಲ. ಆದ್ದರಿಂದ ಕನಸು ಮತ್ತು ಗಾಢನಿದ್ರೆಗಳು ವ್ಯಾವಹಾರಿಕ ಎಚ್ಚರಕ್ಕಿಂತ ಶ್ರೇಷ್ಠ ಇರುತ್ತವೆ.

ಪ್ರಶ್ನೆ : ಅನುಷ್ಠಾನ ಕಾಲದಲ್ಲಿ ಬ್ರಹ್ಮರಾಕ್ಷಸಾದಿಗಳು ಎದುರಿಗೆ ಬಂದು ಕುಳಿತರೆ, ಸಾಧನೆಯನ್ನು ಹೇಗೆ ಮುಂದುವರಿಸಬೇಕು?

ಉತ್ತರ : ಅನುಷ್ಠಾನ ಕಾಲದಲ್ಲಿ ಬ್ರಹ್ಮರಾಕ್ಷಸಾದಿಗಳು ಎದುರಿಗೆ ಬಂದು ಕುಳಿತರೆ, ಅವುಗಳು ತನ್ನ ಭಾವದಲ್ಲಿ ತೋರಿದ್ದು ಎಂದು ತಿಳಿದು ಅವುಗಳ ಕಡೆಗೆ ಲಕ್ಷ್ಯ ಕೊಡದೆ, ತನ್ನ ಸ್ವರೂಪಾನುಸಂಧಾನವನ್ನು ಮುಂದುವರೆಸಬೇಕು.

ಪ್ರಶ್ನೆ : ಅಭ್ಯಾಸ ಕಾಲದಲ್ಲಿ ಶರೀರವು ಹೋದರೆ ಹೇಗೆ?

ಉತ್ತರ : ಅಭ್ಯಾಸ ಕಾಲದಲ್ಲಿ ಶರೀರವು ಹೋದರೆ ಹೋಗಲಿ, ನೀನು ಮೊದಲು ಧ್ಯಾನಕ್ಕೆ ಕೂಡ್ರು. ನಡುವೆ ಶರೀರ ಹೋದರೆ ಮುಂದೆ ಯೋಗನಿಷ್ಠನಾಗಿ ಜನ್ಮತಾಳುವಿ, ಇಲ್ಲದಿದ್ದರೆ ಸಂಸಿದ್ಧನಾಗುವಿ, ಸಂಸಿದ್ಧನಾದರೆ ಮುಗಿದೇ ಹೋಯಿತು.

ಪ್ರಶ್ನೆ : ಉತ್ತಮಾಧಿಕಾರಿಯು ಹೇಗೆ ಇರುವನು?

ಉತ್ತರ : ಉತ್ತಮಾಧಿಕಾರಿಯು ಬ್ರಹ್ಮನಿಷ್ಠರಲ್ಲಿಗೆ ಹೋದಾಗ, ಅವರು ಇವನಿಗೆ ಸಂಸಾರವಿಲ್ಲ ಎಂದೊಡನೆ, ಇವನು ತನ್ನ ಸಾಧನೆಯನ್ನು ತತ್‌ಕ್ಷಣ ಮುಗಿಸಿ ಬಿಡುವನು. ಸಂಸಾರಕ್ಕೆ ಇರುವಿಕೆ ಇದ್ದಿದ್ದರೆ ಅದು ಹೋಗುತ್ತಲೇ ಇರಲಿಲ್ಲ. ಅದು ಮೊದಲೇ ಇಲ್ಲ.

ಪ್ರಶ್ನೆ : ಸಂಪ್ರಜ್ಞಾತ ಮತ್ತು ಅಸಂಪ್ರಜ್ಞಾತ ಸಮಾಧಿ ಎಂದರೇನು?

ಉತ್ತರ : ಸಂಪ್ರಜ್ಞಾತ (ಸವಿಕಲ್ಪ) ಸಮಾಧಿ ಎಂದರೆ ಆನಂದಾನುಭವದ ತಿಳುವಳಿಕೆಯುಳ್ಳದ್ದು, ಅಸಂಪ್ರಜ್ಞಾತ (ನಿರ್ವಿಕಲ್ಪ) ಸಮಾಧಿಯಲ್ಲಿ ಅನುಭವ ಪ್ರಮಾಣ ಮುಗಿದು ಗಾಢನಿದ್ರೆಯಂತೆ ಆಗಿರುವದು, ಆನಂದ ಭಾವ ಅಳಿದು ಅರಿವು (ಆನಂದ) ಉಳಿಯುವದು.

ಪ್ರಶ್ನೆ : ಬ್ರಹ್ಮಸೂತ್ರ ಎಂದರೇನು?

ಉತ್ತರ : ಬ್ರಹ್ಮಸೂತ್ರ ಎಂದರೆ ಚಿದಾನಂದದ ಎಳೆಯು. ನಿದ್ರೆಯ ಸುಂದು ನಿದ್ರೆಯ ಸೂತ್ರವು, ಇದೇ ಧ್ಯಾನ ಧಾರಣವಾಗುತ್ತ ಗಾಢ ಮಬ್ಬಾಗುತ್ತ ಗಾಢನಿದ್ರೆಯು, ಅದರಂತೆ ಆನಂದ ಸೂತ್ರವನ್ನು ತಿಳುವಳಿಕೆಯಿಂದ ಹಿಡಿದು (ತೂರ್ಯ), ಅದೇ ಗಾಢವಾಗುತ್ತ ತೂರ್ಯಾತೀತವು.

ಪ್ರಶ್ನೆ : ಅಹಂಭಾವವು ಯಾವಾಗ ಬರುವದು?

ಉತ್ತರ : ಪರತತ್ವದ ಅನುಭೂತಿಯಲ್ಲಿ ಸದಾ ಇರಲಾರದ್ದರಿಂದ ಅಹಂಭಾವವು ಬರುವದು.

ಪ್ರಶ್ನೆ : ಸ್ವರೂಪದ ಅಭ್ಯಾಸವು ಯಾವಾಗ ನಡೆಯುವದು?

ಉತ್ತರ : ಸ್ವರೂಪದ ಅಭ್ಯಾಸವು ಅಡ್ಡಾಡುವಾಗ, ಉಣ್ಣುವಾಗ, ಕುಳಿತಾಗ, ನಿಂತಾಗ ಯಾವಾಗ ಬೇಕಾದಾಗ ನಡೆಯುವದು. "ಮನವೆತ್ತಲೆರಗಲತ್ತ ಯೋಗವಹುದ್ಯೆಸೆ", "ನೆನೆವವಗೆ ಮನೆಯೇನು ಮಠವೇನು, ನೆನೆಯದವನು ಪರ್ವತದ ತುದಿಯಲ್ಲಿದ್ದರೇನು ಸರ್ವಜ್ಞ". ಅಭ್ಯಾಸಿಯು ನಾಮ, ರೂಪ, ಕ್ರಿಯೆಗಳನ್ನು ತೆಗೆದುಹಾಕಿ, ಅಸ್ತಿ ಭಾತಿ ಪ್ರಿಯವನ್ನು ನೋಡುವನು.

ಪ್ರಶ್ನೆ : ಸಂಗದ ಪ್ರಭಾವವೇನು?

ಉತ್ತರ : ಸಂಗದಂತೆ ಸಂಸ್ಕಾರ, ಸಂಸ್ಕಾರದಂತೆ ಕರ್ಮ, ಕರ್ಮದಂತೆ ಕರ್ಮದ ಫಲ, ನಂತರ ಕರ್ಮದಂತೆ ಸಂಸ್ಕಾರಗಳು, ಸಂಸ್ಕಾರದಂತೆ ಸಂಗ.

ಪ್ರಶ್ನೆ : ಅಧ್ಯಾತ್ಮದಲ್ಲಿ ಮುಂದುವರಿಯಬೇಕಾದರೆ ಯಾವದರ ಅವಶ್ಯಕತೆ ಇರುವದು?

ಉತ್ತರ : ಅಧ್ಯಾತ್ಮದಲ್ಲಿ ಮುಂದುವರಿಯಬೇಕಾದರೆ ಪ್ರಬಲತರವಾದ ಹಿಂದಿನ ಅಧ್ಯಾತ್ಮ ಸಂಸ್ಕಾರ ಬೇಕು. ಈ ಜನ್ಮದಲ್ಲಿ ಬ್ರಹ್ಮನಿಷ್ಠರ ಸಂಗ ಬೇಕು ಮತ್ತು ಸ್ವರೂಪದ ಅಭ್ಯಾಸದಲ್ಲಿ ನಿರತನಾಗಬೇಕು.

ಪ್ರಶ್ನೆ : ಸ್ವರೂಪಾವ ಸ್ಥಿತಿಯನ್ನು ಪಡೆಯುವದು ಹೇಗೆ?

ಉತ್ತರ : ನಮಗೆ ಯಾವದರ ಬಗ್ಗೆ ಉತ್ಕಟ ಇಚ್ಛೆ ಇರುವದೋ ಅದು ಈಡೇರುವದು. ಅದರಂತೆ ನಮಗೆ ಮೋಕ್ಷದ ಬಗ್ಗೆ ಉತ್ಕಟ ಇಚ್ಛೆ ಆದರೆ ಅದೂ ಈಡೇರುವದು. ಮುಗಿಸಿಕೊಳ್ಳಬೇಕು ಎಂದರೆ ಸಾಧನೆಯು ಮೂರು ತಾಸುಗಳಲ್ಲಿಯೇ ಮುಗಿಯುವದು. ಉತ್ಕಟ ಇಚ್ಛೆಯಿಂದ ಇದೇ ಜನ್ಮದಲ್ಲಿಯೇ, ಇದೇ ಸೆಕೆಂಡಿನಲ್ಲಿಯೇ, ಸ್ವರೂಪಾವ ಸ್ಥಿತಿಯನ್ನು ಪಡೆಯುವದು ಸಾಧ್ಯವಿದೆ. ಜನಕನು ಒಂದು ಕ್ಷಣದಲ್ಲಿ ಸ್ವರೂಪಾವ ಸ್ಥಿತಿಯನ್ನು ಪಡೆದನು. ಇಂದು ನಾನು ಸಮಾಧಿ ಸ್ಥಿತಿಯನ್ನು ಪಡೆದೇ ತೀರುವೆನು ಎಂದು ಉತ್ಕಟ ಇಚ್ಛೆಯಾದರೆ ಅದೂ ಈಡೇರುವದು. ಬುದ್ಧ, ರಮಣ, ಕ್ರೈಸ್ತ ಮುಂತಾದವರು ಉತ್ಕಟ ಇಚ್ಛೆಯ ಮೂಲಕವೇ ತಮ್ಮ ಸ್ವರೂಪಾವ ಸ್ಥಿತಿಯನ್ನು ಪಡೆದುಕೊಂಡರು.



ಪ್ರಶ್ನೆ : ತಪಸ್ಸು ಎಂದರೇನು?

ಉತ್ತರ : ಮನಸ್ಸಿನ ಮೋಹವೆಂಬ ಮಾಲಿನ್ಯವನ್ನು ವಿವೇಕವೆಂಬ ಬೆಂಕಿಯಲ್ಲಿ ಸುಡುವದೇ ತಪಸ್ಸು.

ಪ್ರಶ್ನೆ : ಜಾಗರಣೆ ಎಂದರೇನು?

ಉತ್ತರ : ತನ್ನ ನಿಜದ ಬಗ್ಗೆ ಸದಾ ತಿಳುವಳಿಕೆಯೇ ಜಾಗರಣೆ.

ಪ್ರಶ್ನೆ : ಭಕ್ತಿ ಎಂದರೇನು?

ಉತ್ತರ : ಸ್ವರೂಪಾನುಸಂಧಾನವೇ ಭಕ್ತಿ.

ಪ್ರಶ್ನೆ : ಭಿಕ್ಷೆ ಎಂದರೇನು?

ಉತ್ತರ : ಭಿಕ್ಷೆ ನೀಡುವದೆಂದರೆ ಸ್ವರೂಪಕ್ಕೆ ಲಕ್ಷ್ಯವನ್ನು ಒಪ್ಪಿಸುವದು.

ಪ್ರಶ್ನೆ : ಬ್ರಹ್ಮಚಾರಿ ಯಾರು?

ಉತ್ತರ : "ಬ್ರಹ್ಮ ಚರತೇತಿ ಬ್ರಹ್ಮಚಾರಿ", ಹೆಂಡತಿ ಮಕ್ಕಳನ್ನು ಬಿಟ್ಟರೆ ಬ್ರಹ್ಮಚಾರಿಯಲ್ಲ. ಶರೀರ ಪ್ರಾರಬ್ಧಕ್ಕನುಸಾರವಾಗಿ ಏನಾದರೂ ಆಗಲಿ, ಅಂತಃಕರಣ ಉಪಹಿತ ಜೀವನು ಬ್ರಹ್ಮನೆಡೆಗೆ ಸಾಗುವದೇ ಬ್ರಹ್ಮಚರ್ಯ. ಮನಸ್ಸು ಬ್ರಹ್ಮನ ಕಡೆಗೆ ನಡೆದರೆ ಬ್ರಹ್ಮಚಾರಿ, ವಿಷಯಗಳ ಕಡೆಗೆ ನಡೆದರೆ ವಿಷಯಾಚಾರಿ.

ಪ್ರಶ್ನೆ : ಅನಾವರಣ ಎಂದರೇನು?

ಉತ್ತರ : ಸ್ವರೂಪದ ಅಜ್ಞಾನಾವರಣವನ್ನು ಭಂಗ ಮಾಡುವದೇ ಅನಾವರಣವು.

ಪ್ರಶ್ನೆ : ಆಕಾಶವನ್ನು ಯಾರು ಪಾರು ಮಾಡುವರು?

ಉತ್ತರ : ವಿಜ್ಞಾನಿಯು ಆಕಾಶವನ್ನು ಪಾರು ಮಾಡಲಾರನು, ನಿದ್ರೆಗೆ ಹೋದವನು ಮತ್ತು ಸ್ವರೂಪಾವ ಸ್ಥಿತಿಯನ್ನು ಪಡೆದವನು ಮಾತ್ರ ಆಕಾಶವನ್ನು ಪಾರು ಮಾಡುವನು.

ಪ್ರಶ್ನೆ : ಪಥ್ಯಾಹಾರ ಎಂದರೇನು?

ಉತ್ತರ : ಯಾವದೇ ಆಹಾರವನ್ನು ಮಿತಿಯಿಂದ ತೆಗೆದುಕೊಂಡರೆ ಅದು ಪಥ್ಯಾಹಾರವಾಗುವದು. ಸಾತ್ವಿಕ ಆಹಾರವನ್ನು ಮಿತಿಮೀರಿ ತಿಂದರೆ ಅದೇ ಅಪಥ್ಯೆಯಾಗುವದು. ವಿಚಾರ ಸಾತ್ವಿಕವಾದರೆ ಯಾವದೇ ಆಹಾರವು ಸಾತ್ವಿಕವೇ ಆಗುವದು. ಆಹಾರವು ಸಾತ್ವಿಕವಿದ್ದರೂ ಮನಸ್ಸು ರಜತಮಗಳಿಂದ ಕೂಡಿದ್ದರೆ ಸಾತ್ವಿಕ ಆಹಾರವೇ ವಿಷವಾಗುವದು.

ಪ್ರಶ್ನೆ : ಆನಂದವನ್ನು ಕೊಡಲು ತೆಗೆದುಕೊಳ್ಳಲು ಬರುವದೇನು?

ಉತ್ತರ : ಆನಂದವನ್ನು ಕೊಡಲಿಕ್ಕೂ ತೆಗೆದುಕೊಳ್ಳಲಿಕ್ಕೂ ಬರುವದಿಲ್ಲ. ಏಕೆಂದರೆ,

ಆನಂದವನ್ನು ಪಡೆಯಲು ಆನಂದವಾಗಿಯೇ ಉಳಿಯಬೇಕಾಗುತ್ತದೆ.

ಪ್ರಶ್ನೆ : ಮೋಕ್ಷವನ್ನು ಹೊಂದಲಿಕ್ಕೆ ಮುಖ್ಯ ಸಾಧನೆ ಯಾವದು?

ಉತ್ತರ : ಮೋಕ್ಷವನ್ನು ಹೊಂದಲಿಕ್ಕೆ ವಿವೇಕ ಒಂದು ಇದ್ದರೆ ಸಾಕು.

ಪ್ರಶ್ನೆ : ದೇವತೆಗಳು ಯಾರ ಸೇವೆಯನ್ನು ಮಾಡುವವು?

ಉತ್ತರ : ದೇವತೆಗಳು ಇಂದ್ರಿಯಗಳನ್ನು ಗೆದ್ದಿರುವವರ ಸೇವೆಯನ್ನು ಮಾಡುವವು. ದೇವತೆಗಳು ಇಂದ್ರಿಯಗಳನ್ನು ಗೆದ್ದಿರುವದಿಲ್ಲ.

ಪ್ರಶ್ನೆ : ಶರೀರದ ರೋಗವು ಯಾವಾಗ ಹೋಗುವದು?

ಉತ್ತರ : ಒಂದು ರೋಗವು ಹೋದರೆ ಮತ್ತೊಂದು ರೋಗವು ಬರುವದು. ಶರೀರದ ರೋಗವನ್ನು ಯಾರೂ ಪೂರ್ಣ ಕಳೆದುಕೊಳ್ಳಲಾರರು. ಶರೀರವನ್ನು ಬಿಟ್ಟರೆ ಇನ್ನೊಂದು ಶರೀರವು ಬರುವದು. ಶರೀರ ಭಾವವನ್ನು ಬಿಟ್ಟರೆ ಶರೀರದ ರೋಗವು ಹೋಗುವದು.

ಪ್ರಶ್ನೆ : ಸೂಕ್ಷ್ಮ ಶರೀರವು ಯಾವಾಗ ನಾಶವಾಗುವದು?

ಉತ್ತರ : ತೂರ್ಯವನ್ನು ಹೊಂದಿದಾಗ ಮಾತ್ರ ಸೂಕ್ಷ್ಮ ಶರೀರವು ನಾಶವಾಗುವದು. ಸೂಕ್ಷ್ಮ ಶರೀರವು ಕಾರಣ ಶರೀರದಲ್ಲಿ ಅಡಗುವದು ಮತ್ತೆ ಉದಯಿಸುವದು.

ಪ್ರಶ್ನೆ : ಅಧ್ಯಾತ್ಮ ವಿದ್ಯೆಯ ಪ್ರಯೋಜನವೇನು?

ಉತ್ತರ : ಅಧ್ಯಾತ್ಮ ವಿದ್ಯೆಯು ದುಃಖ ಬಿಡುಗಡೆಗಾಗಿ ಇರುವದು.

ಪ್ರಶ್ನೆ : ಕುಂಡಲಿನಿ ಷಟ್ ಚಕ್ರಗಳು ನಿಜವಾಗಿ ಇರುವವೇ?

ಉತ್ತರ : ಶರೀರವೇ ಕಲ್ಪಿತವು, ಆದ್ದರಿಂದ ಕುಂಡಲಿನಿ ಷಟ್ ಚಕ್ರಗಳೂ ಕಲ್ಪಿತವೇ.

ಪ್ರಶ್ನೆ : ಪ್ರಾಣ ಮತ್ತು ಮನಸ್ಸಿನ ಮೂಲಗಳು ಯಾವವು?

ಉತ್ತರ : ಪ್ರಾಣದ ಮೂಲ ವೈಕಾರಿಕ ಅಹಂಕಾರವು, ಮನಸ್ಸಿನ ಮೂಲ ವೈಕಾರಿಕ ಮತ್ತು ತೈಜಸ ಅಹಂಕಾರಗಳ ಮಿಶ್ರಣ. ಪ್ರಾಣ ನಿಂತಾಗ ಮನಸ್ಸು ನಿಲ್ಲುವದು. ಏಕೆಂದರೆ ಪ್ರಾಣದ ಅಂಶವು ಮನಸ್ಸಿನಲ್ಲಿ ಇದೆ. ವಿಷಯ ವಾಸನೆಗಳು ಮನಸ್ಸಿನಲ್ಲಿರುವವು, ಪ್ರಾಣದಲ್ಲಿ ಇಲ್ಲ. ನಿದ್ರೆಯಲ್ಲಿ ಮನಸ್ಸು ಅಡಗಿದಾಗ ಪ್ರಾಣವು ನಿಲ್ಲುವದಿಲ್ಲ. ಏಕೆಂದರೆ ಮನಸ್ಸಿನ ಅಂಶ ಪ್ರಾಣದಲ್ಲಿ ಇಲ್ಲ, ಆದ್ದರಿಂದ ಪ್ರಾಣಾಯಾಮದಿಂದ ವಿಷಯ ವಾಸನೆಗಳು ನಾಶವಾಗುವದು ಸಾಧ್ಯವಿಲ್ಲ.

ಪ್ರಶ್ನೆ : ಯಾವ ಯಾವ ಜೀವಿಗಳಿಗೆ ಯಾವ ಯಾವ ಅವಸ್ಥೆಗಳು ಇರುವವು?

ಉತ್ತರ : ಕಲ್ಲು, ಮಣ್ಣು ಸುಪ್ತಾವಸ್ಥೆಯಲ್ಲಿ ಇವೆ. ಗಿಡ ಮರಗಳು ಸ್ವಪ್ನಾವಸ್ಥೆಯಲ್ಲಿವೆ.



ಪಶು ಪಕ್ಷಿ ಮಾನವರಿಗೆ ಮೂರೂ ಅವಸ್ಥೆಗಳು ಇವೆ. ಪ್ರಾಣಿಗಳಿಗೆ ಮೂರೂ ಅವಸ್ಥೆಗಳು ಇಲ್ಲದಿದ್ದರೆ ಕಪ್ಪೆಗಳು ತಮ್ಮ ಸ್ಥಳಕ್ಕೆ ತಿರುಗುವದು, ಎತ್ತುಗಳು ನೊಗ ತೆಗೆದುಕೊಳ್ಳುವದು, ನಾಯಿಗಳು ಕರೆದರೆ ಬರುವದು ಇವು ನಡೆಯುತ್ತಿರಲಿಲ್ಲ.

ಪ್ರಶ್ನೆ : ಪ್ರಕಾಶ, ದೊಡ್ಡ ಧ್ವನಿ, ಸೂಕ್ಷ್ಮ ಶರೀರಗಳು ಯಾವಾಗ ತೋರುವವು?

ಉತ್ತರ : ಸ್ವರೂಪ ನಿಷ್ಠೆಯಿಂದ ಜಾರಿದಾಗ ಇವು ತೋರುವವು.

ಪ್ರಶ್ನೆ : ಯಾವದು ಶ್ರೇಷ್ಠವಾದ ಶಾಸ್ತ್ರವು?

ಉತ್ತರ : ಅನುಭವವು ಶ್ರೇಷ್ಠವಾದ ಶಾಸ್ತ್ರವು. ಏಕೆಂದರೆ ಅದನ್ನು ತಪ್ಪು ಎಂದು ಯಾರಿಗೂ ಹೇಳಲಿಕ್ಕೆ ಬರುವದಿಲ್ಲ.

ಪ್ರಶ್ನೆ : ಶರೀರದಲ್ಲಿ ಬಲಾವಣೆ ಯಾವಾಗ ಆಗುವದು?

ಉತ್ತರ : ಭಾವದಲ್ಲಿ ಬದಲಾವಣೆಯಾದಾಗ ಶರೀರದಲ್ಲಿ ಬದಲಾವಣೆಯಾಗುವದು.

ಪ್ರಶ್ನೆ : ಸುಪ್ತಿ ಯಾವದು?

ಉತ್ತರ : ತನ್ನ ನಿಜವನ್ನು ಹೊಂದುವದೇ ಸುಪ್ತಿಯು.

ಪ್ರಶ್ನೆ : ಯಾವಾಗ ವೈರಾಗ್ಯವು ಉಂಟಾಗುವದು?

ಉತ್ತರ : ವಿವೇಕ ಉದಯವಾದರೆ ಮಾತ್ರ ದುಃಖವಿರಲಿ ಅಥವಾ ಇಲ್ಲದೆ ಇರಲಿ ವೈರಾಗ್ಯವು ಉಂಟಾಗುವದು.

ಪ್ರಶ್ನೆ : ಮುನಿ ವೃತ್ತಿ ಎಂದರೇನು?

ಉತ್ತರ : ಮನನ ವೃತ್ತಿಯೇ ಮುನಿ ವೃತ್ತಿಯು.

ಪ್ರಶ್ನೆ : ಗುರುವಿನ ಗುಲಾಮನಾಗುವದೆಂದರೇನು?

ಉತ್ತರ : ಗುರುವಿನ ಗುಲಾಮನಾಗುವದೆಂದರೆ ತನ್ನ ಅರಿವಿನ ಗುಲಾಮನಾಗುವದು. ಏಕೆಂದರೆ ತನ್ನ ಅರಿವೇ ತನ್ನ ಗುರು.

ಪ್ರಶ್ನೆ : ಕರ್ಮಫಲವನ್ನು ಬಿಡು ಇದರ ಅರ್ಥವೇನು?

ಉತ್ತರ : ಕರ್ಮವನ್ನು ಮಾಡುವಂತೆ ಮಾಡು, ನಿನ್ನ ಪ್ರಾರಬ್ಧ ಕರ್ಮದಂತೆ ಫಲ ಬರುವದು. ಇಂಥದೇ ಫಲ ಬರಬೇಕೆಂಬುದನ್ನು ಬಿಡು.

ಪ್ರಶ್ನೆ : 'ದೀಪದಾನ' ಎಂದರೇನು?

ಉತ್ತರ : 'ಪ್ರಕಾಶ'ವೆಂದರೆ ಜ್ಞಾನ. 'ದೀಪದಾನ'ವೆಂದರೆ ಪ್ರಕಾಶವನ್ನು (ಜ್ಞಾನ) ಕೊಡುವದು. ಜಡ ದೀಪವು ವ್ಯಾವಹಾರಿಕ ಎಚ್ಚರಿಕೆಯಲ್ಲಿ ಜಡ ವಸ್ತುಗಳನ್ನು ಮಾತ್ರ ಬೆಳಗುವದು. ಆದರೆ ಅದು ಮಾನವನ ಅಜ್ಞಾನವನ್ನು ದೂರ

ಮಾಡಲಾರದು. ಆದಕಾರಣ ಚೈತನ್ಯಮಯವಾದ ಸಚ್ಚಿದಾನಂದದ ಜ್ಞಾಪನೆಯೇ ದೀಪದಾನವು.

ಪ್ರಶ್ನೆ : ಸ್ವರೂಪದ ಅಭಿಮಾನವು ಅಹಂಕಾರವೇನು?

ಉತ್ತರ : ಸ್ವರೂಪದ ಅಭಿಮಾನವು ಅಹಂಕಾರವಲ್ಲ, ಅದು ಭಕ್ತಿ. ತಾನಲ್ಲದ್ದಕ್ಕೆ ತಾನೆನ್ನುವದೇ ಅಹಂಕಾರ.

ಪ್ರಶ್ನೆ : "ಸ್ವಧರ್ಮೇ ನಿಧನಂ ಶ್ರೇಯಃ" ಅಂದರೇನು?

ಉತ್ತರ : ಸಚ್ಚಿದಾನಂದ ಸ್ವರೂಪದಲ್ಲಿ ಮನಸ್ಸು ನಾಶವಾಗುವದೇ ಶ್ರೇಯಸ್ಸು.

ಪ್ರಶ್ನೆ : ಸಾಕ್ಷರಿ ಯಾರು?

ಉತ್ತರ : ಸ್ವರೂಪವನ್ನು ಅನುಭವಿಸಿದವನೇ ಸಾಕ್ಷರಿಯು. ಬರೇ ಕಾಗದದ ಮೇಲಿನ ಕರೆಗೆರೆ ಕಲಿತವನು ನಿರಕ್ಷರ ಕುಕ್ಷಿ.

ಪ್ರಶ್ನೆ : ಹಾರುವ ಎಂದರೇನು?

ಉತ್ತರ : ಮೂರು ಅವಸ್ಥೆಗಳಿಂದ ಇರುವಿಗೆ ಹಾರಿದವನು ಹಾರುವ.

ಪ್ರಶ್ನೆ : ನಿಷ್ಠೆಯಿಂದ ಅಧ್ಯಾತ್ಮದಲ್ಲಿ ತೊಡಗಿದ ಫಲವೇನು?

ಉತ್ತರ : ನಿಷ್ಠೆಯಿಂದ ಅಧ್ಯಾತ್ಮದಲ್ಲಿ ತೊಡಗಿದರೆ (ವೈರಾಗ್ಯ ಮತ್ತು ಜ್ಞಾನನಿಷ್ಠೆ) ರಾಕ್ಷಸಾದಿಗಳು ಅವರಿಗೆ ಸಹಾಯಕವಾಗುವವು ಮತ್ತು ಅವರಿಗೆ ಕಾವಲನ್ನು ಇಡುವವು. ಅವಿವೇಕಿ ಪಿಶಾಚಿಗಳು ದೂರ ಹೋಗುವವು ಮತ್ತು ಸ್ವಲ್ಪ ತಿಳುವಳಿಕೆಯುಳ್ಳ ರಾಕ್ಷಸ, ಬ್ರಹ್ಮ ರಾಕ್ಷಸಗಳು ನೀವು ಹೇಳಿದಂತೆ ಕೇಳುವವು.

ಪ್ರಶ್ನೆ : ಯಾವದಕ್ಕೆ ಸ್ವಾತಂತ್ರ್ಯವಿದೆ?

ಉತ್ತರ : ನೀವು ಅಂತರ್ಮುಖಿಯಾಗಿ ನಿಮ್ಮ ಸ್ವರೂಪವನ್ನು ಹೊಂದಲು ಸ್ವಾತಂತ್ರ್ಯವಿದೆ, ಮತ್ತಾವದಕ್ಕೂ ಸ್ವಾತಂತ್ರ್ಯವಿಲ್ಲ. ಶರೀರ ಯಾತ್ರೆಯು ಪರತಂತ್ರವು, ಆನಂದ ಹೊಂದುವದು ಮಾತ್ರ ಸ್ವತಂತ್ರವಿದೆ. ವಿಷಯಗಳನ್ನು ಹೊಂದುವದು ಪರತಂತ್ರವಿದೆ.

ಪ್ರಶ್ನೆ : 'ಮಂತ್ರ'ವೆಂದರೇನು?

ಉತ್ತರ : ಬಂಧನ ಮುಕ್ತ ಮಾಡುವದೇ ಮಂತ್ರವು. "ಮನನಾತ್ ತ್ರಾಯತೆ ಮಂತ್ರ".

ಪ್ರಶ್ನೆ : ಸ್ವರೂಪವನ್ನು ಹೊಂದಿದ್ದರ ಫಲವೇನು?

ಉತ್ತರ : ಸ್ವರೂಪವನ್ನು ಹೊಂದಿದಾಗ ನಿಮ್ಮ ವ್ಯಾವಹಾರಿಕ ಹೊಣೆಗಾರಿಕೆಯನ್ನು ದೇವತಾ ಶಕ್ತಿಗಳು ವಹಿಸುತ್ತವೆ. ಪ್ರಪಂಚವೇ ಅವನ ಅನುಗ್ರಹವನ್ನು ಬಯಸುತ್ತದೆ.



ಪ್ರಶ್ನೆ : ಪ್ರಾಚೀನ ಭಾರತೀಯ ಶಿಕ್ಷಣ ಪದ್ಧತಿಯ ವಿಶೇಷವೇನು?

ಉತ್ತರ : ಪ್ರಾಚೀನ ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಬಾಲ್ಯದಲ್ಲಿ ಬ್ರಹ್ಮವಿದ್ಯೆಯ ಅಭ್ಯಾಸ, ಯೌವನದಲ್ಲಿ ಅನಾಸಕ್ತಿಯ ಭೋಗ, ವಾನಪ್ರಸ್ಥಾಶ್ರಮದಲ್ಲಿ ಆತ್ಮಧ್ಯಾನ, ದೇಹ ಬಿಡುವಾಗ ಮುಕ್ತಿ, ಇದೇ ಪ್ರಾಚೀನ ಭಾರತೀಯ ಶಿಕ್ಷಣ ಪದ್ಧತಿಯ ವಿಶೇಷವು.

ಪ್ರಶ್ನೆ : 'ನಾಮಸ್ಮರಣೆ' ಎಂದರೇನು?

ಉತ್ತರ : 'ನಾಮಸ್ಮರಣೆ' ಎಂದರೆ ನಾಮ ರೂಪ ಕ್ರಿಯೆ ತೆಗೆದು, ಅಸ್ತಿ ಭಾತಿ ಪ್ರಿಯವನ್ನು ಅನುಸಂಧಾನ ಮಾಡುವದು.

ಪ್ರಶ್ನೆ : ಮಹಾಕಾರಣ ಶರೀರದ ಲಕ್ಷಣಗಳೇನು?

ಉತ್ತರ : ಮಹಾಕಾರಣ ಶರೀರವು ಸಮೇಷ್ಠಿಯು (ಈಶ್ವರನ ಸ್ಥಿತಿಯು). ಅವನು ಎಲ್ಲ ಜೀವಿಗಳ ಎಲ್ಲ ಅವಸ್ಥೆಗಳನ್ನು ತಿಳಿಯುವನು. ಆಗ ಕರ್ತುಮ್ ಅಕರ್ತುಮ್ ಅನ್ಯಥಾ ಕರ್ತುಮ್ ಶಕ್ತಿ ಇರುವದು. ವ್ಯಷ್ಠಿ ಮುಖಾಂತರ ಅಲ್ಪಜ್ಞತ್ವ, ಅಲ್ಪಶಕ್ತಿತ್ವ ಇರುವದು. ಮಹಾಕಾರಣ ದೇಹದ ಸ್ಥಿತಿಯು ಸರ್ವಜ್ಞತ್ವ ಸರ್ವಕರ್ತೃತ್ವ ಸರ್ವ ಶಕ್ತಿತ್ವವು ಇರುವದು. ಮಹಾಕಾರಣ ದೇಹದ ಸ್ಥಿತಿಯಲ್ಲಿ ಭೂತ, ವರ್ತಮಾನ, ಭವಿಷ್ಯತ್ತಿನ ಎಲ್ಲ ಜ್ಞಾನವು ಇರುವದು.

ಪ್ರಶ್ನೆ : ಉಪವಾಸ ಎಂದರೇನು?

ಉತ್ತರ : ಮನಸ್ಸು ತನ್ನ ನಿಜಸ್ವರೂಪದ ಸಾನಿಧ್ಯದಲ್ಲಿರುವದೇ ಉಪವಾಸವು. ಉಣ್ಣಬೇಕೆಂಬ ಆಸೆ ಹೋಗುವದೇ ಉಪವಾಸವು.

ಪ್ರಶ್ನೆ : ದಡ್ಡರು ಯಾರು?

ಉತ್ತರ : ಫಲಕ್ಕೆ ಗುರಿಯಾದವರು ದಡ್ಡರು, ಅಜ್ಞಾನಿಗಳು.

ಪ್ರಶ್ನೆ : ಅಜ್ಞಾನವು ಹೇಗೆ ಬಂದಿತು?

ಉತ್ತರ : ಅಜ್ಞಾನವು ಹೇಗೆ ಬಂದಿತು ಎಂಬುದನ್ನು ಯಾವ ಚದುರನು ವಿಧಿಸಿ ನುಡಿಯಲಿಲ್ಲ.

ಪ್ರಶ್ನೆ : 'ಉಪಾಸನೆ' ಎಂದರೇನು?

ಉತ್ತರ : 'ಉಪಾಸನೆ' ಎಂದರೆ ಅಂತಃಕರಣ ವೃತ್ತಿಯು ಸ್ವರೂಪದ ಸನ್ನಿಧಿಯಲ್ಲಿ ಆಸೀನವಾಗುವದು.

ಪ್ರಶ್ನೆ : ಯುದ್ಧವೆಂದರೇನು?

ಉತ್ತರ : ಕಾಮ ಕ್ರೋಧಗಳನ್ನು ಗೆದ್ದು, ಸ್ವರೂಪವನ್ನು ಹೊಂದುವದೇ ಯುದ್ಧ, ಜಗತ್ತನ್ನು ಗೆಲ್ಲುವದು ಯುದ್ಧವಲ್ಲ.

ಪ್ರಶ್ನೆ : ದೃಶ್ಯವನ್ನು ಹೇಗೆ ನೋಡಬೇಕು?

ಉತ್ತರ : ಕಣ್ಣು ಎಲ್ಲವನ್ನು ನೋಡುತ್ತದೆ, ಆದರೆ ಅದಕ್ಕೆ ಏನೂ ಹತ್ತುವದಿಲ್ಲ, ಆದರೆ ಮನಸ್ಸಿಗೆ ಹತ್ತುವದು. ಏನು ನೋಡಿದರೂ ಮನಸ್ಸಿಗೆ ಹತ್ತದಂತೆ ನೋಡಬೇಕು.

ಪ್ರಶ್ನೆ : ಶೌಚವೆಂದರೇನು?

ಉತ್ತರ : ಮಣ್ಣು ನೀರಿನಿಂದ ಶರೀರವನ್ನು ತೊಳೆಯುವದೇ ಬಾಹ್ಯ ಶೌಚವು, ವಿವೇಕದಿಂದ ಮನಸ್ಸನ್ನು ತೊಳೆಯುವದೇ ಅಂತರ್ಶೌಚವು. ಶರೀರ ತಾನೆಂದು ತಿಳಿದುಕೊಳ್ಳುವದು ಅಶೌಚವು, ಆತ್ಮನು ತಾನೆಂದು ತಿಳಿದುಕೊಳ್ಳುವದೇ ಶೌಚವು.

ಪ್ರಶ್ನೆ : ಜ್ಞಾನಯೋಗ ಎಂದರೇನು?

ಉತ್ತರ : ಜ್ಞಾನಯೋಗ ಎಂದರೆ, ದೇಹ ತಾನು ಎಂಬ ಭಾವವನ್ನು ತೆಗೆಯುವದು. ಉಳಿದ ಎಲ್ಲ ಯೋಗಗಳು ದೇಹ ತಾನೆಂಬ ಭಾವದಿಂದಲೇ ಮಾಡಲ್ಪಡುತ್ತವೆ.

ಪ್ರಶ್ನೆ : ಲಿಂಗಧಾರಣವೆಂದರೇನು?

ಉತ್ತರ : ಸ್ವರೂಪವನ್ನು ಚಿತ್ತವೃತ್ತಿಯಲ್ಲಿ ಧಾರಣ ಮಾಡುವದೇ ಲಿಂಗಧಾರಣವು.

ಪ್ರಶ್ನೆ : 'ಕೃಚ್ಛ ಚಾಂದ್ರಾಯಣ' ಎಂದರೇನು?

ಉತ್ತರ : 'ಕೃಚ್ಛ' ಎಂದರೆ ಎರಡು ದಿನಕ್ಕೊಮ್ಮೆ ಊಟ, 'ಚಾಂದ್ರಾಯಣ'ವೆಂದರೆ ಹುಣ್ಣಿಮೆಯ ದಿನ ಹದಿನೈದು ತುತ್ತು ಊಟ, ನಂತರ ಅಮವಾಸ್ಯೆಯವರೆಗೆ ಒಂದೊಂದು ತುತ್ತು ಕಡಿಮೆ ಮಾಡುತ್ತ ಅಮವಾಸ್ಯೆಯ ದಿನ ಪೂರ್ಣ ಉಪವಾಸವಿರುವದು, ನಂತರ ಮೂರು ದಿನಕ್ಕೊಮ್ಮೆ ಊಟ ಮಾಡುವದು.

ಪ್ರಶ್ನೆ : ಸೂಕ್ಷ್ಮ ಶರೀರ ಅನಾಹತ ನಾದಗಳು ಯಾವಾಗ ಗೋಚರವಾಗುವವು?

ಉತ್ತರ : ಕೇವಲ ಅಚ್ಚ ಸುಖದ ಕಡೆಗೆ ಲಕ್ಷ್ಯ ಕೊಡುವವನಿಗೆ ಸೂಕ್ಷ್ಮ ಶರೀರ ಮತ್ತು ಅನಾಹತ ನಾದಗಳು ಗೋಚರಿಸುವವು, ಇವುಗಳನ್ನು ಬಿಟ್ಟು ಅಚ್ಚ ಸುಖದಲ್ಲಿ ತಲ್ಲೀನನಾಗಬೇಕು. ತನ್ನ ಅಭ್ಯಾಸದಲ್ಲಿ ಪ್ರಗತಿಯನ್ನು ಹೊಂದಿದನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವದಕ್ಕೆ ಸೂಕ್ಷ್ಮ ಶರೀರ ಮತ್ತು ಅನಾಹತ ನಾದಗಳು ಮೈಲುಗಲ್ಲುಗಳು. ಸಾಧಕನಿಗೆ ತನ್ನ ಮತ್ತು ಉಳಿದವರ ಸೂಕ್ಷ್ಮ ಶರೀರಗಳು ದೃಶ್ಯವಾಗಿ ಕಾಣಬೇಕು. ಇನ್ನೊಬ್ಬರ ಶರೀರದಲ್ಲಿ ಇನ್ನೊಂದು ಸೂಕ್ಷ್ಮ ಶರೀರವು ಪ್ರವೇಶಿಸಿದೆಯೋ ಇಲ್ಲವೋ ಎಂಬುದು ತಿಳಿಯಬೇಕು. ಸಾಧನೆಯಲ್ಲಿ ತೊಡಗಿದರೆ ರಾಕ್ಷಸ ಪಿಶಾಚಿ ದೇವಾನುದೇವತರು ಕಾಣಿಸುವರು. ಕೇಲವರು ಸೇವೆ ಮಾಡಲು, ಇನ್ನೂ ಕೆಲವರು ಶ್ರವಣ ಮಾಡಲು ಬಂದಿರುವರು. ತನ್ನ ಜಡ ಸೂಕ್ಷ್ಮ ಕಾರಣ ಶರೀರಗಳಿಗೆ ಸಾಕ್ಷಿಯಾಗಬೇಕಾಗುತ್ತದೆ. ತನ್ನ ಸೂಕ್ಷ್ಮ ಶರೀರವು ತನಗೆ ದೃಶ್ಯವಾದಾಗ, ಉಳಿದ ಎಲ್ಲ ಸೂಕ್ಷ್ಮ ಶರೀರಗಳು ಕಾಣಿಸುವವು.



ಪ್ರಶ್ನೆ : ಇಡೀ ವಿಶ್ವಕ್ಕೆ ಸಾಧನ ಸೂತ್ರವು ಯಾವದು?

ಉತ್ತರ : ಸುಖ ದುಃಖ ವಿವೇಕ ಮತ್ತು ಆತ್ಮಾನಾತ್ಮ ವಿವೇಕ, ವಿವೇಕದಿಂದ ವೈರಾಗ್ಯ, ವೈರಾಗ್ಯದಿಂದ ನೀತಿ ಮತ್ತು ಆನಂದ ಸೂತ್ರ, ಇದರಿಂದ ಜ್ಞಾನ ಸಮಾಧಿ, ಇದು ವಿಶ್ವಕ್ಕೆ ಸಾಧನ ಸೂತ್ರವು.

ಪ್ರಶ್ನೆ : 'ಯಾತ್ರೆ' ಎಂದರೇನು?

ಉತ್ತರ : "ಯಾತನೇತ್ ತ್ರಾಯತೇತಿ ಯಾತ್ರಾ" ಅಂದರೆ ದುಃಖದಿಂದ ಬಿಡುಗಡೆ ಮಾಡುವದೇ ಯಾತ್ರೆಯು.

ಪ್ರಶ್ನೆ : ವಿಷಯದ ಆನಂದವೆಷ್ಟು, ಗಾಢನಿದ್ರೆಯ ಆನಂದವೆಷ್ಟು?

ಉತ್ತರ : ಐದು ಸೆಕೆಂಡು ನಾಲಿಗೆಯ ಸುಖ, ಐದು ಸೆಕೆಂಡು ಗಾಯನ ಕೇಳುವ ಸುಖ, ಐದು ಸೆಕೆಂಡು ಸುವಾಸನೆಯ ಸುಖ, ಹೀಗೆ ಸಾಧಾರಣವಾಗಿ ಅರ್ಧ ನಿಮಿಷದ ಸುಖ ವಿಷಯದ್ದು, ಗಾಢನಿದ್ರೆಯ ಸುಖ ಆರು ತಾಸಿನದು. ವಿಷಯದ ಆನಂದಕ್ಕೂ ನಿದ್ರೆಯ ಆನಂದಕ್ಕೂ ಪ್ರಮಾಣವು 1:700 ಇರುವದು. ಹದಿನೆಂಟು ತಾಸಿನ ಎಚ್ಚರದಲ್ಲಿ ಅರ್ಧ ನಿಮಿಷ ಸುಖ, ಉಳಿದ ವೇಳೆಯಲ್ಲಿ ಶರೀರ ಮತ್ತು ಮನಸ್ಸು ದಣಿದು ದುಃಖವಾಗುವದು. ಹದಿನೆಂಟು ತಾಸಿನಲ್ಲಿ ಅರ್ಧ ನಿಮಿಷ ಸುಖ, ಉಳಿದದ್ದು ದುಃಖ, ಇದರ ಪ್ರಮಾಣ 1:2000. ಒಂದು ಪಟ್ಟು ಸುಖ, 2000 ಪಟ್ಟು ದುಃಖವನ್ನು ಹೊಂದಬೇಕಾಗುವದು.

ಪ್ರಶ್ನೆ : ವಿಷಯ ವಾಸನೆಗಳಿಗೆ ಏನು ಕಾರಣ?

ಉತ್ತರ : ದೇಹಭಾವವೇ ವಿಷಯ ವಾಸನೆಗಳಿಗೆ ಕಾರಣ.

ಪ್ರಶ್ನೆ : ವೃದ್ಧಾವಸ್ಥೆಯಲ್ಲಿ ಧ್ಯಾನವನ್ನು ಮಾಡುವದು ಹೇಗೆ?

ಉತ್ತರ : ಶರೀರವು ಅಶಕ್ತವಾದಾಗ ಮತ್ತು ವೃದ್ಧಾವಸ್ಥೆಯಲ್ಲಿ ಕೂಡ್ರಲಿಕ್ಕೆ ಬರದಿದ್ದರೆ, ಮಲಗಿಕೊಂಡೇ ಧ್ಯಾನವನ್ನು ಮಾಡಬೇಕು.

ಪ್ರಶ್ನೆ : ಸಮಾಧಿಯನ್ನು ಹೊಂದಲು ಗುಳಿಗೆಗಳನ್ನು ತಯಾರು ಮಾಡಿರುವರೋ?

ಉತ್ತರ : ನಿದ್ರೆ ಮಾಡಲು ಗುಳಿಗೆಗಳನ್ನು ತಯಾರು ಮಾಡಿರುವರು. ಆದರೆ ಸಮಾಧಿಯನ್ನು ಹೊಂದಲು ಗುಳಿಗೆಗಳನ್ನು ತಯಾರು ಮಾಡಿಲ್ಲ.

ಪ್ರಶ್ನೆ : ಪೂರ್ಣ ತೃಪ್ತಿ ಎಂದರೇನು?

ಉತ್ತರ : ವಿಷಯಗಳ ವಾಸನಾ ನಾಶಮಾಡುವದೇ ಪೂರ್ಣ ತೃಪ್ತಿ.

ಪ್ರಶ್ನೆ : ವಿವೇಕವು ಹೇಗೆ ಉಂಟಾಗುವದು?

ಉತ್ತರ : ಮಹಾತ್ಮರ ಚರಿತ್ರೆ, ಬೋಧ ಮತ್ತು ಸಂಗದಿಂದ ವಿವೇಕವು ಉದಯಿಸುವದು.

ಪ್ರಶ್ನೆ : ಅಪರಾಧ ಕರ್ಮವು ಯಾವದು?

ಉತ್ತರ : ಕರ್ತೃತ್ವ, ಭೋಕ್ತೃತ್ವ ಭಾವನೆಯಿಂದ ಮಾಡಿದ ಕರ್ಮವೇ ಅಪರಾಧ ಕರ್ಮವು, ಕರ್ಮಫಲವೇ ಅಪರಾಧಕ್ಕೆ ಶಿಕ್ಷೆಯು.

ಪ್ರಶ್ನೆ : ಸಾಧನೆಯು ಹೇಗೆ ನಡೆಯಬೇಕು?

ಉತ್ತರ : ದಿನಾಲು ಶ್ರವಣ ತಪ್ಪಿಸಬಾರದು, ಶ್ರವಣದ ಮೂರು ಪಟ್ಟು ಮನನ, ಮನನದ ಮೂರು ಪಟ್ಟು ನಿಧಿಧ್ಯಾಸನ, ಹೀಗೆ ನಡೆದರೆ ಅಧ್ಯಾತ್ಮಿಕ ಪ್ರಗತಿಯು ಉಂಟಾಗುವದು.

ಪ್ರಶ್ನೆ : ತುರ್ಯಾತೀತವೆಂದರೇನು?

ಉತ್ತರ : ತಾನು ಆನಂದವೆಂದು ನೆನಪಿಸುತ್ತ ಅದು ಕಡೆಗೆ ವಿಸ್ಮರಣವಾಗುವದು, ಅದು ತಾನಿಪ್ಪ ಇರವದು.

ಪ್ರಶ್ನೆ : ಆರಾಮವು ಎಲ್ಲಿರುವದು?

ಉತ್ತರ : ರಾಗದ ವಿಷಯವು ಸಿಕ್ಕಾಗ ಮನಸ್ಸು ನಿಶ್ಚಲವಾಗಿ ಸುಖವು ಒಳಗೇ ಅನುಭವಕ್ಕೆ ಬರುವದು. ನಿದ್ರೆಯ ಆರಾಮವು ಸಹ ಒಳಗೇ ಇರುವದು.

ಪ್ರಶ್ನೆ : ಅಧ್ಯಾತ್ಮದ ಪ್ರಚಾರ ಹೇಗೆ ಆಗುವದು?

ಉತ್ತರ : ವಿಚಾರದಿಂದ ಆಚಾರ ಬರುವದು, ಆಚಾರದಿಂದ ಪ್ರಚಾರವಾಗುವದು. ಆಚರಣೆ ಇಲ್ಲದಿದ್ದರೆ ಎಷ್ಟು ಪ್ರಚಾರ ಮಾಡಿದರೂ ಪ್ರಚಾರ ಆಗುವದಿಲ್ಲ.

ಪ್ರಶ್ನೆ : ಅಧ್ಯಾತ್ಮ ಸಾಧನೆಗೆ ವಿಘ್ನಗಳು ಯಾವವು?

ಉತ್ತರ : ಅಧ್ಯಾತ್ಮ ಸಾಧನೆಗೆ ವಿಷಯ ವಾಸನೆ, ನಿದ್ರೆ, ಸೂಕ್ಷ್ಮ ಶರೀರ ಇವೇ ವಿಘ್ನಗಳು, ಇವುಗಳನ್ನು ಮೀರಿ ಸುಖ ಹೊಂದಬೇಕು. ರಾಕ್ಷಸ ಪಿಶಾಚಿಗಳೆಲ್ಲವೂ ನಿನ್ನ ಕಲ್ಪನೆಯಲ್ಲಿರುವವು. ಮನನಶೀಲನಾದರೆ ವಿಷಯ ವಾಸನೆ ಕಡಿಮೆಯಾಗುವದು. ಮಿತ ಆಹಾರದಿಂದ ನಿದ್ರೆಯು ಕಡಿಮೆಯಾಗುವದು.

ಪ್ರಶ್ನೆ : ಅಹಂಕಾರವು ಯಾವಾಗ ನಾಶವಾಗುವದು?

ಉತ್ತರ : ಬ್ರಹ್ಮಾಕಾರವೃತ್ತಿಯಾಗಿ ಬ್ರಹ್ಮನೇ ಆದಾಗ ಅಹಂಕಾರವು ನಾಶವಾಗುವದು.

ಪ್ರಶ್ನೆ : ಭಯ ಯಾವಾಗ ಇರುವದು?

ಉತ್ತರ : ಶರೀರ ತಾನೆಂಬ ಭಾವವಿದ್ದಾಗ ಎಲ್ಲ ಭಯಾನಕ ದೃಶ್ಯಗಳು ಕಾಣಿಸಿ, ಶರೀರ ಸಾಯುವದೆಂದು ಭಯವಿರುವದು, ಆತ್ಮ ತಾನೆಂಬ ಭಾವವಿದ್ದಾಗ ಭಯವಿಲ್ಲ. ಏಕೆಂದರೆ ಆತ್ಮವು ಸಾಯುವದಿಲ್ಲ.



ಪ್ರಶ್ನೆ : ನಿದ್ರೆಗೆ ಕಾರಣಗಳೇನು?

ಉತ್ತರ : ನಿದ್ರೆಗೆ ನಿದ್ರಾಶೇಷ, ಅಜೀರ್ಣ, ಹೆಚ್ಚಾಗಿ ತಿನ್ನುವದು, ಶ್ರಮ ಇವು ನಿದ್ರೆಯ ಕಾರಣಗಳು. ಆದ್ದರಿಂದ ನಿದ್ರೆಯನ್ನು ಚೆನ್ನಾಗಿ ಮಾಡಿ, ಜೀರ್ಣವಾಗುವ ಆಹಾರವನ್ನು ಮಿತವಾಗಿ ಸೇವಿಸಿ, ಶ್ರಮವನ್ನು ಬಿಟ್ಟು, ಬಾಧೆಯಿಲ್ಲದ ನಿರ್ಜನವಾದ ಪ್ರದೇಶದಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳಬೇಕು.

ಪ್ರಶ್ನೆ : ಮಹಾಮಂತ್ರ ಜಪದ ಪ್ರಯೋಜನವೇನು?

ಉತ್ತರ : ಮಹಾಮಂತ್ರದ ಅರ್ಥವನ್ನು ಗ್ರಹಿಸುವದು ಮುಖ್ಯವು. ಇಲ್ಲದಿದ್ದರೆ ಮಹಾಮಂತ್ರ ಜಪದಿಂದ ದಣಿವೇ ಆಗುವದು. ಮಹಾಮಂತ್ರದ ಅರ್ಥ ಭಾವನೆಯಿಂದ ಆನಂದ ಸೂತ್ರವು ಹತ್ತುವದು. "ತದ್ ಜಪಃ ತದರ್ಥಭಾವನಂ", ಜಪವೆಂದರೆ ಶಬ್ದದ ಅರ್ಥಾನುಸಂಧಾನವು.

ಪ್ರಶ್ನೆ : ಹಸಿವು ನೀರಡಿಕೆಯನ್ನು ಕಳೆದುಕೊಳ್ಳುವದು ಹೇಗೆ?

ಉತ್ತರ : ನಾನು ಪ್ರಾಣವಲ್ಲ ಎಂಬುದು ನಿಶ್ಚಯವಾದಾಗ ಹಸಿವು ನೀರಡಿಕೆಗಳು ಇಲ್ಲವಾಗುವವು.

ಪ್ರಶ್ನೆ : ಶೃತಿ ಎಂದರೇನು?

ಉತ್ತರ : ಶೃತಿ ಎಂದರೆ ಆತ್ಮಜ್ಞಾನಿಗಳಿಂದ ಕೇಳಿದ್ದು, ಅನುಭವವೇ ಶೃತಿ.

ಪ್ರಶ್ನೆ : ಅಹಂಕಾರ ಎಂದರೇನು?

ಉತ್ತರ : ಶರೀರ ಭಾವವೇ ಅಹಂಕಾರ. ಅಹಂಕಾರಕ್ಕೆ ಸುಖ ದುಃಖಗಳು. ನಿದ್ರೆಯಲ್ಲಿ ಅಹಂಕಾರ ಅಡಗಿ ಆರಾಮ ಇರುವದು, ತುರ್ಯದಲ್ಲಿ ಅಹಂಕಾರ ನಾಶವಾಗಿ ಆರಾಮ ಇರುವದು. ನಿದ್ರೆಯಲ್ಲಿ ನಾವು ಶರೀರದಲ್ಲಿದ್ದರೂ ಅಹಂಕಾರ ಅಡಗಿ ಸುಖವಿರುವದು.

ಪ್ರಶ್ನೆ : ಬಾಳ್ವೆಯು ಹೇಗೆ ನಡೆಯಬೇಕು?

ಉತ್ತರ : ಬಾಳ್ವೆಯು ಪರಬಾರಿ ಪಾನಪಟ್ಟಿ ನಡೆಯಬೇಕು, ಅಂದರೆ ಬಾಳ್ವೆಯ ವ್ಯವಹಾರವನ್ನು ಮನಸ್ಸಿನಲ್ಲಿ ತೆಗೆದುಕೊಳ್ಳುವಂತಿಲ್ಲ. ಆತ್ಮನ ವಿಚಾರವು ಮಾತ್ರ ಸ್ವಂತದ್ದು ಇರುವದು.

ಪ್ರಶ್ನೆ : ವ್ಯಾವಹಾರಿಕ ಜಾಗ್ರವು ಯಾವಾಗ ತೋರುವದು?

ಉತ್ತರ : ನಿದ್ರೆಯಲ್ಲಿಯೇ ಕನಸು ಬೀಳುವದು. ನಿದ್ರೆ ಹೋದರೆ ಕನಸು ಹೋಯಿತು. ಅದರಂತೆ ಸ್ವರೂಪದ ಅಜ್ಞಾನದಲ್ಲಿಯೇ ವ್ಯಾವಹಾರಿಕ ಜಾಗ್ರವು ತೋರುವದು. ಸ್ವರೂಪದ ಅಜ್ಞಾನ ಹೋದರೆ ವ್ಯಾವಹಾರಿಕ ಜಾಗ್ರವು ಹೋಗುವದು.

ಪ್ರಶ್ನೆ : ಜಗತ್ತಿನಿಂದ ಬಾಧೆಯಾಗದಂತೆ ಇರುವದು ಹೇಗೆ?

ಉತ್ತರ : ಕನಸು ಇಲ್ಲವೇ ಇಲ್ಲವೆಂದು ಅದರಿಂದ ಭಾದೆ ಇಲ್ಲ, ಅದರಂತೆ ಜಗತ್ತು ಇಲ್ಲವೇ ಇಲ್ಲವೆಂದು ಖಾತ್ರಿಯಾದರೆ ಅದರಿಂದ ಬಾಧೆಯಾಗುವದಿಲ್ಲ.

ಪ್ರಶ್ನೆ : ತ್ರಿಕಾಲ ಜ್ಞಾನವು ಯಾವಾಗ ಆಗುವದು?

ಉತ್ತರ : ಕನಸುಗಳು ತೋರಿ ಹೋದಂತೆ ಅನೇಕ ಜನ್ಮಗಳು ತೋರಿ ಹೋಗುತ್ತವೆ ಎಂದು ದೃಢವಾಗಿ ತಿಳಿದು ಧ್ಯಾನಸ್ಥನಾದಾಗ ತ್ರಿಕಾಲಜ್ಞಾನವಾಗುವದು.

ಪ್ರಶ್ನೆ : ಏನನ್ನು ಜಯಿಸಬೇಕು?

ಉತ್ತರ : ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳನ್ನು ಜಯಿಸಬೇಕು.

ಪ್ರಶ್ನೆ : ಮುಕ್ತಿಗೆ ಸಾಧನೆ ಯಾವದು?

ಉತ್ತರ : ಮನಸ್ಸಿನ ನಿಗ್ರಹವೇ ಮುಕ್ತಿಗೆ ಸಾಧನವು.

ಪ್ರಶ್ನೆ : ಯೌವನದಲ್ಲಿ ಏನು ಮಾಡಬೇಕು?

ಉತ್ತರ : ಯೌವನದಲ್ಲಿ ವಿಷಯಗಳನ್ನು ಭೋಗಿಸುವ ಕಾಲದಲ್ಲಿ ಉಂಟಾಗುವ ಸುಖವು ವಿಷಯದ್ದೋ, ಆತ್ಮನದೋ ಎಂದು ವಿಚಾರಿಸಬೇಕು.

ಪ್ರಶ್ನೆ : ಸುಖಾಸನ ಎಂದರೇನು?

ಉತ್ತರ : ಮನಸ್ಸು ಸುಖದಲ್ಲಿ ನಿಲ್ಲುವದಕ್ಕೆ ಸುಖಾಸನ ಎನ್ನುವರು.

ಪ್ರಶ್ನೆ : ನಿಜವಾದ ತ್ಯಾಗ ಯಾವದು?

ಉತ್ತರ : ವಿಷಯಗಳ ತ್ಯಾಗವು ನಿಜವಾದ ತ್ಯಾಗವಲ್ಲ. ವಿಷಯ ವಾಸನೆಗಳ ತ್ಯಾಗವೇ ನಿಜವಾದ ತ್ಯಾಗವು. ಅದರಂತೆ ದೇಹತ್ಯಾಗವು ನಿಜವಾದ ತ್ಯಾಗವಲ್ಲ, ದೇಹಭಾವ ತ್ಯಾಗವೇ ನಿಜವಾದ ತ್ಯಾಗವು.

ಪ್ರಶ್ನೆ : ಧ್ಯಾನವೆಂದರೇನು?

ಉತ್ತರ : ತನ್ನ ಅರುಮಯ ಆನಂದಮಯ ಸ್ವರೂಪದ ನೆನಪೇ ಧ್ಯಾನವು.

ಪ್ರಶ್ನೆ : ಧ್ಯಾನಕ್ಕೆ ಕುಳಿತಾಗ ಕಣ್ಣು ಮುಚ್ಚಬೇಕೆ?

ಉತ್ತರ : ಕಣ್ಣು ಮುಚ್ಚಿದರೆ ನಿದ್ರೆಯು ಬರುವದು, ಕಣ್ಣು ತೆರೆದರೆ ಹೊರಗಿನ ವಸ್ತುಗಳು ಕಾಣುವವು. ಆದ್ದರಿಂದ ಧ್ಯಾನಕ್ಕೆ ಕುಳಿತಾಗ ಕಣ್ಣು ತೆರೆಯಲಿ ಅಥವಾ ಮುಚ್ಚಲಿ, ಆದರೆ ಮನಸ್ಸು ಮಾತ್ರ ಮುಚ್ಚಬೇಕು.

ಪ್ರಶ್ನೆ : ಶ್ರೇಷ್ಠವಾದ ಶೂರತನ ಯಾವದು?

ಉತ್ತರ : ಮನಸ್ಸು ಮತ್ತು ಇಂದ್ರಿಯಗಳ ಜಯವೇ ಶ್ರೇಷ್ಠವಾದ ಶೂರತನ.



ಪ್ರಶ್ನೆ : ಶ್ರೇಷ್ಠವಾದ ಸಂಪತ್ತು ಯಾವದು?

ಉತ್ತರ : ವೈರಾಗ್ಯ.

ಪ್ರಶ್ನೆ : ಮಾನವ ಜನ್ಮದ ಲಾಭ ಯಾವದು?

ಉತ್ತರ : ಸ್ವರೂಪ ಜ್ಞಾನವನ್ನು ಹೊಂದುವದು.

ಪ್ರಶ್ನೆ : ಈಗಿಂದೀಗಲೇ ಮಾಡಿಕೊಳ್ಳುವ ಕೆಲಸ ಯಾವದು?

ಉತ್ತರ : ಜನ್ಮವು ಬಾರದಂತೆ ಮಾಡಿಕೊಳ್ಳುವದು.

ಪ್ರಶ್ನೆ : ಗೃಹಸ್ಥನು ಆತ್ಮಜ್ಞಾನವನ್ನು ಪಡೆಯಬಹುದೇ?

ಉತ್ತರ : ಮದುವೆಯಾದವನಾಗಲಿ, ಮದುವೆಯಾಗದವನಾಗಲಿ, ಯಾರಾದರೂ ಆತ್ಮಜ್ಞಾನವನ್ನು ಪಡೆಯುಬಹುದು. ಮದುವೆಯಾದವನಾಗಲಿ, ಮದುವೆಯಾಗದವನಾಗಲಿ ಹೇಗೆ ನಿದ್ರೆಯನ್ನು ಮಾಡಿ ತಾತ್ಪೂರ್ತಿಕ ಆನಂದವನ್ನು ಹೊಂದಲಿಕ್ಕೆ ಬರುತ್ತದೆಯೋ, ಹಾಗೆ ಜ್ಞಾನ ಸಮಾಧಿಯನ್ನು ಹೊಂದಿ ಶಾಶ್ವತ ಸುಖವನ್ನು ಹೊಂದಲಿಕ್ಕೆ ಬರುತ್ತದೆ. ಯಾರೇ ಆಗಲಿ ಮನಸ್ಸಿನಲ್ಲಿಯ ವಿಷಯಗಳ ಮೋಹವನ್ನು ತೆಗೆದುಹಾಕಿ, ದೇಹಭಾವವನ್ನು ಮೀರಿ, ಆತ್ಮ ಭಾವದಲ್ಲಿ ಇದ್ದದ್ದಾದರೆ ಆತ್ಮಜ್ಞಾನವನ್ನು ಪಡೆಯಬಹುದು. ಇದು ಮನಸ್ಸಿನಲ್ಲಿಯ ತ್ಯಾಗದ ಕೆಲಸವು.

ಪ್ರಶ್ನೆ : ಮೌನವೆಂದರೇನು?

ಉತ್ತರ : ಸಾಮಾನ್ಯವಾಗಿ ಜನರು ಬಾಯಿಯು ಮಾತನಾಡದಿದ್ದರೆ ಮೌನವೆಂದು ತಿಳಿಯುತ್ತಾರೆ. ಬಾಯಿಯು ಮಾತನಾಡದೆ ಇರಬಹುದು, ಆದರೆ ಮನಸ್ಸು ವಿಶ್ವ ವಿಷಯಾದಿಗಳ ಕಡೆಗೆ ಹರಿಯುತ್ತಿರುತ್ತದೆ. ಮನಸ್ಸು ಮೌನವಾದರೆ ಅದೇ ನಿಜವಾದ ಮೌನ. ಮನಸ್ಸು ಮೌನವಾದಾಗ ಆರಾಮವಿರುವದು. ಮನಸ್ಸು ಮೌನವಾಗದೆ ಚಂಚಲವಾದರೆ ಆರಾಮ ಇರುವದಿಲ್ಲ. ಬಾಯಿ ಮೌನವಾದರೆ ಪಶುಗಳಿದ್ದಂತೆಯೇ ಸರಿ. ಶರೀರ ಸತ್ತರೆ ಮಹಾಮೌನವಲ್ಲ, ತೋರಿಕೆ ಎಲ್ಲವೂ ಬಾಧೆ ಹೊಂದಿ ನಿಂದ ನಿಲುವೇ ಮಹಾಮೌನವು.

ಪ್ರಶ್ನೆ : ನಿಷ್ಕಾಮ ಕರ್ಮವೆಂದರೇನು?

ಉತ್ತರ : ನಿಷ್ಕಾಮ ಕರ್ಮವೆಂದರೆ ಇಚ್ಛೆ ಇಲ್ಲದೆ ಕರ್ಮವನ್ನು ಮಾಡುವದು, ವಿಷಯಾಸಕ್ತಿ ಇದ್ದವನಿಗೆ ನಿಷ್ಕಾಮ ಕರ್ಮವನ್ನು ಮಾಡುವದು ಸಾಧ್ಯವಿಲ್ಲ. ಅವನು ಪರಹಿತವನ್ನು ಮಾಡುತ್ತಾನೆಂದರೂ ಅದರಿಂದ ತನ್ನ ವಿಷಯ ವಾಸನೆಗಳನ್ನು ತೀರಿಸಿಕೊಳ್ಳಲಿಕ್ಕೆ ಮಾಡುತ್ತಿರುವನು. ಆತ್ಮ ವಿಚಾರವೇ ನಿಷ್ಕಾಮ ಕರ್ಮ. ಸ್ವರೂಪಜ್ಞಾನದ ನಂತರ ಮಾತ್ರ ನಿಷ್ಕಾಮ ಕರ್ಮವು ನಡೆಯುವದು ಸಾಧ್ಯ. ಇಹಪರ ಭೋಗದಲ್ಲಿ ಸುಖವಿಲ್ಲ ಎಂಬ ತಿಳುವಳಿಕೆಯುಳ್ಳವನು ಮಾತ್ರ ನಿಷ್ಕಾಮ ಕರ್ಮವನ್ನು ಮಾಡುವನು. ಜ್ಞಾನ

ಸಮಾಧಿಯನ್ನು ಹೊಂದಿ ಉತ್ಥಾನವಾದಾಗ ಮಾತ್ರ ನಿಷ್ಕಾಮ ಕರ್ಮವನ್ನು ಮಾಡಲು ಸಾಧ್ಯವಾಗುವದು.

ಪ್ರಶ್ನೆ : ಮನಸ್ಸನ್ನು ನಿಗ್ರಹಿಸುವದು ಹೇಗೆ?

ಉತ್ತರ : ಮನಸ್ಸು ದೇಹ ಮತ್ತು ವಿಷಯಗಳಲ್ಲಿ ಸುಖವಿದೆ ಎಂಬ ತಿಳುವಳಿಕೆಯಿಂದ ಅವುಗಳ ಕಡೆಗೆ ಹರಿಯುತ್ತಿರುವದು. ವಿಚಾರಿಸಿ ನೋಡಿದಾಗ ದೇಹ ಮತ್ತು ವಿಷಯಗಳಲ್ಲಿ ದುಃಖವೇ ಇರುವದು, ಆದರೆ ಆತ್ಮನಲ್ಲಿ ಮಾತ್ರ ಸುಖ ಇರುವದು ಎಂಬುದು ತಿಳಿಯುವದು. ಹೀಗೆ ತಿಳಿದಾಗ ಮಾತ್ರ ವಿಷಯಗಳ ಕಡೆಗೆ ಹರಿಯುತ್ತಿರುವ ಮನಸ್ಸನ್ನು ನಿಗ್ರಹಿಸಿ, ಅದನ್ನು ಆತ್ಮನ ಕಡೆಗೆ ಹರಿಯುವಂತೆ ಮಾಡಿ, ಮನಸ್ಸನ್ನು ನಿಗ್ರಹಿಸಬಹುದು.

ಪ್ರಶ್ನೆ : ಮಾನವನಿಗೆ ಯಾವಾಗ ಮುಕ್ತಿ?

ಉತ್ತರ : ಮಾನವನು ಆತ್ಮಜ್ಞಾನಿಗಳ ಉಪದೇಶವನ್ನು ಕೇಳಿ, ತಿಳಿದುಕೊಂಡು, ಜ್ಞಾನ ಸಮಾಧಿಯನ್ನು ಹೊಂದಿದರೆ ಮಾತ್ರ ಮುಕ್ತಿಯು.

ಪ್ರಶ್ನೆ : ಸುಖ ದುಃಖಾದಿಗಳು ಯಾರಿಗೆ?

ಉತ್ತರ : ಸುಖ ದುಃಖಾದಿಗಳು ಮನಸ್ಸಿಗೇ, ಜಡ ದೇಹಕ್ಕೆ ಸುಖ ದುಃಖಾದಿಗಳಿಲ್ಲ. ಹೇಗೆಂದರೆ ಯಾವದಾದರೂ ವ್ಯಕ್ತಿಯು ಅಪಘಾತಕ್ಕೀಡಾಗಿ ಸಾವಿಗೀಡಾದಾಗ, ಆ ಶವವನ್ನು ಮರಣೋತ್ತರ ಚಿಕಿತ್ಸೆಗಾಗಿ ಒಳಪಡಿಸಿದಾಗ, ಅದನ್ನು ಬೇಕಾದ ಹಾಗೆ ಕೊಯ್ದರೂ, ಅದಕ್ಕೆ ನೋವಾಗುವದಿಲ್ಲ. ಶವಕ್ಕೆ ನೂರಾರು ಹೂಮಾಲೆಗಳನ್ನು ಹಾಕಿದರೂ ಅದು ಸಂತೋಷಗೊಳ್ಳುವದಿಲ್ಲ. ಅದರಂತೆ ಆತ್ಮನಿಗೂ ಸುಖ ದುಃಖಾದಿಗಳಿಲ್ಲ. ಹೇಗೆಂದರೆ ಆತ್ಮನು ಆನಂದ ಸ್ವರೂಪನು. ಆದ್ದರಿಂದ ಆತ್ಮನಿಗೆ ಸುಖವು ಬೇಕಾಗಿಲ್ಲ, ಅದರಂತೆ ಆತ್ಮನನ್ನು ದುಃಖಿಯನ್ನಾಗಿ ಮಾಡಲಿಕ್ಕೆ ಬರುವದಿಲ್ಲ. ಹೇಗೆಂದರೆ ಗಾಢನಿದ್ರೆಯಲ್ಲಿ ಆತ್ಮನಿರುವನು ಸುಖವಿರುವದು. ನನಗೆ ಸಂಬಂಧಿಕರಲ್ಲದವರು ದೇಹ ಬಿಟ್ಟರೆ ನಮಗೆ ದುಃಖವಾಗುವದಿಲ್ಲ. ಏಕೆಂದರೆ ನಾವು ನಮ್ಮ ಮನಸ್ಸಿನಲ್ಲಿ ಅವರನ್ನು ನಮ್ಮವರೆಂದು ಹಿಡಿದುಕೊಂಡಿರುವದಿಲ್ಲ. ಆದರೆ ನಮ್ಮ ಸಂಬಂಧಿಕರು ಯಾರಾದರೂ ದೇಹತ್ಯಾಗ ಮಾಡಿದರೆ ನಮ್ಮ ಮನಸ್ಸಿಗೆ ದುಃಖವಾಗುವದು. ಏಕೆಂದರೆ ಅವರನ್ನು ನಮ್ಮ ಮನಸ್ಸಿನಲ್ಲಿ ನಮ್ಮವರೆಂದು ಹಿಡಿದುಕೊಂಡಿದ್ದೇವೆ. ಹೀಗೆ ಮನಸ್ಸಿನಲ್ಲಿ ಹಿಡಿದರೆ ದುಃಖ, ಮನಸ್ಸಿನಲ್ಲಿ ಬಿಟ್ಟರೆ ಸುಖ, ಗಾಢನಿದ್ರೆಯಲ್ಲಿ ವಿಷಯಗಳ ಆಸೆ ಮತ್ತು ದೇಹಭಾವವನ್ನು ಮನಸ್ಸಿನಲ್ಲಿ ಹಿಡಿದಿರುವದಿಲ್ಲ, ಸುಖವಿರುವದು. ವ್ಯಾವಹಾರಿಕ ಎಚ್ಚರದಲ್ಲಿ ವಿಷಯಗಳ ಆಸೆ ಮತ್ತು ದೇಹಭಾವವನ್ನು ಮನಸ್ಸಿನಲ್ಲಿ ಹಿಡಿದಿದ್ದೇವೆ, ದುಃಖ ಇದೆ. ಜ್ಞಾನ ಸಮಾಧಿಯಲ್ಲಿ ಮನಸ್ಸು ದೇಹಭಾವ ಮತ್ತು ವಿಷಯ ವಾಸನೆಗಳನ್ನು ತಿಳಿದು ಬಿಟ್ಟು ಸುಖವಾಗಿರುವದು. ಆದ್ದರಿಂದ ಸುಖ ದುಃಖಗಳು ಮನಸ್ಸಿಗೇ. ಚಿದಾಭಾಸನಿಗೆ ಸುಖ ದುಃಖಗಳಿಲ್ಲ. ಜಡ ಶರೀರದ



ಭಾವವು ಸುಖಕ್ಕೆ ಅಡ್ಡಿಯಾಗಿದೆ. ಮೊದಲು ವಾಸನಾ ನಾಶ, ನಂತರ ತಾನು ಯಾರು ಎಂಬುದನ್ನು ತಿಳಿಯುವದು (ತಾನು ಸುಖ ಎಂಬುದನ್ನು ತಿಳಿದುಕೊಳ್ಳುವದು) ನಂತರ ಸುಖವೇ ಉಳಿಯುವದು. ಇದೇ ಸಾಧನೆ.

ಪ್ರಶ್ನೆ : ದೇವತೆಗಳಿಗೆ ಆತ್ಮಜ್ಞಾನವನ್ನು ಪಡೆಯುವದು ಸಾಧ್ಯವಿದೆಯೇ?

ಉತ್ತರ : ದೇವತೆಗಳಿಗೆ ದೇವಲೋಕದ ಭೋಗಾದಿಗಳನ್ನು ಪಡೆಯುವ ಇಚ್ಛೆ ಇರುತ್ತದೆ. ಅದು ಅರಿವಿನಿಂದ ಆನಂದ ಸ್ವರೂಪವಾದ ತನ್ನ ನಿಜವಾದ ಎಚ್ಚರಕೆಯಲ್ಲಿ ಇರಲಿಕ್ಕೆ ವಿಘ್ನವಾಗುತ್ತದೆ. ಆದ್ದರಿಂದ ಆತ್ಮಜ್ಞಾನವನ್ನು ಹೊಂದಲು ವಿರತಿ ಸಂಪತ್ತನ್ನು ಪಡೆಯಬೇಕು.

ಪ್ರಶ್ನೆ : ನಿಜವಾದ ವೈರಿ ಯಾರು?

ಉತ್ತರ : ತನ್ನ ಸ್ವರೂಪದ ಅಜ್ಞಾನವೇ ನಿಜವಾದ ವೈರಿಯು, ಕಾಮವು ಅನಂತರದ ವೈರಿಯು.

ಪ್ರಶ್ನೆ : ನಮಗೆ ಯಾವದನ್ನು ಬಯಸಲು ಬರುವದು?

ಉತ್ತರ : ನಮಗೆ ಯಾವದರ ಗುರ್ತು ಇದೆಯೋ ಮತ್ತು ಯಾವದನ್ನು ನೆನಪಿಗೆ ತಂದುಕೊಳ್ಳಲು ಸಾಧ್ಯವಿದೆಯೋ ಮತ್ತು ನಮಗೆ ಯಾವದು ಬೇಕಾಗಿದೆಯೋ ಅದನ್ನು ನಾವು ಬಯಸಲು ಬರುವದು.

ಪ್ರಶ್ನೆ : ಜೀವಿಗಳು ಆನಂದವನ್ನು ಯಾವಾಗ ಬಯಸುತ್ತವೆ?

ಉತ್ತರ : ಜೀವಿಗಳು ಆನಂದದಿಂದ ಬೇರೆ ಇದ್ದಾಗ, ಆನಂದವನ್ನು ಪೂರ್ಣ ಮರೆಯದೇ ಇರುವಾಗ ಆನಂದವನ್ನು ಬಯಸುತ್ತವೆ.

ಪ್ರಶ್ನೆ : ಪ್ರಾರ್ಥನೆಯ ಪ್ರಯೋಜನವೇನು?

ಉತ್ತರ : ಪ್ರಾರ್ಥನೆ ಮಾಡುವದು ನಿರರ್ಥಕವು. ಪ್ರಾರ್ಥಿಸುವದರಿಂದ, ಬೇಡುವದರಿಂದ, ಕೇಳುವದರಿಂದ ಅಥವಾ ಹುಡುಕುವದರಿಂದ ಆನಂದವು ಪ್ರಾಪ್ತವಾಗಲಾರದು. ಪ್ರಾರ್ಥನೆಯೆಂದರೆ ಬೇಡಿಕೊಳ್ಳುವದು, ಎರಡೆಂಬ ಭಾವವಿದ್ದಲ್ಲಿ ಬೇಡಿಕೊಳ್ಳುವಿಕೆ. ತನಗನ್ಯವಾಗಿ ತ್ರಿಕಾಲಾಬಾಧ್ಯ ವಸ್ತು ಇಲ್ಲವೇ ಇಲ್ಲ. ದೇವ ದೇವತೆಗಳೆಲ್ಲವೂ ಮಾನವನ ಕಲ್ಪನಾ ಸಾಗರದೊಳಗಿನ ತೆರೆಗಳು. ತನಗನ್ಯವಾಗಿ ದೇವರಿದ್ದಾನೆಂದು ಪ್ರಾರ್ಥಿಸಿದರೆ ಅರಣ್ಯ ರೋಧನವೇ ಸರಿ.

ಪ್ರಶ್ನೆ : ಚಂಚಲ ಮನಸ್ಸನ್ನು ಶಾಂತಗೊಳಿಸುವದು ಹೇಗೆ?

ಉತ್ತರ : ವಿವೇಕದ ಮೂಲಕ ವೈರಾಗ್ಯ ಹೊಂದುವದೇ, ಜಾಗ್ರದ ವ್ಯವಹಾರದ ಮೂಲಕ ಚಂಚಲವಾದ ಮನಸ್ಸನ್ನು ಶಾಂತಗೊಳಿಸುವ ಏಕೈಕ ಸಾಧನವು.

ಪ್ರಶ್ನೆ : ಮಾನವನನ್ನು ಸುಖಿಯನ್ನಾಗಿ ಮಾಡುವ ನೇರವಾದ ಉಪಾಯವು ಯಾವದು?

ಉತ್ತರ : ವಿವೇಕವೇ ಮಾನವನನ್ನು ಸುಖಿಯನ್ನಾಗಿ ಮಾಡುವ ನೇರವಾದ ಉಪಾಯವು.

ಪ್ರಶ್ನೆ : ಗಾಢನಿದ್ರೆ ಮತ್ತು ತುರ್ಯಾವಸ್ಥೆ ಇವೆರಡರ ನಡುವಿನ ಭೇದವೇನು?

ಉತ್ತರ : ಗಾಢನಿದ್ರೆಯು ಅಜ್ಞಾನ ಸಹಿತ ಆನಂದದ ಅವಸ್ಥೆಯು, ತುರ್ಯವು ಅರಿವು ಸಹಿತ ಆನಂದದ ಅವಸ್ಥೆಯು. ಜೀವನು ಗಾಢನಿದ್ರೆಯಲ್ಲಿ ಅಜ್ಞಾನದಿಂದ ಆನಂದಮಯನಿರುವನು. ಗಾಢನಿದ್ರೆಯಲ್ಲಿ ಜೀವನಿಗೆ ತನ್ನ ನಿಜ ಸ್ವರೂಪದ ಬಗ್ಗೆ ಏನೂ ತಿಳುವಳಿಕೆಯಿಲ್ಲ. ಆದರೆ ತುರ್ಯಾವಸ್ಥೆಯಲ್ಲಿ ಜೀವನಿಗೆ ತನ್ನ ನಿಜ ಸ್ವರೂಪದ ತಿಳುವಳಿಕೆಯು ಸುನಿಶ್ಚಿತವಿದೆ. ತುರ್ಯಾವಸ್ಥೆಯಲ್ಲಿ ಅಜ್ಞಾನದ ವ್ಯಾವಹಾರಿಕ ಜಾಗ್ರ, ಕನಸು ಮತ್ತು ಗಾಢನಿದ್ರೆಗಳೆಂಬ ಮೂರು ಅವಸ್ಥೆಗಳಿಗೂ ತಾನು ಸಾಕ್ಷಿಯಾಗಿರುವನು. ತುರ್ಯವನ್ನು ಹೊಂದಿದವನು ವ್ಯಾವಹಾರಿಕ ಜಾಗ್ರ ಕನಸು ಮತ್ತು ಗಾಢನಿದ್ರೆ ಎಂಬ ಮೂರೂ ಅವಸ್ಥೆಗಳಿಂದ ಬಾಧೆಯನ್ನು ಹೊಂದುವದಿಲ್ಲ. ಗಾಢನಿದ್ರೆಯನ್ನು ಹೊಂದಿದವನು ವ್ಯಾವಹಾರಿಕ ಜಾಗ್ರ ಮತ್ತು ಕನಸಿನ ಅವಸ್ಥೆಗಳಿಂದ ಬಾಧೆ ಹೊಂದುವನು. ತುರ್ಯಾವಸ್ಥೆಯನ್ನು ಹೊಂದಿದವನಿಗೆ ಪುನರ್ಜನ್ಮವಿಲ್ಲ. ಗಾಢನಿದ್ರೆಯನ್ನು ಹೊಂದಿದವನಿಗೆ ಪುನರ್ಜನ್ಮವಿದೆ. ಗಾಢನಿದ್ರೆಯಲ್ಲಿ ಜೀವಚೈತನ್ಯವು ಪರಮ ಚೈತನ್ಯದೊಡನೆ ಒಂದಾದಂತೆ ಆಗಿರುವದು. ಜ್ಞಾನ ಸಮಾಧಿಯಲ್ಲಿ ಜೀವಚೈತನ್ಯವು ಪರಮ ಚೈತನ್ಯದೊಡನೆ ಒಂದಾಗಿರುವದು. ನಿದ್ರೆಯಲ್ಲಿ ಶರೀರದ ಕಳಸ ಬೀಳುವದು. ಸಮಾಧಿಯಲ್ಲಿ ಜೋಲಿ ಹೊಡೆಯುವದಿಲ್ಲ. ನಿದ್ರೆಯಲ್ಲಿ ಮಬ್ಬು ಇರುವದು, ಸಮಾಧಿಯಲ್ಲಿ ಅರುವು ಇರುವದು. ನಿದ್ರೆ ಮಾಡಿ ಎಚ್ಚರಿಕೆಗೆ ಬಂದಾಗ ಪ್ರಪಂಚವು ಸತ್ಯವಾಗಿಯೇ ತೋರುವದು, ಸಮಾಧಿ ಹೊಂದಿ ಎಚ್ಚರಿಕೆಗೆ ಬಂದರೆ ಪ್ರಪಂಚವು ಸುಳ್ಳಾಗಿ ತೋರುವದು.

ಪ್ರಶ್ನೆ : ಸನ್ಯಾಸ ಎಂದರೇನು?

ಉತ್ತರ : ಅನುಕೂಲ ವಸ್ತು ಇರಬೇಕು, ಏಕಾಂತವಿರಬೇಕು, ಭೋಗಿಸುವ ಸಾಮರ್ಥ್ಯವಿರಬೇಕು, ಕಂಟಕವಿರಬಾರದು, ಆಗ ಭೋಗಿಸುವ ಆಶೆಯಾಗಬಾರದು, ಇದೇ ಸನ್ಯಾಸ. ದೇಹವನ್ನು ಬಿಡುವದು ಸನ್ಯಾಸವಲ್ಲ. ದೇಹಭಾವವನ್ನು ಬಿಡುವದೇ ಸನ್ಯಾಸ. ದೇಹವು ಹೇಗೇ ಇರಲಿ, ಎಲ್ಲಿಯೇ ಇರಲಿ, ಜೀವನ ಅಂತಃಕರಣದಲ್ಲಿಯ ವೈರಾಗ್ಯವೇ ಸನ್ಯಾಸವು. ವೈರಾಗ್ಯ ಹೊಂದಿದ ಅಂತಃಕರಣವೇ ಸನ್ಯಾಸ ಆಶ್ರಮವು. ಸನ್ಯಾಸವು ದೇಹದ ಯಾವದೇ ಬಾಹ್ಯ ಚಿಹ್ನೆಗಳನ್ನು (ದೇಹದ ಪೋಷಾಕು, ಬಣ್ಣ, ದೇಹವು ಇರುವ ಸ್ಥಳ) ಅವಲಂಬಿಸುವದಿಲ್ಲ. ಸನ್ಯಾಸವು ಬಾಹ್ಯ ಮತ್ತು ಆಂತರಿಕ ವಿಷಯಗಳ ಮೇಲಿನ ನಿರ್ಮೋಹವನ್ನು ಅವಲಂಬಿಸಿದೆ. ಜಾತಿ, ಮತ, ವರ್ಣಗಳ ನಿರ್ಬಂಧವಿಲ್ಲದೆ ಯಾವನು ತನ್ನ ಅಂತಃಕರಣದಲ್ಲಿ ದೃಢ ವೈರಾಗ್ಯವನ್ನು ಹೊಂದುವನೋ ಅವನೇ ಸನ್ಯಾಸಿಯು. ಇಂಥ ಸನ್ಯಾಸಿಯು ವೈವಾಹಿಕ ಜೀವನವನ್ನು ಸಾಗಿಸಬಹುದು ಅಥವಾ ಸಾಗಿಸಲಿಕ್ಕಿಲ್ಲ. ವೈವಾಹಿಕ ಜೀವನವನ್ನು ನಡೆಸುವ ವಿಷಯವೇ ಬೇರೆ ಇರುವದು. ಮನಸ್ಸಿನಲ್ಲಿಯ ವಿಷಯಾಸಕ್ತಿ ಮತ್ತು ದೇಹಭಾವವನ್ನು ಬಿಡುವದೇ ಸನ್ಯಾಸವು. ಎಲ್ಲವನ್ನು ತ್ಯಾಗ ಮಾಡಿದೆನು ಎಂಬ ಅಹಂಕಾರವನ್ನು ತ್ಯಾಗ ಮಾಡುವದೇ ಸನ್ಯಾಸವು. ಹೊರಗೆ ಮಾಡಿ, ಮನಸ್ಸಿನೊಳಗೆ ಹಿಡಿಯದೆ ಇರುವದೇ ಸನ್ಯಾಸವು, ಅರಿವೆ ಬದಲು ಮಾಡಿದರೆ ಅರಿವು ಬದಲಾಗುವದಿಲ್ಲ.



ಪ್ರಶ್ನೆ : ಮಠ ಎಂದರೇನು?

ಉತ್ತರ : ಮಠವೆಂದರೆ ಶಾಶ್ವತ ಸುಖವು, ಶಾಶ್ವತ ಸುಖದಲ್ಲಿ ನೆಲೆಯಾಗಿ ನಿಂತವನು ವಾಸಿಸುವ ಸ್ಥಳವೇ ಮಠ. ಆದರೆ ಅದು ನಿರ್ಜನ ಪ್ರದೇಶದಲ್ಲಿಯ ಕಟ್ಟಡವಲ್ಲ. ಶಾಶ್ವತ ಸುಖದ ಅಧಿಪತಿಯೇ ಮಠಪತಿಯು.

ಪ್ರಶ್ನೆ : ಯಾವುದರ ಆಧಾರದ ಮೇಲೆ ಮಾನವನು ಸುಖವನ್ನು ಬೇಡುತ್ತಾನೆ?

ಉತ್ತರ : ತನ್ನ ಪ್ರಥಮಾನುಭೂತಿಯ ಆನಂದದ ಆಧಾರದ ಮೇಲೆ ಮಾನವನು ಸುಖವನ್ನು ಬೇಡುತ್ತಾನೆ.

ಪ್ರಶ್ನೆ : ವಿವೇಕದ ತಳಹದಿ ಯಾವದು?

ಉತ್ತರ : ಯಾವದು ಸುಖದಾಯಕವು ಮತ್ತು ಯಾವದು ದುಃಖದಾಯಕವು ಎಂಬ ವಿಚಾರವೇ ವಿವೇಕದ ತಳಹದಿಯು.

ಪ್ರಶ್ನೆ : ಮನಸ್ಸು ಯಾವಾಗ ಶಾಂತವಾಗುವದು?

ಉತ್ತರ : ಇಹಪರ ಭೋಗದ ಆಸಕ್ತಿಯು ನಾಶವಾದಾಗಲೇ ಮನಸ್ಸು ಶಾಂತವಾಗುವದು.

ಪ್ರಶ್ನೆ : ಶಾಶ್ವತ ಸುಖವನ್ನು ಹೊಂದಲು ನಾವು ಏನು ಮಾಡಬೇಕು?

ಉತ್ತರ : ಶಾಶ್ವತ ಸುಖವನ್ನು ಹೊಂದಲು ನಾವು ನೈತಿಕ ಮತ್ತು ಪಾರಮಾರ್ಥಿಕ ನಿಯಮಗಳನ್ನು ಪಾಲಿಸಬೇಕು. ಇಲ್ಲದಿದ್ದರೆ ನಾವು ತಿರುಕನ ಸ್ಥಿತಿಗೆ ಇಳಿಯುತ್ತೇವೆ.

ಪ್ರಶ್ನೆ : ವಿಷಯ ವಸ್ತುಗಳ ಆಸೆಯು ಎಲ್ಲಿ ಉಂಟಾಗುವದು?

ಉತ್ತರ : ವಿಷಯ ವಸ್ತುಗಳ ಆಸೆಯು ಮನಸ್ಸಿನಲ್ಲಿ ಉಂಟಾಗುವದು. ಆದರೆ ಅದು ಪಂಚಪ್ರಾಣ, ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳಲ್ಲಿ ಉಂಟಾಗುವದಿಲ್ಲ. ಮನಸ್ಸೇ ವಿಷಯ ವಸ್ತುಗಳ ಬಗೆಗೆ ರಾಗ ದ್ವೇಷಗಳನ್ನು

ಹೊಂದುವದು. ಆದರೆ ಶ್ವಾಸೋಚ್ಛ್ವಾಸ ಅಥವಾ ಪ್ರಾಣಗಳು ಬಾಹ್ಯ ವಿಷಯ ವಸ್ತುಗಳ ಬಗ್ಗೆ ರಾಗದ್ವೇಷಗಳನ್ನು ಹೊಂದಲಾರವು. ಅದರಂತೆ ಮನಸ್ಸೇ ಕಾಮ, ಕ್ರೋಧ, ಮೋಹ ಮುಂತಾದವುಗಳನ್ನು ಹೊಂದುವದು. ಆದರೆ ಪಂಚ ಪ್ರಾಣಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಕಾಮ ಕ್ರೋಧಾದಿಗಳನ್ನು ಹೊಂದುವದಿಲ್ಲ.

ಪ್ರಶ್ನೆ : ಮನಸ್ಸಿನಲ್ಲಿ ಕಾಮ, ಕ್ರೋಧಾದಿಗಳು ಉಂಟಾಗಲಿಕ್ಕೆ ಕಾರಣವೇನು?

ಉತ್ತರ : ವಿಷಯಗಳಲ್ಲಿ ಸುಖವಿದೆ ಎಂಬ ತಪ್ಪು ತಿಳುವಳಿಕೆಯು ಜೀವನು ಬಾಹ್ಯ ವಿಷಯ ವಸ್ತುಗಳಲ್ಲಿ ಸುಖವನ್ನು ಹುಡುಕುವಂತೆ ಪ್ರೇರೇಪಿಸುವದು. ಸ್ವರೂಪದ ಅಜ್ಞಾನದ ಮುಖಾಂತರ ಉಂಟಾದ ಈ ತಪ್ಪು ತಿಳುವಳಿಕೆಯಿಂದಲೇ ಮಾನವನು ಸರ್ವ ದುಃಖಗಳಿಂದ ಬಳಲುತ್ತಿದ್ದಾನೆ.

ಪ್ರಶ್ನೆ : ಅಧ್ಯಾಸವೆಂದರೇನು?

ಉತ್ತರ : ತಾನು ಅಲ್ಲದ್ದಕ್ಕೆ ತಾನೆಂದು ತಿಳಿದುಕೊಳ್ಳುವದೇ ಅಧ್ಯಾಸ. ಸ್ವರೂಪದ ಅಜ್ಞಾನವು ಜೀವನಿಗೆ ತಾನು ದೇಹ, ಪ್ರಾಣ, ಇಂದ್ರಿಯಗಳೆಂಬ ಅಧ್ಯಾಸಕ್ಕೆ ಕಾರಣವಾಗುವದು. ಜೀವನ ಎಲ್ಲ ವ್ಯಾವಹಾರಿಕ ಕ್ರಿಯೆಗಳು ಅಧ್ಯಾಸದಲ್ಲಿಯೇ ಮಾಡಲ್ಪಡುವವು.

ಪ್ರಶ್ನೆ : ಅಧ್ಯಾಸವನ್ನು ಹೇಗೆ ತೆಗೆದು ಹಾಕಬೇಕು?

ಉತ್ತರ : ತನ್ನ ಸ್ವರೂಪದ ಅಜ್ಞಾನವನ್ನು ಕಳೆದುಕೊಳ್ಳುವದರಿಂದ ಅಧ್ಯಾಸವು ತೆಗೆದು ಹಾಕಲ್ಪಡುವದು.

ಪ್ರಶ್ನೆ : ಯೋಗವೆಂದರೇನು?

ಉತ್ತರ : ಚಿತ್ತವೃತ್ತಿ ನಿರೋಧವೇ ಯೋಗವೆಂದು ವಿವರಿಸಲ್ಪಟ್ಟಿದೆ. ಆದರೆ ಪ್ರಾಣ ಅಥವಾ ವಾಯು ನಿರೋಧವೆಂದು ವಿವರಿಸಲ್ಪಟ್ಟಿಲ್ಲ. ಯೋಗವೆಂದರೆ ಮನಸ್ಸಿನ ವಾಸನಾ ನಾಶವು. ಪ್ರಾಣವು ಜೀವಾತ್ಮನನ್ನು ಒಳಗೊಂಡ ಸೂಕ್ಷ್ಮ ಶರೀರವನ್ನು ಒಂದು ಸ್ಥೂಲ ಶರೀರದಿಂದ ಮತ್ತೊಂದು ಸ್ಥೂಲ ಶರೀರಕ್ಕೆ ಒಯ್ಯುವ ವಾಹನವು. ಪ್ರಾಣವನ್ನು ನಿರೋಧಿಸಿದಾಗ ಮನಸ್ಸು ನಿಶ್ಚಲವಾಗುವದು ಮತ್ತು ಪ್ರಾಣ ನಿರೋಧ ಇರುವವರೆಗೆ ಅದು ನಿಶ್ಚಲವಿದ್ದು, ಆನಂದಾನುಭವ ಆಗುವದು. ಆದರೆ ಮನಸ್ಸಿನಲ್ಲಿಯ ವಿಷಯ ವಾಸನೆಗಳು ನಾಶವಾಗುವದಿಲ್ಲ. ಪ್ರಾಣ ನಿರೋಧವು ಮುಗಿದಾಗ ಮನಸ್ಸು ಮತ್ತೆ ಚಂಚಲವಾಗಿ, ಮನಸ್ಸಿನಲ್ಲಿಯ ಸುಪ್ತವಾಗಿರುವ ವಿಷಯ ವಾಸನೆಗಳು ಪುಟಿದೇಳುವವು. ಪ್ರಾಣ ನಿರೋಧದಿಂದ ಮನಸ್ಸಿನಲ್ಲಿಯ ವಿಷಯ ವಾಸನೆಗಳು ನಾಶವಾಗುವದಿಲ್ಲ. ಏಕೆಂದರೆ ಪ್ರಾಣ ನಿರೋಧವನ್ನು ಮಾಡದೇ ಇರುವದರಿಂದ ವಿಷಯ ವಾಸನೆಗಳು ಉಂಟಾಗಿಲ್ಲ. ಆದರೆ ವಿಷಯ ವಾಸನೆಗಳು ವಿವೇಕ ವೈರಾಗ್ಯಗಳು ಇಲ್ಲದೆ ಇರುವದರಿಂದ, ಅಧ್ಯಾಸದ



ಮೂಲಕ ಮತ್ತು ಸ್ವರೂಪದ ಅಜ್ಞಾನದಿಂದ ನೆಲೆಸಿವೆ. ವಿವೇಕ ವೈರಾಗ್ಯಗಳಿಂದ ಮಾತ್ರ ಮನಸ್ಸಿನಲ್ಲಿಯ ವಿಷಯ ವಾಸನೆಗಳು ನಾಶವಾಗುವವು. ಲಗಾಮನ್ನು ಎಳೆಯುವದರಿಂದ ಕುದುರೆಗಳನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಬರುವಂತೆ, ಪ್ರಾಣ ನಿರೋಧದಿಂದ ಮನಸ್ಸಿನ ಕ್ರಿಯೆಯು ಬಿಗಿ ಹಿಡಿಯಲ್ಪಡುವದು. ಆದರೆ ಕುದುರೆಯ ಮನಸ್ಸಿನ ಓಡಬೇಕೆಂಬ ಆಂತರಿಕ ಭಾವನೆಗಳ ಶಕ್ತಿಯು ನಾಶವಾಗಿರುವದಿಲ್ಲ. ಅದರಂತೆ ಕುದುರೆಯ ಲಗಾಮುಗಳಂತಿರುವ ಪ್ರಾಣಗಳನ್ನು ನಿರೋಧಿಸುವದರಿಂದ ವಿಷಯಾಸಕ್ತಿಯ ರೂಪದಲ್ಲಿ ಇರುವ ಮನಸ್ಸಿನ ಆಂತರಿಕ ಕ್ರಿಯಾಶಕ್ತಿಯು ನಾಶವಾಗಿರುವದಿಲ್ಲ.

ಪ್ರಶ್ನೆ : ದೇವ ದೇವತೆಗಳ ಪೂಜೆಯು ಶಾಶ್ವತ ಸುಖವನ್ನು ಹೊಂದುವದಕ್ಕೆ ಸಹಾಯವಾಗುವದೇ?

ಉತ್ತರ : ದೇವ ದೇವತೆಗಳು ಮಾನವನ ಮನಸ್ಸಿನ ಕಲ್ಪನೆಗಳು. ಅವುಗಳಿಗೆ ತಮ್ಮದೇ ಆದ ಅಸ್ತಿತ್ವವಿಲ್ಲ. ಮಾನವನು ತಪ್ಪು ತಿಳುವಳಿಕೆಯಿಂದ ಅನೇಕ ರೀತಿಗಳಲ್ಲಿ ದೇವ ದೇವತೆಗಳನ್ನು ಕಲ್ಪಿಸಿ ತನ್ನ ಒಲವಿಗೆ ತಕ್ಕಂತೆ ಅವುಗಳಿಗೆ ಅನೇಕ ರೂಪಗಳನ್ನು ಕೊಟ್ಟಿದ್ದಾನೆ. ಇಂಥ ದೇವ ದೇವತೆಗಳು ಮಾನವನಿಗೆ ಶಾಶ್ವತ ಸುಖವನ್ನು ಕೊಡಲಾರವು.

ಪ್ರಶ್ನೆ : ಕನಸು ಜಾಗ್ರಗಳನ್ನು ಯಾರು ಸೃಷ್ಟಿಸುವರು?

ಉತ್ತರ : ಮನಸ್ಸೇ ಕನಸಿನ ವಿಶ್ವವನ್ನು ಸೃಷ್ಟಿಸುವದು. ಮನಸ್ಸು ಕನಸಿನಿಂದ ವ್ಯಾವಹಾರಿಕ ಜಾಗ್ರಕ್ಕೆ ಬಂದಾಗ ಆ ಕನಸಿನ ವಿಶ್ವವು ಮಾಯವಾಗುವದು. ಜೀವನಿಗೆ ಕನಸಿನ ನೆನಪು ಮಾತ್ರ ಇರುವದು. ಮನಸ್ಸು ಗಾಢನಿದ್ರೆಯಲ್ಲಿ ತನ್ನ ಕಾರಣವಾದ ಅಜ್ಞಾನದಲ್ಲಿ ಅಡಗಿದಾಗ ಜಾಗ್ರ ಪ್ರಪಂಚವು ಮಾಯವಾಗುವದು. ಈ ಜಾಗ್ರ ಪ್ರಪಂಚವೆಂಬ ಕನಸಿನ ವ್ಯವಹಾರವು ಮನಸ್ಸಿನಲ್ಲಿಯ ವಿಷಯ ವಾಸನೆಗಳು, ವಿವೇಕ ವೈರಾಗ್ಯಗಳ ಮೂಲಕ ಸಂಪೂರ್ಣವಾಗಿ ನಾಶವಾಗುವವರೆಗೆ ಮುಂದುವರಿಯುವದು. ವಿಷಯ ವಾಸನೆಗಳು ಪೂರ್ಣ ನಾಶವಾದಾಗ ಅಂತಃಕರಣವು ಮಾಯಾತನುವಾಗಿ ರೂಪಾಂತರ ಹೊಂದಿ, ಜೀವನಿಗೆ ಸಚ್ಚಿದಾನಂದಮಯದೊಡನೆ ಇರುವ ಅಖಂಡತ್ವ ಮತ್ತು ಏಕತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧನವಾಗುವದು. ಕನಸನ್ನು ನಾವೇ ಮಾಡುತ್ತೇವೆ ಮತ್ತು ಅಲ್ಲಿ ಜೀವಿಸುತ್ತೇವೆ. ಅದರಂತೆ ಜಾಗ್ರವನ್ನು ನಾವೇ ಮಾಡುತ್ತೇವೆ ಮತ್ತು ಅಲ್ಲಿ ಜೀವಿಸುತ್ತೇವೆ. ಮನಸ್ಸಿದ್ದರೆ ಮಾತ್ರ ಜಾಗ್ರ ಕನಸುಗಳು, ಮನಸ್ಸು ಅಡಗಿದರೆ ಜಾಗ್ರ ಕನಸುಗಳಿಲ್ಲ. ಜಾಗ್ರ ಮತ್ತು ಕನಸುಗಳನ್ನು ಇನ್ನೊಬ್ಬರು ಯಾರಾದರೂ ಮಾಡಿದ್ದರೆ, ಮನಸ್ಸು ಅಡಗಿದಾಗ ಜಾಗ್ರ ಕನಸುಗಳು ಅಡಗಬಾರದಾಗಿತ್ತು. ಆದರೆ ಮನಸ್ಸು ಅಡಗಿದಾಗ ಜಾಗ್ರ ಕನಸುಗಳು ಅಡಗುತ್ತವೆ. ಆದ್ದರಿಂದ ಜಾಗ್ರ ಕನಸುಗಳು ಮನಸ್ಸಿನ ಸೃಷ್ಟಿ, ಮನಸ್ಸು ಜಾಗ್ರ ಕನಸುಗಳನ್ನು ತಾನೇ ಕಲ್ಪಿಸಿ, ತಾನೇ ದುಃಖವನ್ನು ಹೊಂದುತ್ತದೆ. ಆದ್ದರಿಂದ ಮನಸ್ಸನ್ನು ನಾಶ ಮಾಡಿರಿ. ಶಾಶ್ವತ ಸುಖ ಹೊಂದಿರಿ.

ಪ್ರಶ್ನೆ : ಆತ್ಮಸಾಕ್ಷಾತ್ಕಾರವನ್ನು ಹೊಂದಲು ಕರ್ಮ ಮತ್ತು ಉಪಾಸನೆಗಳು ಸಹಾಯಕವಾಗಬಲ್ಲವೇ?

ಉತ್ತರ : ಆತ್ಮಸಾಕ್ಷಾತ್ಕಾರವನ್ನು ಹೊಂದಲು ಕರ್ಮ ಮತ್ತು ಉಪಾಸನೆಗಳು ಸಾಧನಗಳೇ ಅಲ್ಲ, ಏಕೆಂದರೆ ಅವು ಅಜ್ಞಾನ ಮತ್ತು ಅಜ್ಞಾನದ ಕಾರ್ಯದೊಳಗಿನವುಗಳೇ ಇರುವವು.

ಪ್ರಶ್ನೆ : ಜ್ಞಾನ ಸಮಾಧಿಯು ಹೇಗೆ ಪ್ರಾಪ್ತವಾಗುವದು?

ಉತ್ತರ : ತನ್ನ ನಿಜ ಸ್ವರೂಪದ ಧ್ಯಾನದಿಂದ ಜ್ಞಾನ ಸಮಾಧಿಯು ಪ್ರಾಪ್ತವಾಗುವದು. ಆಗ ಬುದ್ಧಿಯು ಸಮವಾಗುವದು, ಅದರಿಂದ ಸುಖ ಉಂಟಾಗುವದು. ವಿಷಯಗಳ ಧ್ಯಾನದಿಂದ ಬುದ್ಧಿಯು ವಿಷಮವಾಗುವದು ಮತ್ತು ಅದರಿಂದ ದುಃಖ ಉಂಟಾಗುವದು.

ಪ್ರಶ್ನೆ : "ಅನಾದಿ ಮಾಯೆಯಾ ಸುಪ್ತಃ ಜೀವಃ", ಎಂಬ ಹೇಳಿಕೆಯು ಅನುಭವಾನುಸಾರಿ ಇರುವದೇ?

ಉತ್ತರ : ಈ ಹೇಳಿಕೆಯು ಅನುಭವಾನುಸಾರಿ ಇಲ್ಲ. ಏಕೆಂದರೆ ಜೀವನು ತನ್ನ ಮಾಯಾಸುಪ್ತಿಯನ್ನು ಮುಗಿಸುತ್ತಾನೆ ಮತ್ತು ಮಾಯಾಸುಪ್ತಿಗೆ ಆದಿ ಇದೆ. ಯಾವದಕ್ಕೆ ಆದಿ ಇಲ್ಲವೋ ಅದಕ್ಕೆ ಅಂತ್ಯವೂ ಇಲ್ಲ. ಜೀವನ ಮಾಯಾಸುಪ್ತಿಯು ಕೊನೆಗೊಳ್ಳುವದು, ಆದ್ದರಿಂದ ಅದಕ್ಕೆ ಆದಿ ಇರಲಿಕ್ಕೇ ಬೇಕು.

ಪ್ರಶ್ನೆ : 'ನಾನು ದೇಹ' ಎಂಬ ಅಧ್ಯಾಸವನ್ನು ಹೇಗೆ ತೆಗೆದು ಹಾಕಬೇಕು?

ಉತ್ತರ : 'ನಾನು ಆತ್ಮ' ಎಂಬ ಜ್ಞಾನದಿಂದ 'ನಾನು ದೇಹ' ಎಂಬ ಅಧ್ಯಾಸವನ್ನು ತೆಗೆದು ಹಾಕಬೇಕು.

ಪ್ರಶ್ನೆ : ಪಾರಮಾರ್ಥವು ಯಾವದು?

ಉತ್ತರ : ಒಂದೇ ರೂಪದಿಂದ ಯಾವ ವಸ್ತುವು ಇರುತ್ತದೆಯೋ ಅದು ಪಾರಮಾರ್ಥವು.

ಪ್ರಶ್ನೆ : ಸಾಧಕನು ಯಾರು?

ಉತ್ತರ : ಶಾಂತನು, ದಾಂತನು, ಉಪರತನು, ತಿತಿಕ್ಷು ಆದವನು ಸಮಾಹಿತನಾಗಿ ತನ್ನಲ್ಲಿಯೇ ತನ್ನನ್ನು ಕಂಡುಕೊಳ್ಳುತ್ತಾನೆ.

ಪ್ರಶ್ನೆ : ಸತ್ಯವನ್ನು ಹೇಗೆ ತಿಳಿದುಕೊಳ್ಳಬೇಕು?

ಉತ್ತರ : ಸೂಕ್ಷ್ಮಾತಿಸೂಕ್ಷ್ಮ ಏಕಾಗ್ರವಾದ ಬುದ್ಧಿಯಿಂದ ಸೂಕ್ಷ್ಮದರ್ಶಿಗಳು ಬ್ರಹ್ಮವನ್ನು (ಸತ್ಯ) ತಿಳಿದುಕೊಳ್ಳುತ್ತಾರೆ.



ಪ್ರಶ್ನೆ : ದುಃಖವು ಹೇಗೆ ಹೋಗುವದು?

ಉತ್ತರ : ಅವಿವೇಕದಿಂದಲೇ ಎಲ್ಲ ದುಃಖವು ಬಂದಿರುವದು. ವಿವೇಕದಿಂದಲೇ ಎಲ್ಲ ದುಃಖವು ಹೋಗುವದು.

ಪ್ರಶ್ನೆ : ಮೋಹವು ಏಕೆ ಹೋಗಿಲ್ಲ?

ಉತ್ತರ : ಮೋಹವು ಏಕೆ ಹೋಗಿಲ್ಲವೆಂದರೆ ಸ್ವತಃ ವಿಚಾರ ಮಾಡಿಲ್ಲ.

ಪ್ರಶ್ನೆ : ಆರಾಮ ಬೇಕಾದರೆ ಏನು ಮಾಡಬೇಕು?

ಉತ್ತರ : ಆರಾಮ ಬೇಕಾದರೆ ಆರಾಮ ಭಾವದಲ್ಲಿ ಇರಬೇಕು.

ಪ್ರಶ್ನೆ : ಶರೀರವು ರೋಗಗ್ರಸ್ಥವಾದರೂ ಜ್ಞಾನ ಸಮಾಧಿಯನ್ನು ಹೊಂದಲು ಬರುವದೇ?

ಉತ್ತರ : ಶರೀರವು ರೋಗಿ ಇರಬಹುದು, ಆದರೆ ಮನಸ್ಸು ಇರುವಿನಲ್ಲಿ ಇದ್ದರೆ ಮುಗಿಯಿತು. ರಮಣರಿಗೆ ಕ್ಯಾನ್ಸರ್ ಆಗಿತ್ತು. ಆದರೆ ಅವರು ಸ್ವರೂಪಿಭೂತವಾಗಿಯೇ ಇದ್ದರು.

ಪ್ರಶ್ನೆ : ಆನಂದವು ಯಾವ ಮನಸ್ಸಿಗೆ ನಿಲುಕುವದು?

ಉತ್ತರ : ಆನಂದವು ಅತಿ ಪರಿಶುದ್ಧವಾದ ಮನಸ್ಸಿಗೆ ನಿಲುಕುವದು.

ಪ್ರಶ್ನೆ : ಬ್ರಹ್ಮಜಿಜ್ಞಾಸು ಯಾರು?

ಉತ್ತರ : ಕರ್ಮಕಾಂಡದಲ್ಲಿ ಹುರುಳಿಲ್ಲವೆಂದು ಯಾವನು ತಿಳಿದುಕೊಳ್ಳುವನೋ ಅವನೇ ಬ್ರಹ್ಮಜಿಜ್ಞಾಸು.

ಪ್ರಶ್ನೆ : ಮಂಗ ಯಾರು?

ಉತ್ತರ : ಮನಸ್ಸೇ ಮಂಗ, ಮನಸ್ಸೆಂಬ ಮಂಗನನ್ನು ಕಾಯ್ದರೆ ಶಾಂತಿ.

ಪ್ರಶ್ನೆ : ಯಾವದರ ನೆನಪಿದ್ದರೆ ಆರಾಮ ಇರಲು ಬರುವದು?

ಉತ್ತರ : ಗಾಢನಿದ್ರೆಯ ನೆನಪಿದ್ದರೆ ಮಾನವನು ವ್ಯಾವಹಾರಿಕ ಎಚ್ಚರಿಕೆಯ ಬಗ್ಗೆ ಉದಾಸೀನನಾಗುವನು. ವ್ಯಾವಹಾರಿಕ ಎಚ್ಚರಿಕೆಯಲ್ಲಿ ಒಂದಿಲ್ಲ ಒಂದು ಕಟಕಟೆಯು ಇರುವದೇ. ಆನಂದಮಯ ಇರುವಿನ ಬಗ್ಗೆ ಖಾತ್ರಿಯಾದಾಗ ಈ ವಿಶ್ವದ ಬಗ್ಗೆ ಆಸಕ್ತಿಯು ಉಳಿಯುವದಿಲ್ಲ.

ಪ್ರಶ್ನೆ : ಗುರುವಿನ ವಚನವನ್ನು ಆಲಿಸಿದಾಗಲೇ ಮುಕ್ತಿಯಾಗುವದೇ?

ಉತ್ತರ : ಗುರುಗಳ ವಚನವನ್ನು ಆಲಿಸುವದೆಂದರೆ, ಅವರು ಹೇಳಿದ ಪ್ರಕಾರ ನಡೆಯುವದು, ಸಾಧನೆ ಮಾಡುವದು ಎಂದರ್ಥ, ಹಾಗೆ ಮಾಡಿದಾಗ ಮುಕ್ತಿಯಾಗುವದು.

ಪ್ರಶ್ನೆ : ಮಹಾಯೋಗವೆಂದರೇನು?

ಉತ್ತರ : ರಾಗದ ವಿಷಯವು ಸಿದ್ಧಿಯಾದಾಗ ಜೀವಭಾವವು ತನ್ನ ಸ್ವರೂಪದಲ್ಲಿಯೇ ಅಡಗುವದು. ಆನಂದದ ಅನುಭವವಾಗುವದು. ಗಾಢನಿದ್ರೆಯಲ್ಲಿ ಮನಸ್ಸು ಅಜ್ಞಾನದಲ್ಲಿ ಅಡಗುವದು. ಆಗ ಆನಂದದ ಅನುಭವವಾಗುವದು. ಆದರೆ ಅಲ್ಲಿ ಅಜ್ಞಾನದ ಆವರಣ ಇರುವದು. ಇವೆರಡೂ ಯೋಗಗಳೇ. ಇವುಗಳಿಗೆ ಮಹಾಯೋಗ ಎನ್ನುವದಿಲ್ಲ. ಮಹಾಯೋಗದಲ್ಲಿ ಅಜ್ಞಾನ ಇರುವದಿಲ್ಲ. ಸುಜ್ಞಾನ ಇರುವದು.

ಪ್ರಶ್ನೆ : ನಮ್ಮ ಮನಸ್ಸು ಸ್ವರಾಜ್ಯ ಹೇಗೆ?

ಉತ್ತರ : ಮನಸ್ಸು ದೇಹಭಾವ ಮತ್ತು ವಿಷಯಾಸಕ್ತಿಯನ್ನು ಹಿಡಿದುಕೊಂಡು ದುಃಖಕ್ಕೀಡಾಗುವದು, ಇದೇ ನರಕ. ಯಾವಾಗ ಮನಸ್ಸು ದೇಹಭಾವ ಮತ್ತು ವಿಷಯಾಸಕ್ತಿಯನ್ನು ತೆಗೆದು ಹಾಕುವದೋ, ಆಗ ಸುಖವನ್ನು ಹೊಂದುವದು. ಹೀಗೆ ಮನಸ್ಸು ತನ್ನ ಸ್ವರ್ಗ ನರಕಗಳನ್ನು ತಾನೇ ಮಾಡಿಕೊಳ್ಳುವದು. Four walls do not make me a prison. My mind to me a kingdom is.

ಪ್ರಶ್ನೆ : ಅನುಷ್ಠಾನವೆಂದರೇನು?

ಉತ್ತರ : ಅನುಷ್ಠಾನವೆಂದರೆ ಬುದ್ಧಿಯು ಸ್ವರೂಪವನ್ನು ಅನುಸರಿಸಿ ನೆಲೆಯಾಗಿ ನಿಲ್ಲುವದು, ಬ್ರಹ್ಮಾಕಾರವೃತ್ತಿ ಸ್ಥಿತಿಯನ್ನು ಪಡೆಯುವದು.

ಪ್ರಶ್ನೆ : ವಾಸನೆಗಳನ್ನು ಹೇಗೆ ಕಳೆದುಕೊಳ್ಳಬೇಕು?

ಉತ್ತರ : ಹಟದಿಂದ ವಾಸನೆಗಳನ್ನು ಹತ್ತಿಕ್ಕಿದರೆ ಅವು ಮತ್ತೆ ಪುಟಿದೇಳುತ್ತವೆ. ಆದ್ದರಿಂದ ಅವುಗಳನ್ನು ವಿವೇಕದಿಂದ ನಾಶಪಡಿಸಬೇಕು.

ಪ್ರಶ್ನೆ : ನಿಮಗೆ ಯಾವದು ದುಃಖ ಕೊಡುವದು?

ಉತ್ತರ : ನೀವು ಬುದ್ಧಿಯೊಳಗೆ ಯಾವದನ್ನು ಹಿಡಿದಿರುವಿರೋ ಅದರ ಬಾಧೆಯು ನಿಮಗೆ ಆಗುವದು. ಕನಸಿನಲ್ಲಿ ಒಂದು ಶರೀರ, ಜಾಗ್ರದಲ್ಲಿ ಇನ್ನೊಂದು ಶರೀರವನ್ನು ಹಿಡಿದಿರುವಿರಿ. ಇವುಗಳಿಂದ ನಿಮಗೆ ಬಾಧೆಯೇ ಆಗುವದು. ನೀವು ನಿದ್ರೆಯಲ್ಲಿ ಇವೆರಡೂ ಶರೀರಗಳನ್ನು ಬಿಟ್ಟಿರುವಿರಿ. ಆಗ ಆರಾಮವೇ ಇರುವದು.

ಪ್ರಶ್ನೆ : ಅನುಭಾವ ಎಂದರೇನು?

ಉತ್ತರ : ತಾನೇ ಆತ್ಮನೆಂದು ಭಾವಿಸುವದು ಅನುಭಾವ, ನಂತರ ತಾನೇ ಆತ್ಮನೆಂಬ ಅನುಭವ ಪಡೆದುಕೊಳ್ಳುವದು.

ಪ್ರಶ್ನೆ : ಅವಸ್ಥೆಗಳು ಯಾರಿಗೆ?

ಉತ್ತರ : ಮಲಿನ ಸತ್ವ ಅಹಂಕಾರಕ್ಕೆ ಮೂರು ಅವಸ್ಥೆಗಳು, ಶುದ್ಧ ಸತ್ವ ಅಹಂಕಾರಕ್ಕೆ



ತುರ್ಯಾವಸ್ಥೆಯು, ಇದು ಕನ್ನಡಿಯಂತೆ ಸ್ವರೂಪವನ್ನು ತಿಳಿದುಕೊಳ್ಳಲಿಕ್ಕೆ ಸಾಧನೆ ಆಗುವದು. ಸುಳ್ಳು ಜೀವನೇ ಅವಸ್ಥೆಗಳನ್ನು ಅನುಭವಿಸುವನು ಮತ್ತು ವಿವರಿಸುವನು, ಆತ್ಮನು ಅವಸ್ಥೆಗಳನ್ನು ಅನುಭವಿಸುವದಿಲ್ಲ.

ಪ್ರಶ್ನೆ : ಸಂಕಲ್ಪಗಳು ಯಾವಾಗ ಪೂರ್ಣವಾಗಿ ಕೈಗೂಡುತ್ತವೆ?

ಉತ್ತರ : ಪೂರ್ಣ ಸ್ವಾರ್ಥರಹಿತ ಪರಹಿತವನ್ನು ಮಾಡಿದಾಗ ಸಂಕಲ್ಪಗಳು ಪೂರ್ಣವಾಗಿ ಕೈಗೂಡತ್ತವೆ.

ಪ್ರಶ್ನೆ : ಕೈವಲ್ಯವು ಯಾವಾಗ ಸಾಧ್ಯವಾಗುವದು?

ಉತ್ತರ : ಸುಖ ದುಃಖ ವಿಚಾರ, ಆತ್ಮಾನಾತ್ಮ ವಿಚಾರದಿಂದ ಕೈವಲ್ಯವು ಸಾಧ್ಯವಾಗುವದು.

ಪ್ರಶ್ನೆ : ಅತಿಮಾನಸ ಧ್ಯಾನ (Transendental Meditation) ದಿಂದ ಆನಂದ ಸೂತ್ರವು ಸಿಗುವದೇ?

ಉತ್ತರ : ಅತಿಮಾನಸ ಧ್ಯಾನದ ಶ್ರಾವ್ಯ ಉಪಾಧಿಯು ಬೇಸರವಾಗುವದು, ಆದ್ದರಿಂದ ಅದು ಆನಂದ ಸೂತ್ರವಲ್ಲ.

ಪ್ರಶ್ನೆ : ವಾನಪ್ರಸ್ಥಾಶ್ರಮ ಯಾವದು?

ಉತ್ತರ : ಆತ್ಮ ಚಿಂತನೆಯಲ್ಲಿರುವದೇ ವಾನಪ್ರಸ್ಥಾಶ್ರಮ, ಆತ್ಮನಲ್ಲಿ ನಿಲ್ಲುವದೇ ಸನ್ಯಾಸ.

ಪ್ರಶ್ನೆ : ಸಿದ್ಧಿಗಳು ಹೇಗೆ ಕೈವಶವಾಗುವವು?

ಉತ್ತರ : ನಮ್ಮ ನಡತೆಯು ಸುಧಾರಿಸಿದಂತೆ ಸಿದ್ಧಿಗಳು ತಮ್ಮಿಂದ ತಾವೇ ಕ್ರಮೇಣ ಕೈವಶವಾಗುವವು.

ಪ್ರಶ್ನೆ : ಮಾನವನಿಗೆ ಯಾವದು ಸುಖ ಕೊಡುವದು?

ಉತ್ತರ : ಮಾನವನಿಗೆ ಅವನ ವಿಚಾರವೇ ಸುಖ ಕೊಡುವದು, ವಿಷಯಗಳಲ್ಲ.

ಪ್ರಶ್ನೆ : ಮೈಲಿಗೆ ಯಾವದು?

ಉತ್ತರ : ಶರೀರ ತಾನೆಂದು ತಿಳಿದುಕೊಳ್ಳುವದೇ ಮೈಲಿಗೆ, ಆನಂದವೇ ತಾನೆಂದು ತಿಳಿದುಕೊಳ್ಳುವದೇ ಮಡಿಯು.

ಪ್ರಶ್ನೆ : ಹೆದರಿಕೆಯನ್ನು ಕಳೆದುಕೊಳ್ಳುವದು ಹೇಗೆ?

ಉತ್ತರ : ಭಯಾನಕ ಹಾವಿನ ರೂಪದಲ್ಲಿ, ಕ್ರೂರ ಪಶುವಿನ ರೂಪದಲ್ಲಿ ವಿಘ್ನಗಳು ಬರಬಹುದು. ಅವೆಲ್ಲ ಕಲ್ಪನಾಮಾತ್ರವೆಂದು ತಿಳಿದು ಸ್ವರೂಪದಲ್ಲಿ ತಲ್ಲೀನವಾದರೆ ಹೆದರಿಕೆ ಇಲ್ಲ.

ಪ್ರಶ್ನೆ : ನೀನು ಯಾರು?

ಉತ್ತರ : ಕನಸು ಜಾಗ್ರ ನಿದ್ರೆ ಇವುಗಳನ್ನು ತಿಳಿಯುವವನು ನೀನು, ಆದ್ದರಿಂದ ಅವು ನಿನಗೆ ಹತ್ತುವದೇ ಇಲ್ಲ. ಆದ್ದರಿಂದ ಅವುಗಳ ಬಾಧೆ ನಿನಗಿಲ್ಲ.

ಪ್ರಶ್ನೆ : ವ್ಯಾವಹಾರಿಕ ಎಚ್ಚರಿಕೆಯಲ್ಲಿ ಸುಖಿಯಾಗಿರಲು ಏನು ಮಾಡಬೇಕು?

ಉತ್ತರ : ನಿದ್ರೆಯಲ್ಲಿ ನೀನು ದೇಹ ಜಗತ್ತನ್ನು ಬಿಟ್ಟಿರುವಿ, ಆರಾಮ ಇರುವಿ. ಅದರಂತೆ ವ್ಯಾವಹಾರಿಕ ಎಚ್ಚರಿಕೆಯಲ್ಲಿ ದೇಹ ಜಗತ್ತನ್ನು ಬಿಡು, ಅಂದರೆ ಆರಾಮ ಇರುವಿ.

ಪ್ರಶ್ನೆ : ಮನಸ್ಸಿನಲ್ಲಿ ಹಿಡಿದುಕೊಂಡದ್ದನ್ನು ಯಾರು ಬಿಡಬೇಕು?

ಉತ್ತರ : ತಾನೇ ತಪ್ಪು ತಿಳುವಳಿಕೆಯಿಂದ ದೇಹ ತಾನೆಂದು ತಿಳಿದುಕೊಂಡಿದ್ದಾನೆ. ವಿಷಯ ಭೋಗವು ಸುಖವೆಂದು ತಿಳಿದುಕೊಂಡಿದ್ದಾನೆ. ಆದ್ದರಿಂದ ಈಗ ಸರಿಯಾದ ತಿಳುವಳಿಕೆಯಿಂದ ದೇಹವು ತಾನಲ್ಲ, ವಿಷಯ ಭೋಗವು ಸುಖವಲ್ಲವೆಂದು ತಿಳಿದುಕೊಂಡು, ತಾನೇ ದೇಹಭಾವ ಮತ್ತು ವಿಷಯಗಳ ಆಶೆಯನ್ನು ಬಿಡಬೇಕು.

ಪ್ರಶ್ನೆ : ಲೌಕಿಕ ವಿದ್ಯೆಯ ಪ್ರಯೋಜನವೇನು?

ಉತ್ತರ : ಲೌಕಿಕ ವಿದ್ಯೆಯು ಕಾಳು ಕೂಳು ಜೋಡು ಗೂಡಿಗೆ ಮಾತ್ರ, ದುಃಖದ ಬಿಡುಗಡೆಗಾಗಿ ಅಧ್ಯಾತ್ಮ ವಿದ್ಯೆಯು.

ಪ್ರಶ್ನೆ : ಸಾಧುಗಳಿಗೆ ಏನು ಬೇಕು?

ಉತ್ತರ : ಸಾಧುಗಳಿಗೆ ಎರಡು ರೊಟ್ಟಿ, ಎರಡು ಬಟ್ಟೆ ಆದರೆ ಸಾಕು.

ಪ್ರಶ್ನೆ : ವಸ್ತುಗಳು ಯಾವಾಗ ಕಾಣಿಸುವದಿಲ್ಲ?

ಉತ್ತರ : ಕಣ್ಣು ಮುಚ್ಚಿದಾಗ ವಸ್ತುಗಳು ಕಾಣಿಸುವದಿಲ್ಲ. ಆದರೆ ಕಿವಿ ಕೇಳಿಸುತ್ತವೆ, ಚರ್ಮೇಂದ್ರಿಯ ಜ್ಞಾನವಿರುತ್ತದೆ. ಆದರೆ ಮನಸ್ಸು ಮುಚ್ಚಿದಾಗ ಇವು ಯಾವೂ ಇಲ್ಲ.

ಪ್ರಶ್ನೆ : ಮನಸ್ಸು ಲಯವಾಗಲು ಪ್ರಾಣಾಯಾಮದ ಅವಶ್ಯಕತೆ ಇದೆಯೇ?

ಉತ್ತರ : ನಿದ್ರೆಯಲ್ಲಿ ಮನಸ್ಸು ತನ್ನಿಂದ ತಾನೇ ಲಯವಾಗುವದು. ಆದ್ದರಿಂದ ಮನಸ್ಸು ಲಯವಾಗಲು ಪ್ರಾಣಾಯಾಮದ ಅವಶ್ಯಕತೆ ಇಲ್ಲ.

ಪ್ರಶ್ನೆ : ಕ್ರಿಯೆ ಯಾವದು ಮತ್ತು ತ್ಯಾಗ ಯಾವದು?

ಉತ್ತರ : ಮನಸ್ಸಿನಿಂದ ಮಾಡಿದ್ದೆಲ್ಲ ಕ್ರಿಯೆಯು, ಮನಸ್ಸು ಮಾಡದೇ ಇದ್ದದ್ದು ಕರ್ಮವಲ್ಲ. ಮನಸ್ಸೇ ಕರ್ತೃವು, ಶರೀರವಲ್ಲ. ಮನಸ್ಸಿನಿಂದ ಬಿಟ್ಟಿದ್ದೆಲ್ಲವೂ ತ್ಯಾಗವು. ಮಾತಿನಿಂದ ಅವ್ವಾ, ಅಕ್ಕಾ ಎನ್ನುವರು. ಆದರೆ ಮನಸ್ಸಿನಲ್ಲಿ ಅವರೊಡನೆ ಭೋಗ ಮಾಡಿಬಿಟ್ಟಿರುವರು.



ಪ್ರಶ್ನೆ : ಉತ್ತರಾಯಣವೆಂದರೇನು?

ಉತ್ತರ : ಮನಸ್ಸು ಸ್ವರೂಪದ ಕಡೆಗೆ ಹೋಗುವದೇ ಉತ್ತರಾಯಣ, ದೇಹ ಮತ್ತು ಜಗತ್ತಿನ ಕಡೆಗೆ ಹೋಗುವದೇ ದಕ್ಷಿಣಾಯಣ.

ಪ್ರಶ್ನೆ : ಪುನರ್ಜನ್ಮವು ಯಾವಾಗ ಬರುವದಿಲ್ಲ?

ಉತ್ತರ : ಇಹಪರ ವಾಸನೆ ಹೋದರೂ ಮುಕ್ತಿಯಾಗುವದಿಲ್ಲ. ಏಕೆಂದರೆ ಸ್ವರೂಪದ ಅಜ್ಞಾನವು ಹೋಗಿರುವದಿಲ್ಲ. ಸ್ವರೂಪದ ಅಜ್ಞಾನ ನಾಶವಾಗುವವರೆಗೆ ಪುನರ್ಜನ್ಮವು ಬರುವದೇ, ಸ್ವರೂಪದ ಅಜ್ಞಾನವು ನಾಶವಾದಾಗಲೇ ಮುಕ್ತಿ.

ಪ್ರಶ್ನೆ : ತ್ರಿಪುಟಿಗೆ ಸಾಕ್ಷಿ ಯಾವದು?

ಉತ್ತರ : ಸ್ವರೂಪವೇ ತ್ರಿಪುಟಿಗೆ ಸಾಕ್ಷಿ.

ಪ್ರಶ್ನೆ : ಪಿಶಾಚಿಗಳು ಯಾವಾಗ ಬಿಡುತ್ತವೆ?

ಉತ್ತರ : ಶಾಸ್ತ್ರ ಶ್ರವಣ ನಡೆದಾಗ ಪಿಶಾಚಿಗಳು ಓಡಿ ಹೋಗುತ್ತವೆ. ದಿನಾಲು ಯೋಗವಾಸಿಷ್ಠವನ್ನು ಓದಿರಿ, ಪಿಶಾಚಿಗಳು ಹೆದರಿ ಓಡಿ ಹೋಗುತ್ತವೆ.

ಪ್ರಶ್ನೆ : ಮೂರ್ತ ವಸ್ತುವಿನ ಮೇಲೆ ಮನಸ್ಸು ನಿಲ್ಲುವದೇ?

ಉತ್ತರ : ಮೂರ್ತ ವಸ್ತುವಿನ ಮೇಲೆ ಮನಸ್ಸು ನಿಲ್ಲುವದಿಲ್ಲ. ಏಕೆಂದರೆ ಅದು ಬೇಸರವಾಗುವದು. ಆದ್ದರಿಂದ ಅದು ಆನಂದವಲ್ಲ, ಅಮೂರ್ತವೇ ಆನಂದವು.

ಪ್ರಶ್ನೆ : ಜೀವನ ಯಾತ್ರೆಯು ಯಾವಾಗ ಮುಗಿಯುವದು?

ಉತ್ತರ : ಜೀವನು ಆನಂದದಿಂದ ಬಂದಿದ್ದಾನೆ, ತಿರುಗಿ ಆನಂದಧಾಮವನ್ನು ಮುಟ್ಟುವವರೆಗೆ ಜನ್ಮಾಂತರವಿರುವದೇ.

ಪ್ರಶ್ನೆ : ಕುರುಡರು ಯಾರು?

ಉತ್ತರ : ಕಾಮ, ಕ್ರೋಧಗಳು ಇದ್ದವರೇ ಕುರುಡರು. ಕಾಮ ಕ್ರೋಧಗಳಿಂದ ಬುದ್ಧಿಯು ಕುರುಡಾಗುವದು. ಕಾಮದ ಮೂಲಕ ಕ್ರೋಧ, ಕ್ರೋಧದಿಂದ ಬುದ್ಧಿಯ ವಿಚಾರ ಶಕ್ತಿಯು ನಾಶವಾಗಿ ಹೋಗುವದು. ಸತ್ಸಂಗ ವಿವೇಕ ಇವೇ ಎರಡು ಕಣ್ಣುಗಳು. ಇವುಗಳು ಇಲ್ಲದವನು ಕಣ್ಣಿದ್ದರೂ ಕುರುಡನು. ಸ್ವರೂಪ ಜ್ಞಾನವಿಲ್ಲದವನು ಕುರುಡನು.

ಪ್ರಶ್ನೆ : ಅಧ್ಯಾತ್ಮವು ಯಾವಾಗ ಸಾಧಿಸುವದು?

ಉತ್ತರ : ವಿವೇಕವು ಮಸಿದ ಉಳಿಯಂತೆ ಇದ್ದರೆ ಮಾತ್ರ ಅಧ್ಯಾತ್ಮವು ಸಾಧಿಸುವದು.

ಪ್ರಶ್ನೆ : ಸಿದ್ಧಿಗಳಿಗಾಗಿ ಯಾವಾಗ ದುಡಿಯುವರು?

ಉತ್ತರ : ಮುಮುಕ್ಷು ಆಗುವದಕ್ಕಿಂತ ಮೊದಲೇ ಸಿದ್ಧಿಗಳಿಗಾಗಿ ದುಡಿಯುವರು, ನಂತರವಲ್ಲ.

ಪ್ರಶ್ನೆ : ಮನಸ್ಸು ಏಕಾಗ್ರ ಯಾವಾಗ ಆಗುವದು?

ಉತ್ತರ : ವಿಷಯಾಸಕ್ತಿಯಿಂದ ಮನಸ್ಸು ಅನೇಕಾಗ್ರವಾಗುತ್ತದೆ. ವಿವೇಕದಿಂದ ವಿಷಯ ಭೋಗವು ದುಃಖವೆಂದು ತಿಳಿದಾಗ ಮತ್ತು ಸುಖವು ತನ್ನ ನಿಜ ಸ್ವರೂಪದಲ್ಲಿದೆ ಎಂಬುದನ್ನು ತಿಳಿದಾಗ ಮಾತ್ರ ಮನಸ್ಸು ಆತ್ಮನಲ್ಲಿ ಏಕಾಗ್ರವಾಗುವದು. ಮನಸ್ಸನ್ನು ಏಕಾಗ್ರ ಮಾಡಲು ಇದೊಂದೇ ಸಾಧನೆಯು.

ಪ್ರಶ್ನೆ : ಕಾಮವು ಯಾವದು?

ಉತ್ತರ : ಶರೀರ ಚರಿತಾರ್ಥಕ್ಕಾಗಿ ಮಾಡುವದು ಕಾಮವಲ್ಲ, ವಿಷಯ ಭೋಗವು ಸುಖವೆಂಬುದೇ ಕಾಮವು.

ಪ್ರಶ್ನೆ : ನಿದ್ರೆಯ ಅವಶ್ಯಕತೆಯು ಯಾರಿಗೆ ಇಲ್ಲ?

ಉತ್ತರ : ಏನೇ ವಿಷಯ ವ್ಯವಹಾರ ಮಾಡಿದರೂ ಅನುಭವಕ್ಕೆ ಬರುವ ಆನಂದವು ತನ್ನ ಸ್ವರೂಪದ್ದೇ ಎಂಬ ತಿಳುವಳಿಕೆ ಇರುವವನಿಗೆ ನಿದ್ರೆಯ ಅವಶ್ಯಕತೆ ಇಲ್ಲ.

ಪ್ರಶ್ನೆ : ಕರ್ಮದ ಫಲವನ್ನು ಯಾವಾಗ ಅನುಭವಿಸಬೇಕಾಗಿಲ್ಲ?

ಉತ್ತರ : ಜಗತ್ತು ಮಿಥ್ಯೆ ಎಂಬ ಅನುಭವವಿದ್ದಾಗ ಕರ್ಮದ ಫಲವನ್ನು ಅನುಭವಿಸಬೇಕಾಗಿಲ್ಲ.

ಪ್ರಶ್ನೆ : ಹಠ, ರಾಜ, ಲಂಬಿಕಾ, ಲಯ, ಕುಂಡಲಿನಿ ಯೋಗಗಳಿಂದ ಶಾಶ್ವತ ಆನಂದ ಪ್ರಾಪ್ತವಾಗುವದೇ?

ಉತ್ತರ : ಹಠ, ರಾಜ, ಲಂಬಿಕಾ, ಲಯ, ಕುಂಡಲಿನಿ ಯೋಗಗಳಿಂದ ಕೆಲವು ಸಿದ್ಧಿಗಳು ಬರುತ್ತವೆ. ಇವುಗಳಿಂದ ತಾತ್ಪೂರ್ತಿಕ ಆನಂದವಾಗುವದು, ಆದರೆ ಶಾಶ್ವತ ಆನಂದಾನುಭವವು ಆಗುವದಿಲ್ಲ.

ಪ್ರಶ್ನೆ : ಆಸನ ಯಾವದು?

ಉತ್ತರ : ಮನಸ್ಸನ್ನು ತನ್ನ ನಿಜ ಸ್ವರೂಪದಲ್ಲಿ ದೃಢವಾಗಿ ನಿಲ್ಲಿಸುವದೇ ಆಸನವು.

ಪ್ರಶ್ನೆ : ಹೇಗೆ ನಡೆದರೆ ಸುಖ ಇರುವದು?

ಉತ್ತರ : ನೀನು ಜಗತ್ತಿನಿಂದ ಉದ್ವಿಗ್ನವಾಗಬಾರದು, ನಿನ್ನಿಂದ ಜಗತ್ತು ಉದ್ವಿಗ್ನವಾಗಬಾರದು, ಹೀಗೆ ನಡೆದರೆ ಸುಖವಿರುವದು.

ಪ್ರಶ್ನೆ : ಸ್ವರೂಪವನ್ನು ಹೊಂದುವದಕ್ಕೆ ಎಷ್ಟು ದಾರಿಗಳು?

ಉತ್ತರ : ಜಡವನ್ನು ಹೊಂದುವದಕ್ಕೆ ಅನೇಕ ದಾರಿಗಳು, ಅಜಡವಾದ ಇರುವನ್ನು ಹೊಂದಲು ದಾರಿಯೇ ಇಲ್ಲ.

ಪ್ರಶ್ನೆ : ನಿದ್ರೆಯಲ್ಲಿ ಧ್ಯಾನ ಮಾಡಲು ಬರುವದೇ?

ಉತ್ತರ : ಧ್ಯಾನ ಮಾಡುವ ಮನಸ್ಸು ನಿದ್ರೆಯಲ್ಲಿ ಅಡಗುವದು. ಆದ್ದರಿಂದ ನಿದ್ರೆಯಲ್ಲಿ ಧ್ಯಾನವು ನಡೆಯುವದಿಲ್ಲ.



ಪ್ರಶ್ನೆ : ಪ್ರಾಣಾಯಾಮದಿಂದ ಶಾಶ್ವತ ಸುಖ ಸಿಗುವದೇ?

ಉತ್ತರ : ಪ್ರಾಣಾಯಾಮದಿಂದ ಒಂದು ರೀತಿಯ ಮೂರ್ಛೆ (Trance) ಬರುವದು, ಅದು ಮೂರ್ಛೆ ಅಥವಾ ಅಜ್ಞಾನ ಸಮಾಧಿಯು, ಜ್ಞಾನ ಸಮಾಧಿಯು ಅಲ್ಲ, ಇದರಿಂದ ಕರ್ತೃತ್ವ ಭೋಕ್ತೃತ್ವ ಬುದ್ಧಿಯು ಹೋಗುವದಿಲ್ಲ. ಆದ್ದರಿಂದ ಶಾಶ್ವತ ಸುಖವು ಸಿಗುವದಿಲ್ಲ. ಪ್ರಾಣಾಯಾಮದಿಂದ ಮನಸ್ಸು ತಾತ್ಪೂರ್ತಿಕವಾಗಿ ನಿಂತರೂ ಮತ್ತು ಗಾಢನಿದ್ರೆಯಲ್ಲಿ ಮನಸ್ಸು ಅಡಗಿದರೂ ವಾಸನಾ ನಾಶವಾಗುವದಿಲ್ಲ. ವಿಷಯ ವಾಸನೆಯು ಅವಿವೇಕದಿಂದ ಬಂದಿದೆ, ವಿವೇಕದಿಂದ ಮಾತ್ರ ನಾಶವಾಗುವದು. ಆಸನ ಪ್ರಾಣಾಯಾಮಗಳು ಶರೀರ ಮತ್ತು ನಾಡಿ ಶುದ್ಧಿಗಾಗಿ ಮಾತ್ರ, ಆದರೆ ಅವುಗಳಿಂದ ಮನಸ್ಸು ಶುದ್ಧವಾಗುವದಿಲ್ಲ. ಮನಸ್ಸಿನಲ್ಲಿಯ ವಿಷಯ ವಾಸನೆಗಳು ವಿವೇಕದಿಂದಲೇ ನಾಶವಾಗುವವು. ಪ್ರಾಣಾಯಾಮದಿಂದ ಚಿತ್ತವೃತ್ತಿಯು ನಿರೋಧವಾಗುವದು, ಆಗ ಆನಂದವು ತೋರುವದು, ಮತ್ತೆ ಬಾಹ್ಯವೃತ್ತಿಗೆ ಬಂದಾಗ ವಿಷಯ ಮೋಹವು ಇದ್ದೇ ಇರುವದು. ಹಟದಿಂದ ವಾಯು ನಿರೋಧ ಮಾಡಿ ಸಾಧಿಸುವ ಉಪರತಿಯೇ ಬೇರೆ, ವಿವೇಕದಿಂದ ತೂರ್ಯ ಸಾಧಿಸುವ ಉಪರತಿಯೇ ಬೇರೆ. ಶರೀರಭಾವವು ಹೋಗುವದೇ ನಿಜವಾದ ಉಪರತಿಯು.

ಪ್ರಶ್ನೆ : ಸುಖ ದುಃಖಗಳು ಯಾವಾಗ ಇರುವವು?

ಉತ್ತರ : ಮನಸ್ಸು ನಿಶ್ಚಲವಾದಾಗ ಸುಖವು ಇರುವದು. ಇಷ್ಟ ಪದಾರ್ಥವು ಸಿಕ್ಕಾಗ, ಅನಿಷ್ಟ ಪದಾರ್ಥವು ಹೋದಾಗ ಮನಸ್ಸು ನಿಶ್ಚಲವಾಗಿ ಸುಖವಿರುವದು. ಇಷ್ಟ ಪದಾರ್ಥವು ಸಿಗದೇ ಇದ್ದಾಗ, ಇದ್ದ ಇಷ್ಟ ಪದಾರ್ಥವು ಹೋದಾಗ, ಅನಿಷ್ಟ ಪದಾರ್ಥವು ಹೋಗದೇ ಇದ್ದಾಗ ಮತ್ತು ಬಂದಾಗ ಮನಸ್ಸು ಚಂಚಲವಾಗಿ ದುಃಖವಾಗುವದು.

ಪ್ರಶ್ನೆ : ಹೇಗೆ ವ್ಯವಹಾರ ಮಾಡಿದರೆ ಸುಖವು ಇರುವದು?

ಉತ್ತರ : ನಿರ್ಮೋಹದಿಂದ ವ್ಯವಹಾರ ಮಾಡಿದರೆ ಸುಖವು, ಮೋಹ ಪಾಶದಲ್ಲಿ ಬಿದ್ದು ವ್ಯವಹಾರ ಮಾಡಿದರೆ ದುಃಖವು.

ಪ್ರಶ್ನೆ : ಯಾರಾದರೂ ಬೈದರೆ ಏನೆಂದು ತಿಳಿದುಕೊಳ್ಳಬೇಕು?

ಉತ್ತರ : ಯಾರಾದರೂ ಬೈದರೆ ಬಂಜೆಯ ಮಕ್ಕಳು ಬೈಯ್ಯುತ್ತಾರೆ ಎನ್ನಬೇಕು. ಏಕೆಂದರೆ ಜಗತ್ತೇ ತನಗೆ ಅತ್ಯಂತ ಅಭಾವವು. ಯಾರಾದರೂ ನಮ್ಮನ್ನು ಬೈದರೆ ನಮ್ಮ ದೇಹಕ್ಕೆ ಬೈಯ್ಯುವರು, ವಿಚಾರಿಸಿ ನೋಡಿದರೆ ದೇಹವೇ ನಾನಲ್ಲ, ನನಗೇನೂ ಬೈಯ್ಯುವದಿಲ್ಲ ಎನ್ನಬೇಕು.

ಪ್ರಶ್ನೆ : ಅಧ್ಯಾತ್ಮ ಅಭ್ಯಾಸವನ್ನು ಯಾವಾಗ ಮಾಡಲು ಬರುವದು?

ಉತ್ತರ : ಅಧ್ಯಾತ್ಮ ಅಭ್ಯಾಸವನ್ನು ಕುಳಿತಾಗ, ನಿಂತಾಗ, ಊಟ ಮಾಡುವಾಗ, ಸ್ತ್ರೀ ಪುರುಷ ಭೋಗ ನಡೆದಾಗ, ನಿದ್ರೆಯನ್ನು ಉಳಿದು ಯಾವಾಗ ಬೇಕಾದಾಗ ಅಭ್ಯಾಸವನ್ನು ಮಾಡಲು ಬರುವದು.

ಪ್ರಶ್ನೆ : ನಿಜವಾದ ಸಾಧನೆ ಯಾವದು?

ಉತ್ತರ : ಭಗವದ್ಗೀತೆಯು ಕಿಚಡಿ ಇದೆ. ಅದರಿಂದ ನಿಶ್ಚಿತವಾದ ಅರ್ಥವು ಹೊರಡುವದಿಲ್ಲ. ಉಪನಿಷತ್ತುಗಳು ಅಸ್ಪಷ್ಟವಿವೆ. ಒಮ್ಮೆ ದ್ವೈತ, ಇನ್ನೊಮ್ಮೆ ಅದ್ವೈತ ವಿವರಿಸುವವು. ವೇದಗಳು ಪಿಕ್ಕೆ ಇರುವವು. ಅವುಗಳಿಂದ ಉಪಯುಕ್ತವಾದದ್ದನ್ನು ಮಾತ್ರ ಗ್ರಹಿಸುವದು, ಆದ್ದರಿಂದ ಸ್ವತಃ ವಿಚಾರ ಮಾಡಿಕೊಳ್ಳಬೇಕು.

ಪ್ರಶ್ನೆ : ಸಾಕ್ಷ್ಯ ಮತ್ತು ಸಾಕ್ಷಿ ಭಾವಗಳು ಯಾವಾಗ ಇರುವವು?

ಉತ್ತರ : ಸಾಕ್ಷ್ಯ ಮತ್ತು ಸಾಕ್ಷಿ ಭಾವಗಳು ತುರ್ಯಾವಸ್ಥೆ ಇರುವವರೆಗೆ ಇರುವವು, ತುರ್ಯಾತೀತದಲ್ಲಿ ಸಾಕ್ಷಿ ಮತ್ತು ಸಾಕ್ಷ್ಯ ಭಾವಗಳಿಲ್ಲ.

ಪ್ರಶ್ನೆ : ನಿದ್ರೆಯ ಆನಂದವು ಶಾಶ್ವತವೇ?

ಉತ್ತರ : ನಿದ್ರೆಯ ಆನಂದವು ತೋರಿ ಹೋಗುವದು. ಆದ್ದರಿಂದ ಅದು ಕ್ಷಣಿಕವೆಂದು ತಿಳಿದು ನಿದ್ರೆಯನ್ನು ಮೀರಿ ತೂರ್ಯದಲ್ಲಿ ಉಳಿಯಬೇಕು.

ಪ್ರಶ್ನೆ : ವ್ಯಾವಹಾರಿಕ ನಿದ್ರೆ ಮತ್ತು ಐಚ್ಛಿಕ ನಿದ್ರೆ, ಇವುಗಳ ನಡುವಿನ ಭೇದವೇನು?

ಉತ್ತರ : ತೂರ್ಯವು ಐಚ್ಛಿಕ ನಿದ್ರೆಯು, ಅಂದರೆ ಇಚ್ಛೆ ಆದಾಗ ಮಾಡುವ ಅರುವಿನ ನಿದ್ರೆಯು, ವ್ಯಾವಹಾರಿಕ ನಿದ್ರೆಯು ಪ್ರಾರಬ್ಧ ಪ್ರಕಾರ ಇರುವದು. ನೀವು ವ್ಯಾವಹಾರಿಕ ನಿದ್ರೆಯನ್ನು ಮಾಡಬೇಕೆಂದು ಮನಸ್ಸು ಮಾಡಿದರೂ ನಿದ್ರೆಯು ಬರಲಿಕ್ಕಿಲ್ಲ. ಒಂದು ಸಾಮಾನ್ಯ ನಿದ್ರೆ (ಪಶು ನಿದ್ರೆ), ಇನ್ನೊಂದು ಜ್ಞಾನ ನಿದ್ರೆ. (ತುರ್ಯ) ಮಾನವನ ನಿದ್ರೆ. ನಿದ್ರೆಯು ದಣಿವಿನಿಂದ ಬರುವದು, ತುರ್ಯವು ತಿಳುವಳಿಕೆಯಿಂದ ಬರುವದು.

ಪ್ರಶ್ನೆ : ದೇವರ ಪೂಜೆಯನ್ನು ಯಾವಾಗ ಮಾಡಲು ಬರುವದು?

ಉತ್ತರ : ದೇವರು ತಾನು ಅಲ್ಲ ಎಂದು ತಿಳಿದಾಗ ಅನ್ಯದೇವರ ಪೂಜೆ ಮಾಡಲು ಬರುವದು. ತಾನೇ ದೇವರೆಂದು ತಿಳಿದರೆ ಅನ್ಯದೇವರ ಪೂಜೆಯನ್ನು ಮಾಡುವದಿಲ್ಲ.

ಪ್ರಶ್ನೆ : ಶರೀರ ಧಾರಣಕ್ಕೆ ಏನು ಕಾರಣ?

ಉತ್ತರ : ಸ್ವರೂಪದ ಅಜ್ಞಾನವೇ ಶರೀರ ಧಾರಣೆಗೆ ಕಾರಣ. ಆದ್ದರಿಂದ ಸ್ವರೂಪದ ಅಜ್ಞಾನವನ್ನು ಕಳೆದುಕೊಳ್ಳಬೇಕು.

ಪ್ರಶ್ನೆ : ಆತ್ಮಸಾಕ್ಷಾತ್ಕಾರ ಎಂದರೇನು?

ಉತ್ತರ : ದೇಹಭಾವ ಇದ್ದವನಿಗೆ ಆನಂದ ಬೇಕಾಗಿದೆ, ಇವನೇ ಜೀವನು. ಆನಂದ ಭಾವವನ್ನು ಹೊಂದುವದೇ ಆತ್ಮಸಾಕ್ಷಾತ್ಕಾರವು.



ಪ್ರಶ್ನೆ : ಸತ್ಸಂಗವೆಂದರೇನು?

ಉತ್ತರ : ಸತ್ಯ ವಸ್ತುವಿನ ಸಂಗ ಅಥವಾ ಸತ್ಯ ನಿಷ್ಠರ ಸಂಗವೇ ಸತ್ಸಂಗ.

ಪ್ರಶ್ನೆ : ಚಿಂತೆಯನ್ನು ಕಳೆದುಕೊಳ್ಳುವದು ಹೇಗೆ?

ಉತ್ತರ : ಜೀವಿಗಳ ವ್ಯವಹಾರವು ಅವರ ಪ್ರಾರಬ್ಧದಂತೆ ನಡೆಯುವದು. ಅದರ ಬಗ್ಗೆ ಚಿಂತೆ ಏತಕೆ? ಮನಸ್ಸಿಗೆ ಹಚ್ಚಿಕೊಂಡರೆ ಅದನ್ನು ತಿದ್ದಲು ಸಾಧ್ಯವಿಲ್ಲ. ಮಾಡುವಂತೆ ಮಾಡುವದು, ಆಗುವಂತೆ ಆಗುವದು, ಅದಕ್ಕೆ ಚಿಂತೆಯೇತಕೆ?

ಪ್ರಶ್ನೆ : ಕಾಯಂ ಜೈಲು ಯಾವದು?

ಉತ್ತರ : ದೇಹಭಾವವೇ ಕಾಯಂ ಜೈಲು.

ಪ್ರಶ್ನೆ : ದುಃಖದ ಮೂಲ ಕಾರಣ ಯಾವದು?

ಉತ್ತರ : ಆಶೆಯೇ ದುಃಖದ ಮೂಲ ಕಾರಣ. ಆಶೆಗೆ ವಿಷಯಗಳು ಸುಖ ಕೊಡುವವು ಎಂಬ ತಪ್ಪು ತಿಳುವಳಿಕೆಯೇ ಕಾರಣ, ಈ ತಪ್ಪು ತಿಳುವಳಿಕೆಗೆ ದೇಹಭಾವವೇ ಕಾರಣ, ದೇಹಭಾವಕ್ಕೆ ಸ್ವರೂಪದ ಅಜ್ಞಾನವೇ ಕಾರಣ, ಆದ್ದರಿಂದ ದುಃಖಕ್ಕೆ ಸ್ವರೂಪದ ಅಜ್ಞಾನವೇ ಕಾರಣ.

ಪ್ರಶ್ನೆ : ಶತ್ರುಗಳು ಯಾರಿಗೆ ಇಲ್ಲ?

ಉತ್ತರ : ಪ್ರಿಯವಾದ ಮಾತುಗಳನ್ನು ಆಡುವವರಿಗೆ ಶತ್ರುಗಳೇ ಇಲ್ಲ. ಅದರಂತೆ ಪ್ರಯತ್ನಶೀಲನಿಗೆ ಯಾವದೂ ಅಸಾಧ್ಯವಿಲ್ಲ.

ಪ್ರಶ್ನೆ : ವ್ಯಭಿಚಾರ ಎಂದರೇನು?

ಉತ್ತರ : ಸ್ವರೂಪವನ್ನು ಬಿಟ್ಟು ಮನಸ್ಸು ಬೇರೆ ಕಡೆಗೆ ಹೋದರೆ ವ್ಯಭಿಚಾರ, ಮನಸ್ಸು ಬ್ರಹ್ಮನ ಕಡೆಗೆ ಹೋದರೆ ಬ್ರಹ್ಮಚರ್ಯ.

ಪ್ರಶ್ನೆ : ವೈರಾಗ್ಯ ಉಪರತಿಯಿಂದ ಮೋಕ್ಷ ಸಾಧ್ಯವಾಗುವದೇ?

ಉತ್ತರ : ವೈರಾಗ್ಯ ಉಪರತಿಯಿಂದ ಮೋಕ್ಷ ಸಾಧ್ಯವಿಲ್ಲ. ಮೋಕ್ಷಕ್ಕೆ ಜ್ಞಾನವು ಬೇಕೇ ಬೇಕು, ಜ್ಞಾನವಿದ್ದರೆ ವೈರಾಗ್ಯ ಉಪರತಿಗಳು ಇದ್ದೇ ಇರುವವು. ತುರ್ಯಪದ ಹೊಂದದ ಹೊರತಾಗಿ ಮುಕ್ತಿ ಸಾಧ್ಯವಿಲ್ಲ. ತುರ್ಯಪದ ಹೊಂದುವದಕ್ಕಾಗಿ ವೈರಾಗ್ಯ ಉಪರತಿ ಬೇಕೇ ಬೇಕು.

ಪ್ರಶ್ನೆ : ದೇಹ ಮತ್ತು ವಿಷಯಗಳು ಕೊರತೆಯುಳ್ಳವು ಹೇಗೆ?

ಉತ್ತರ : ದೇಹವು ವಿಕಾರ ಮತ್ತು ನಾಶವಂತವಿದೆ. ಆದ್ದರಿಂದ ದೇಹಭಾವ ಇರುವಾಗ ಯಾವುದಾದರೂ ಕೊರತೆ ಇರುವದೇ. ದೇಹಭಾವವು ನಾಶವಾದಾಗ ಅಥವಾ ಅಡಗಿದಾಗ ಯಾವ ಕೊರತೆಯೂ ಇರುವದಿಲ್ಲ. ಅದರಂತೆ ವಿಷಯಗಳು ಕ್ಷಯ, ವರ್ಧನ, ನಾಶವಂತ ಇರುವದರಿಂದ ಅವು ಕೊರತೆಯುಳ್ಳವುಗಳು ಆಗಿವೆ.

ಪ್ರಶ್ನೆ : ವಿಷಯಗಳ ಧ್ಯಾನದಿಂದ ಏನಾಗುವದು?

ಉತ್ತರ : ವಿಷಯಗಳ ಧ್ಯಾನದಿಂದ ವಿಷಯಗಳ ಸಂಗವುಂಟಾಗುವದು. ವಿಷಯಗಳ ಸಂಗದಿಂದ ಕಾಮ ಉಂಟಾಗುವದು. ಕಾಮದ ವಸ್ತುವು ಸಿಗದಿದ್ದರೆ ಅಥವಾ ಕಾಮದ ವಸ್ತುವು ಸಿಗಲಿಕ್ಕೆ ವಿಘ್ನವಾದರೆ ಕ್ರೋಧ ಉಂಟಾಗುವದು. ಕ್ರೋಧದಿಂದ ಬುದ್ಧಿಯು ನಾಶವಾಗಿ ಜೀವನು ನಾಶ ಹೊಂದುವನು. ವಿಷಯಗಳ ನೆನಪು ಮಾಡುತ್ತ ಕುಳಿತರೆ ವಿಷಯಗಳು ಸವೆಯುತ್ತ ನಾಶವಾಗುವದರಿಂದ, ಮನಸ್ಸು ವಿಷಮವಾಗಿ ದುಃಖ ಉಂಟಾಗುವದು. ಆನಂದದ ನೆನಪು ಮಾಡಿದರೆ ಕಾಮ, ಕ್ರೋಧ, ಬುದ್ಧಿನಾಶ ಮೊದಲಾದವು ಯಾವವೂ ಆಗುವದಿಲ್ಲ. ಆನಂದದ ನೆನಪು ಮಾಡುತ್ತ ಕುಳಿತರೆ ಆನಂದವು ಸವೆಯುವದಿಲ್ಲ, ನಾಶವಾಗುವದೂ ಇಲ್ಲ. ಆನಂದದ ಧ್ಯಾನದಲ್ಲಿದ್ದಾಗ ಶರೀರದ ನೆನಪೇ ಉಳಿಯುವದಿಲ್ಲ.

ಪ್ರಶ್ನೆ : 'ಗುರು' ಎಂದರೇನು?

ಉತ್ತರ : 'ಗು' ಎಂದರೆ ಅಜ್ಞಾನ, 'ರು' ಎಂದರೆ ನಾಶ ಮಾಡುವದು. ಸ್ವರೂಪದ ಅಜ್ಞಾನವನ್ನು ನಾಶ ಮಾಡುವವನೇ ಗುರು, ಆತ್ಮಜ್ಞಾನಿಯೇ ಗುರು, ತನ್ನ ಅರಿವೇ ತನಗೆ ಗುರು. ಮೊಟ್ಟ ಮೊದಲನೆಯ ಬ್ರಹ್ಮನಿಷ್ಠರಿಗೆ ಗುರು ಯಾರಿದ್ದರು? ಅವನ ಅರಿವೇ ಅವನಿಗೆ ಗುರುವಾಗಿತ್ತು. ಗುರು ಎಂದರೆ ಸಚ್ಚಿದಾನಂದನು. ಆದ್ದರಿಂದ ಸಚ್ಚಿದಾನಂದದ ಸಂಬಂಧ ಇಟ್ಟುಕೊಳ್ಳುವದೇ ಗುರುವಿನ ಸಂಗ. ನೀವು ನಿಮ್ಮ ತಿಳುವಳಿಕೆಯ ಪ್ರಕಾರ ನಡೆಯುವಿರಿ. ಆದ್ದರಿಂದ ನಿಮ್ಮ ತಿಳುವಳಿಕೆಯೇ ನಿಮ್ಮ ಗುರು.

ಪ್ರಶ್ನೆ : ಪ್ರಾಣ ಮತ್ತು ಮನಸ್ಸಿನ ನಡುವಿನ ಭೇದವೇನು?

ಉತ್ತರ : ಪ್ರಾಣವು ಜಡವಿದೆ, ಮನಸ್ಸು ಸೂಕ್ಷ್ಮವಿದೆ. ಪ್ರಾಣದಲ್ಲಿ ವಿಷಯ ವಾಸನೆಗಳಿಲ್ಲ, ಮನಸ್ಸಿನಲ್ಲಿ ವಿಷಯ ವಾಸನೆಗಳು ಇವೆ. ಪ್ರಾಣವು ವಿಷಯ ವಾಸನೆಗಳನ್ನು ಧಾರಣ ಮಾಡುವದಿಲ್ಲ. ಮನಸ್ಸು ವಿಷಯ ವಾಸನೆಗಳನ್ನು ಧಾರಣ ಮಾಡುವದು. ಪ್ರಾಣವು ಜೀವ ಚೈತನ್ಯವನ್ನು ಧಾರಣ ಮಾಡುವದಿಲ್ಲ, ಮನಸ್ಸೇ ಜೀವ ಚೈತನ್ಯವನ್ನು ಧಾರಣ ಮಾಡುವದು. ಮನಸ್ಸು ಜೀವ ಚೈತನ್ಯವನ್ನು ಕೂಡಿಕೊಂಡು ಪ್ರಾಣ ನಿರೋಧ ಮಾಡುವದು. ಪ್ರಾಣವು ಮನಸ್ಸನ್ನು ನಿಗ್ರಹ ಮಾಡಲಾರದು. ವಿವೇಕಯುಕ್ತ ಮನಸ್ಸೇ ರಾಗದ್ವೇಷಗಳನ್ನು ನಾಶಮಾಡುವದು, ಪ್ರಾಣವು ರಾಗದ್ವೇಷಗಳನ್ನು ನಾಶ ಮಾಡಲಾರದು, ಮನಸ್ಸೇ ಪ್ರಾಣ ಮತ್ತು ಇಂದ್ರಿಯಗಳನ್ನು ನಿಯಂತ್ರಣ ಮಾಡುವದು.

ಪ್ರಶ್ನೆ : ಮನಸ್ಸು ಎಲ್ಲಿ ನಿಲ್ಲುವದು?

ಉತ್ತರ : ಮನಸ್ಸಿಗೆ ಆನಂದವು ಬೇಕಾಗಿದೆ. ಆದ್ದರಿಂದ ಮನಸ್ಸು ಆನಂದದಲ್ಲಿ ಮಾತ್ರ ನೆಲೆ ನಿಲ್ಲುವದು, ಅದು ಮತ್ತಾವುದರಲ್ಲಿಯೂ ನೆಲೆ ನಿಲ್ಲುವದಿಲ್ಲ. ಯಾವದೇ ಗುರುತಿನ ಮೇಲೆ ಮನಸ್ಸು ಬಹಳ ಹೊತ್ತು ನಿಲ್ಲುವದಿಲ್ಲ. ಏಕೆಂದರೆ ಅದು ಬೇಸರವಾಗುವದು, ಅದು ಸುಖಮಯವಲ್ಲ. ಮನಸ್ಸು ತನ್ನ ನಿಜ ಸ್ವರೂಪದಲ್ಲಿ ಶಾಶ್ವತವಾಗಿ ನಿಲ್ಲುವದು. ಏಕೆಂದರೆ ಅದೇ ಸುಖವು.



ಪ್ರಶ್ನೆ : ವಿಷಯಗಳಲ್ಲಿ ಸುಖವಿದೆಯೇ?

ಉತ್ತರ : ವಿಷಯಗಳಲ್ಲಿ ಸುಖವಿದ್ದರೆ ಮನಸ್ಸು ಒಂದು ವಿಷಯ ಬಿಟ್ಟು ಇನ್ನೊಂದು ವಿಷಯಕ್ಕೆ ಹೋಗಬಾರದಾಗಿತ್ತು ಅಥವಾ ಮತ್ತೆ ಅದೇ ವಿಷಯಕ್ಕೆ ಹೋಗಬಾರದಾಗಿತ್ತು. ಆದ್ದರಿಂದ ವಿಷಯಗಳಲ್ಲಿ ಸುಖವಿಲ್ಲ.

ಪ್ರಶ್ನೆ : ದೇಹಭಾವವು ಸುಖಮಯವೇ?

ಉತ್ತರ : ದೇಹಭಾವ ಬಂದರೆ ದೇಹ ಹೋದೀತೆಂಬ ಭಯ, ದೇಹಕ್ಕೆ ಸಂಬಂಧಿಸಿದ ವಸ್ತುಗಳು ಹೋಗವವು ಎಂಬ ಚಿಂತೆ. ಆದ್ದರಿಂದ ದೇಹಭಾವವೆಂದರೆ ಸಂಕಟ. ದೇಹಭಾವವು ಪೂರ್ಣ ಹೋದಾಗ ಪೂರ್ಣ ಆನಂದ. ದೇಹಭಾವವು ತಾತ್ಪೂರ್ತಿಕವಾಗಿ ಹೋದಾಗ ತಾತ್ಪೂರ್ತಿಕ ಆನಂದವು. ದೇಹವು ಇರುವುದು ಅಥವಾ ಹೋಗುವದು ಪ್ರಾರಬ್ಧವನ್ನು ಅವಲಂಬಿಸಿದೆ. ಆದ್ದರಿಂದ ದೇಹವು ಸುಖದ ಸಾಧನೆಗಾಗಿ ಹೋಗಲಿ.

ಪ್ರಶ್ನೆ : ನಿಜವಾಗಿ ಸೃಷ್ಟಿಯು ಇರುವದೇ?

ಉತ್ತರ : ಮಂದಮತಿಯು ಸೃಷ್ಟಿಯು ಇದೆ ಎಂದು ತಿಳಿದುಕೊಂಡಿರುವನು. ಆದ್ದರಿಂದ ಅವನಿಗೆ ಕ್ರಮ ಸೃಷ್ಟಿಯನ್ನು ಹೇಳಿರುವರು. ಯುಗಪತ್ ಸೃಷ್ಟಿಯು ಸುಳ್ಳು. ಯಾವ ಸೃಷ್ಟಿಯೂ ಇಲ್ಲ, ಇರುವವ ನೀನೊಬ್ಬನೇ.

ಪ್ರಶ್ನೆ : ಸುಖದ ಆಸೆಯು ಯಾವಾಗ ಹೋಗುವದು?

ಉತ್ತರ : ನಿದ್ರೆ ಹತ್ತುವವರೆಗೆ ನಿದ್ರೆ ಮಾಡುವ ಆಸೆ ಇರುವದು. ನಿದ್ರೆ ಹತ್ತಿದಾಗ ನಿದ್ರೆ ಮಾಡುವ ಆಸೆ ಹೋಗುವದು. ಅದರಂತೆ ಸುಖವನ್ನು ಹೊಂದಿದಾಗ ಸುಖವನ್ನು ಹೊಂದುವ ಆಸೆಯು ಹೋಗುವದು.

ಪ್ರಶ್ನೆ : ಆನಂದವನ್ನು ಹೊಂದಲು ಏನು ಮಾಡಬೇಕು?

ಉತ್ತರ : ಆನಂದವನ್ನು ಹೊಂದಲು ಆನಂದ ಭಾವದಲ್ಲಿದ್ದರೆ ಮುಗಿಯಿತು. ಆಗ ಶರೀರದ ಭಾವವಿಲ್ಲ. ಆಹಾರವು ಬೇಕಾಗಿಲ್ಲ, ನಿದ್ರೆಯ ಅವಶ್ಯಕತೆ ಇಲ್ಲ.

ಪ್ರಶ್ನೆ : ವಿಷಯಾಸಕ್ತಿಯು ಯಾವಾಗ ಇರುವದು?

ಉತ್ತರ : ಶರೀರವು ನಾನೆಂಬ ಭಾವವಿದ್ದಾಗ ವಿಷಯಾಸಕ್ತಿಯು ಇರುವದು.

ಪ್ರಶ್ನೆ : ವಿಷಯೇಂದ್ರಿಯ ಸಂಪರ್ಕ ಭೋಗವೆಂದರೇನು?

ಉತ್ತರ : ವಿಷಯೇಂದ್ರಿಯ ಸಂಪರ್ಕ ಭೋಗವೆಂದರೆ ನರದ ತುರಿಕೆಯು.

ಪ್ರಶ್ನೆ : ಎಲ್ಲರ ಮತವು ಯಾವದು?

ಉತ್ತರ : ಎಲ್ಲರಿಗೂ ಸುಖವೇ ಬೇಕು, ಸುಖವೇ ಎಲ್ಲರ ಮತವು. ಎಲ್ಲರ ಸುಖ ಹೊಂದುವ ಕ್ರಮವು ಒಂದೇ ಆಗಿದೆ.

ಪ್ರಶ್ನೆ : ಜೀವನವನ್ನು ಹೇಗೆ ನಡೆಸಬೇಕು?

ಉತ್ತರ : ನಮ್ಮದು ಸರಳವಾದ ಜೀವನವಿರಬೇಕು, ಉದಾತ್ತವಾದ ವಿಚಾರವಿರಬೇಕು.

ಪ್ರಶ್ನೆ : ಜ್ಞಾನ ಸಮಾಧಿಯಲ್ಲಿ ಕಳಸ ಬೀಳುವದೇ?

ಉತ್ತರ : ಜ್ಞಾನ ಸಮಾಧಿಯಲ್ಲಿ ಕಳಸ ಬೀಳುವದಿಲ್ಲ, ಏಕೆಂದರೆ ಅಲ್ಲಿ ಅರಿವು ಇರುವದು. ನಿದ್ರೆಯಲ್ಲಿ ಕಳಸ ಬೀಳುವದು, ಏಕೆಂದರೆ ಅಲ್ಲಿ ಮರೆವು ಇರುವದು.

ಪ್ರಶ್ನೆ : ಅಧ್ಯಾತ್ಮ ಸಾಧನೆಗೆ ಪುಸ್ತಕದ ಅವಶ್ಯಕತೆ ಇದೆಯೇ?

ಉತ್ತರ : ಸ್ವತಃ ವಿಚಾರ ಮಾಡಿಕೊಳ್ಳುವವನಿಗೆ ಯಾವ ಪುಸ್ತಕದ ಅವಶ್ಯಕತೆಯೂ ಇಲ್ಲ.

ಪ್ರಶ್ನೆ : ನಮ್ಮನ್ನು ಯಾವದು ಬಂಧಿಸುವದು?

ಉತ್ತರ : ವಿಷಯ ವ್ಯಾಮೋಹವೇ ನಮ್ಮನ್ನು ಬಂಧಿಸುವದು, ವಿಷಯಗಳು ಬಂಧಿಸುವದಿಲ್ಲ.

ಪ್ರಶ್ನೆ : ಭವರೋಗಕ್ಕೆ ಮೂಲ ಕಾರಣ ಯಾವದು?

ಉತ್ತರ : ಭವರೋಗಕ್ಕೆ ಮೂಲ ಕಾರಣ ಸ್ವರೂಪದ ಅಜ್ಞಾನವು, ಅದನ್ನು ತೆಗೆದರೆ ಮುಂದೆ ಜನ್ಮ ಬರುವದಿಲ್ಲ.

ಪ್ರಶ್ನೆ : ಸಂಸಾರದ ಸಂಕಟವು ಹೇಗೆ ಹೋಗುವದು?

ಉತ್ತರ : ನಿದ್ರೆ ಮಾಡುವದರಿಂದ ಸಂಸಾರದ ಸಂಕಟ ಹೋಗುವದಿಲ್ಲ. ಒಮ್ಮೆ ಜ್ಞಾನ ಸಮಾಧಿಯನ್ನು ಹೊಂದಿದರೆ ಸಂಸಾರದ ಸಂಕಟವು ಶಾಶ್ವತವಾಗಿ ಹೋಗುವದು.

ಪ್ರಶ್ನೆ : ನಿದ್ರೆಯ ಆನಂದವು ಯಾರದು?

ಉತ್ತರ : ನಿದ್ರೆಯಲ್ಲಿ ದೇಹಭಾವವಿಲ್ಲ, ರಾಗದ್ವೇಷಗಳಿಲ್ಲ. ಆರಾಮಭಾವ (ಸ್ವರೂಪ) ಇರುವದು. ಆದ್ದರಿಂದ ನಿದ್ರೆಯ ಆನಂದವು ಸ್ವರೂಪದ ಆನಂದವೇ.

ಪ್ರಶ್ನೆ : ಏಕಾದಶಿ ಎಂದರೇನು?

ಉತ್ತರ : ಒಂದೇ ಒಂದಾದ ಸಚ್ಚಿದಾನಂದ ಸ್ವರೂಪದಲ್ಲಿ ಮನಸ್ಸನ್ನು ನಿಲ್ಲಿಸುವದೇ ಏಕಾದಶಿ.



ಪ್ರಶ್ನೆ : ಉಪನಯನವೆಂದರೇನು?

ಉತ್ತರ : 'ಉಪ' ಎಂದರೆ ಸಮೀಪ, 'ನಯನ' ಎಂದರೆ ಒಯ್ಯುವಿಕೆ, 'ಉಪನಯನ' ಎಂದರೆ ಮನಸ್ಸನ್ನು ಸ್ವರೂಪದ ಸಮೀಪಕ್ಕೆ ಒಯ್ಯುವದು.

ಪ್ರಶ್ನೆ : ಸ್ವರೂಪದಲ್ಲಿ ಧ್ವನಿ ಇದೆಯೇ?

ಉತ್ತರ : ಸ್ವರೂಪದಲ್ಲಿ ಧ್ವನಿ ಇಲ್ಲ, ಯಾವ ಶಬ್ದವೂ ಇಲ್ಲ.

ಪ್ರಶ್ನೆ : ಆನಂದದ ಪ್ರತಿಬಿಂಬವು ಎಲ್ಲಿ ಆಗುವದು?

ಉತ್ತರ : ಜಡದ ಪ್ರತಿಬಿಂಬ ಕನ್ನಡಿಯಲ್ಲಿ ಮೂಡುವದು, ಆನಂದದ ಪ್ರತಿಬಿಂಬವು ಶುದ್ಧವಾದ ಮನಸ್ಸಿನಲ್ಲಿ ಮೂಡುವದು.

ಪ್ರಶ್ನೆ : ಸಂಘ ಸಂಸ್ಥೆಗಳ ಪರಿಣಾಮವೇನು?

ಉತ್ತರ : ಅಧ್ಯಾತ್ಮವೆಂದರೆ ಸಂಘ ಸಂಸ್ಥೆಗಳನ್ನು ಕಟ್ಟುವದಲ್ಲ, ಸಂಘ ಸಂಸ್ಥೆಗಳನ್ನು ಮಾಡಿದರೆ ಪ್ರೆಸಿಡೆಂಟ್, ಟ್ರೆಝರರ, ಸೆಕ್ರೆಟರಿ ಇವರನ್ನು ಆರಿಸಬೇಕು, ಅದಕ್ಕಾಗಿ ಹಣ ಸಂಗ್ರಹ ಮಾಡಬೇಕು. ಮುಂದೆ ಅಧಿಕಾರ ಹಣಕ್ಕಾಗಿ ಜಗಳವು ಪ್ರಾರಂಭವಾಗುವದು. ಆದ್ದರಿಂದ ಸಂಘ ಸಂಸ್ಥೆಗಳಿಂದ ಸುಖವಾಗುವದಿಲ್ಲ. ಅಧ್ಯಾತ್ಮವನ್ನು ವೈಯಕ್ತಿಕವಾಗಿ ಸಾಧಿಸುವದು.

ಪ್ರಶ್ನೆ : ಸತ್ಯದಲ್ಲಿ ನೆಲೆಯಾಗಿ ನಿಂತಾಗ ಏನಾದರೂ ಬಾಧೆಯಾಗುವದೇ?

ಉತ್ತರ : ಸತ್ಯದಲ್ಲಿ ನೆಲೆಯಾಗಿ ನಿಂತಾಗ ಶರೀರವನ್ನು ಕಡಿದರೂ, ಸುಟ್ಟರೂ, ವಿಷದ ಬಾಧೆಯಾದರೂ ಯಾವ ಬಾಧೆಯೂ ಆಗುವದಿಲ್ಲ.

ಪ್ರಶ್ನೆ : ಚಿಂತೆ ಯಾವಾಗ ಇರುವದು?

ಉತ್ತರ : ನಿದ್ರೆಯಿಂದ ಎಚ್ಚರಿಕೆಗೆ ಬಂದರೆ ಚಿಂತೆ ಇರುವದು, ತುರ್ಯ ಹೊಂದಿ ಎಚ್ಚರಿಕೆಗೆ ಬಂದರೆ ಚಿಂತೆ ಇರುವದಿಲ್ಲ.

ಪ್ರಶ್ನೆ : ಜನರು ಏಕೆ ಬಡಿದಾಡುವರು?

ಉತ್ತರ : ಎಲ್ಲರೂ ವಿಷಯಗಳಿಗಾಗಿಯೇ ಬಡಿದಾಡುವರು, ಜ್ಞಾನವನ್ನು ಕಸಿದುಕೊಳ್ಳುವದಕ್ಕಾಗಿ ಯಾರೂ ಬಡಿದಾಡುವದಿಲ್ಲ.

ಪ್ರಶ್ನೆ : ಬಾಯಿ ಮಡಿ ಮಾಡಲಿಕ್ಕೆ ಬರುವದೇ?

ಉತ್ತರ : ಬಾಯಿ ಮಡಿ ಮಾಡಲಿಕ್ಕೆ ಬರುವದಿಲ್ಲ. ಬಾಯಿಯನ್ನು ಎಷ್ಟು ತೊಳೆದರೂ ಅದು ಮಡಿಯಾಗುವದಿಲ್ಲ. ಮನಸ್ಸನ್ನು ಮಡಿ ಮಾಡಿಕೋ. ಮನಸ್ಸಿನ ಹೊಲಸು ರಾಗದ್ವೇಷ ಮತ್ತು ದೇಹಭಾವವು.

****

## ಜೀವನ್ಮುಕ್ತನ ಸ್ಥಿತಿ

ಪ್ರಶ್ನೆ : ಜೀವನ್ಮುಕ್ತನ ಲಕ್ಷ್ಯಣಗಳೇನು?

ಉತ್ತರ : ಸಾಧಕನ ಸಾಧನಗಳಾದ ವಿವೇಕ ವೈರಾಗ್ಯಗಳು ಜೀವನ್ಮುಕ್ತನ ಲಕ್ಷ್ಯಣಗಳಾಗಿವೆ. ಜೀವನ್ಮುಕ್ತನು ಮಾನವ ಕುಲದ ನೈತಿಕ ಮತ್ತು ಪಾರಮಾರ್ಥಿಕ ಹಸಿವನ್ನು ಹಿಂಗಿಸುವನು. ಅವನು ತಾಳ್ಮೆ, ದಯೆ, ನಿಜತತ್ವನಿಷ್ಠೆ ಮುಂತಾದ ಸದ್ಗುಣಗಳನ್ನು ಹೊಂದಿರುತ್ತಾನೆ. ಅಲ್ಲದೆ ಅವನು ಮೂರೂ ಅವಸ್ಥೆಗಳನ್ನು ಮೀರಿ ತುರ್ಯಾವಸ್ಥೆಯನ್ನು ಹೊಂದಿರುತ್ತಾನೆ. ಅವನ ಆಚರಣೆಯು ಎಳ್ಳಷ್ಟೂ ನಿಷಿದ್ಧವಿರುವದಿಲ್ಲ. ಅವನ ವ್ಯವಹಾರವು ಅನಾಸಕ್ತಿಯಿಂದ ನಡೆಯುವದು.

ಪ್ರಶ್ನೆ : ಜ್ಞಾನಿಗಳು ಹೇಗೆ ಇರುತ್ತಾರೆ?

ಉತ್ತರ : ಜ್ಞಾನಿಗಳು ಹೊರಗೆ ನಮ್ಮಂತೆ, ಮನಸ್ಸಿನೊಳಗೆ ತಮ್ಮಂತೆ ಇರುತ್ತಾರೆ, ಶರೀರದಂತೆ ಇರುವದಿಲ್ಲ.

ಪ್ರಶ್ನೆ : ಆತ್ಮಜ್ಞಾನಿಯ ಗುರುತು ಏನು?

ಉತ್ತರ : ಪೂರ್ಣ ಚಿಂತೆ ಕಡಿದದ್ದೇ ಆತ್ಮಜ್ಞಾನದ ಗುರುತು. ಮೂರೂ ಅವಸ್ಥೆಗಳ ಬಾಧೆ ಇರದಿರುವದೇ ಆತ್ಮಜ್ಞಾನದ ಗುರುತು.

ಪ್ರಶ್ನೆ : ವೈಯ್ಯಾಕರಣಿಯ ಬೋಧವು ಏಕೆ ನಡೆದಿದೆ?

ಉತ್ತರ : ಕೆಲವರಿಗೆ ಹಿಂದಿನ ದುಡಿಕೆಯ ಸಂಸ್ಕಾರಗಳು ಸುಪ್ತವಾಗಿರುವವು. ಅಧ್ಯಾತ್ಮ ಚಿಂತನೆಯ ವಾತಾವರಣದಲ್ಲಿ ಅವರ ಸಂಸ್ಕಾರಗಳು ಪ್ರಚೋದನೆಯಾಗಿ ಅವರು ಅಭ್ಯಾಸದಲ್ಲಿ ತೊಡಗುವರು, ಅಂಥವರು ಇರುವದರಿಂದಲೇ ವೈಯ್ಯಾಕರಣಿ ಬೋಧವು ನಡೆದಿದೆ. ಯಾವಾಗ ಪ್ರವಚನಗಳು ಪ್ರಭಾವ ಬೀರುವವೋ ತಿಳಿಯದು. ಆದ್ದರಿಂದ ಶ್ರವಣವನ್ನು ಮುಂದುವರಿಸುತ್ತ ಹೋಗಬೇಕು. ವೈಯ್ಯಾಕರಣಿಯಿಂದ ದರ್ಶನ ಸ್ಪರ್ಶನ ಸಂಭಾಷಣದ ಲಾಭವಾಗುವದು. ಮೌನಿಯಿಂದ ಬರೇ ದರ್ಶನ ಲಾಭವಾಗುವದು.

ಪ್ರಶ್ನೆ : ಜ್ಞಾನಿಗಳಿಗೆ ಜಯಂತಿ, ಪುಣ್ಯತಿಥಿಗಳು ಇವೆಯೇ?

ಉತ್ತರ : ಜ್ಞಾನಿಗಳಿಗೆ ಶರೀರವೇ ಇಲ್ಲ, ಅಂದಾಗ ಜನನ ಮರಣಗಳು ಎಲ್ಲಿಯವು? ಜನನ ಮರಣಗಳೇ ಇಲ್ಲವೆಂದ ಮೇಲೆ ಹುಟ್ಟುಹಬ್ಬ ಪುಣ್ಯತಿಥಿಗಳೆಲ್ಲಿಯವು?



ಪ್ರಶ್ನೆ : ಜೀವನ್ಮುಕ್ತನು ಹೇಗೆ ಉಣ್ಣುವನು?

ಉತ್ತರ : ಜೀವನ್ಮುಕ್ತನು ಹಸಿವೆಗಾಗಿ ಉಣ್ಣುವನು, ಸುಖಬುದ್ಧಿಯಿಂದ ಉಣ್ಣುವದಿಲ್ಲ. ಅವನು ಸುಖಬುದ್ಧಿಯಿಂದ ವಿಷಯ ವಸ್ತುಗಳನ್ನು ಭೋಗಿಸುವದಿಲ್ಲ.

ಪ್ರಶ್ನೆ : ಜೀವನ್ಮುಕ್ತನು ಹೇಗೆ ಜೀವಿಸುವನು?

ಉತ್ತರ : ಜೀವನ್ಮುಕ್ತನು ಜಾಗ್ರದ ಸುಖ ದುಃಖ ಪ್ರಸಂಗಗಳಲ್ಲಿ ನಿದ್ರೆಯಲ್ಲಿಯವನಂತೆ ನಿರ್ವಿಕಾರನಿರುವನು. ಅವನು ಹೊರಗೆ ಎಷ್ಟು ಕಾಳಜಿ ಮಾಡುತ್ತಿರುವನು, ಆದರೆ ಮನಸ್ಸಿನಲ್ಲಿ ಮಾತ್ರ ಪೂರ್ಣ ಉದಾಸೀನನಾಗಿರುವನು. ಜೀವನ್ಮುಕ್ತನದು ಬರೇ ಕಾಳಜಿಯು, ಸಾಮಾನ್ಯರದು ಬರೇ ಚಿಂತೆ ಮತ್ತು ವ್ಯಸನವು. ಕಾಳಜಿ ಮಾಡಬೇಕು, ಚಿಂತೆಯು ಇರಬಾರದು.

ಪ್ರಶ್ನೆ : ಅಧ್ಯಾತ್ಮವನ್ನು ಯಾರು ಹೇಳಬೇಕು?

ಉತ್ತರ : ಆತ್ಮಜ್ಞಾನಿಗಳು ಅಧ್ಯಾತ್ಮವನ್ನು ಹೇಳಬೇಕು, ಉಳಿದವರು ಕೇಳಬೇಕು.

ಪ್ರಶ್ನೆ : ಋಷಿ ಯಾರು?

ಉತ್ತರ : 'ಋಷ' ಎಂದರೆ ಸ್ವರೂಪಜ್ಞಾನ, 'ಋಷಿ' ಎಂದರೆ ಸ್ವರೂಪ ಜ್ಞಾನಿ.

ಪ್ರಶ್ನೆ : ಜ್ಞಾನಿಗೆ ಪೀಡೆ ಕೊಟ್ಟರೆ ಅದು ಯಾರಿಗೆ ಹೋಗುವದು?

ಉತ್ತರ : ಜ್ಞಾನಿಗೆ ಪೀಡೆಯನ್ನು ಸ್ವೀಕರಿಸಲು ಕರಣಾದಿಗಳಿಲ್ಲ, ಆದ್ದರಿಂದ ಜ್ಞಾನಿಗಳಿಗೆ ಪೀಡೆ ಕೊಟ್ಟವರಿಗೆ ಪೀಡೆ ಬರುವದು. ಜ್ಞಾನಿಯ ಶರೀರಕ್ಕೆ ಬಾಧೆ ಕೊಟ್ಟರೆ ಆ ಬಾಧೆಯು ಬಾಧೆ ಕೊಟ್ಟವರಿಗೇ ಆಗುವದು.

ಪ್ರಶ್ನೆ : ಜ್ಞಾನಿಗೂ ಅಜ್ಞಾನಿಗೂ ಭೇದವೇನು?

ಉತ್ತರ : ರಾಗದ ವಿಷಯವು ಸಿಕ್ಕಾಗ ಮನಸ್ಸು ನಿಶ್ಚಲವಾಗಿ ಅನುಭವಕ್ಕೆ ಬಂದ ಆನಂದವು ತನ್ನ ಸ್ವರೂಪದ್ದೇ ಎಂದು ಜ್ಞಾನಿಯು ತಿಳಿದುಕೊಳ್ಳುವನು, ಅಜ್ಞಾನಿಯು ಆನಂದವು ವಿಷಯದ್ದೇ ಎಂದು ತಿಳಿಯುವನು. ಜ್ಞಾನಿಯು ದೇಹ ತಾನಲ್ಲ, ಆತ್ಮನೇ ತಾನೆಂದು ತಿಳಿದಿರುವನು, ಆದರೆ ಅಜ್ಞಾನಿಯು ದೇಹವೇ ತಾನೆಂದು ತಿಳಿದಿರುವನು. ಆತ್ಮನ ಬಗ್ಗೆ ಅವನಿಗೆ ತಿಳುವಳಿಕೆ ಇರುವದಿಲ್ಲ.

ಪ್ರಶ್ನೆ : ಜ್ಞಾನಿಯು ಇನ್ನೊಬ್ಬರ ಮನಸ್ಸಿನ ಇಂಗಿತವವನ್ನು ತಿಳಿಯಬಲ್ಲನೇ?

ಉತ್ತರ : ಜ್ಞಾನಿಯು ಎಲ್ಲರ ಮನದ ಇಂಗಿತವನ್ನು ತಿಳಿದುಕೊಳ್ಳುತ್ತಾನೆ, ಆದರೆ ತಾನು ತಿಳಿದದ್ದನ್ನು ತೋರಗೊಡುವದಿಲ್ಲ.

ಪ್ರಶ್ನೆ : ಮಹಾತ್ಮರು ಹೇಗೆ ದೇಹ ಬಿಡುವರು?

ಉತ್ತರ : ಕೆಲವು ಮಹಾತ್ಮರು ಮರಣದ ಕಾಲಕ್ಕೆ ಸ್ವರೂಪದ ಕಡೆಗೆ ಲಕ್ಷ್ಯ ಹೊರಳಿಸಿ ದೇಹ ಬಿಡುವರು. ಕೆಲವರು ರೋಗಾದಿಗಳು ಬಂದಾಗ ಸ್ವರೂಪದ ಕಡೆಗೆ ಶಾಶ್ವತವಾಗಿ ಲಕ್ಷ್ಯ ಹೊರಳಿಸಿ ದೇಹ ಬಿಡುವರು.

ಪ್ರಶ್ನೆ : ಮಹಾತ್ಮರು ಯಾವ ಸ್ಥಿತಿಯಲ್ಲಿ ಇರುವರು?

ಉತ್ತರ : ಮಹಾತ್ಮರು ಅಂತರಾತ್ಮ ಸ್ಥಿತಿಯಲ್ಲಿ ಇರುವರು. ಮನಸ್ಸಿನೊಳಗೆ ಸಚ್ಚಿದಾನಂದವೇ ತಾನು ಎಂಬ ತಿಳುವಳಿಕೆ ಇರುವದು, ಹೊರಗೆ ದೇಹಭಾವದಿಂದ ಜೀವಿಗಳನ್ನುದ್ದೇಶಿಸಿ ಬೋಧ ಮಾಡುತ್ತಿರುವರು.

ಪ್ರಶ್ನೆ : ಜ್ಞಾನಿಗಳು ಎಲ್ಲಿ ಹುಟ್ಟುವರು?

ಉತ್ತರ : ಜ್ಞಾನಿಗಳು ಇಂಥಲ್ಲೇ ಹುಟ್ಟುವರೆಂಬ ನಿಯಮವಿಲ್ಲ. ಹುಟ್ಟುವದಕ್ಕೂ ತತ್ವ ಸಂಸ್ಕಾರಕ್ಕೂ ಏನೂ ಸಂಬಂಧವಿಲ್ಲ. ಯೋಗಭ್ರಷ್ಟರು ಒಳ್ಳೆಯ ಕುಲದಲ್ಲಿ ಅಥವಾ ಹೀನ ಕುಲದಲ್ಲಿ ಅವರ ಕರ್ಮಾನುಸಾರವಾಗಿ ಹುಟ್ಟಬಹುದು. ಉತ್ತಮ ಬ್ರಹ್ಮನಿಷ್ಠರು ವ್ಯಭಿಚಾರಿಗಳಿಗೆ ಹುಟ್ಟಬಹುದು ಅಥವಾ ಬ್ರಹ್ಮನಿಷ್ಠರಿಗೆ ವ್ಯಭಿಚಾರಿಗಳು ಹುಟ್ಟಬಹುದು. ಯೋಗಭ್ರಷ್ಟನು ಎಲ್ಲಿಯೇ ಹುಟ್ಟಿದರೂ ತನ್ನ ಹಿಂದಿನ ಅಧ್ಯಾತ್ಮ ಸಂಸ್ಕಾರದಿಂದ ಕೂಡಿದವನಾಗಿರುತ್ತಾನೆ, ಅವನು ಅಸ್ವತಂತ್ರವಾಗಿ ಅಧ್ಯಾತ್ಮ ವಿಚಾರಕ್ಕೆ ಎಳೆಯಲ್ಪಡುತ್ತಾನೆ.

ಪ್ರಶ್ನೆ : ಜ್ಞಾನಿಗೆ ಸೃಷ್ಟಿಯ ರಚನೆಯ ತಿಳುವಳಿಕೆ ಇರುವದೇ?

ಉತ್ತರ : ಜ್ಞಾನಿಗೆ ಸೃಷ್ಟಿಯ ರಚನೆಯ ಎಲ್ಲ ತಿಳುವಳಿಕೆ ಇರುತ್ತದೆ. ಇದೆಲ್ಲವೂ ಸ್ವರೂಪ ಜ್ಞಾನದಿಂದಲೇ ಸಂಭವಿಸುತ್ತದೆ. ಹಠಯೋಗಿಗಳಿಗೆ, ವೈದ್ಯರಿಗೆ ಸ್ವಲ್ಪ ಮಟ್ಟಿಗೆ ಗುರುತಿರುವದು. ಆಯುರ್ವೇದದವರಿಗೆ ನಾಡಿಗಳ ಜ್ಞಾನವಿರುವದು. ಧನ್ವಂತರಿಗೆ ಮಾತ್ರ ಎಲ್ಲ ನಾಡಿಗಳ ಜ್ಞಾನವಿರುವದು. ಋಷಿಗಳಾದರೆ ಎಲ್ಲವೂ ತಿಳಿಯುವದು.

ಪ್ರಶ್ನೆ : ಜ್ಞಾನಿಯ ವ್ಯವಹಾರವು ಹೇಗೆ ಇರುವದು?

ಉತ್ತರ : ಅವನು ನುಡಿದದ್ದೇ ಮಂತ್ರ, ಅವನು ನಿಂತದ್ದೇ ವಾರಣಾಸಿ, ಅವನು ನಡೆದದ್ದೇ ದೇವಯಾತ್ರೆ. ಅವನ ನಿಷಿದ್ಧ ವ್ಯವಹಾರವು ಯಾವ ಜನ್ಮದಲ್ಲಿ ಹೋಗಿರುವದೋ ಏನೊ?, ಅವನ ಅಂಜಿಕೆಯು ಯಾವ ಜನ್ಮದಲ್ಲಿ ಹೋಗಿರುವದೋ ಏನೊ?

ಪ್ರಶ್ನೆ : ಜ್ಞಾನಿಯು ಜ್ಞಾನಾನಂತರ ಭೋಗ ನಡೆಸಬಹುದೇ?

ಉತ್ತರ : ಜ್ಞಾನಿಯು ಜ್ಞಾನಾನಂತರ ಭೋಗ ನಡೆಸಬಹುದು ಅಥವಾ ನಡೆಸಲಿಕ್ಕಿಲ್ಲ. ಅದರಿಂದ ಅವನಿಗೆ ಯಾವ ಬಾಧೆಯೂ ಇಲ್ಲ. ಆದರೆ ಅವರು ಆ ವ್ಯವಹಾರದಿಂದ ಸುಖಿ ಆಗಬೇಕೆಂದು ನಡೆಸುವದಿಲ್ಲ, ವ್ಯವಹಾರಕ್ಕಾಗಿ ವ್ಯವಹಾರ. ಜನರಿಗೆ ಅದರಲ್ಲಿ ಸತ್ಯತ್ವ ಬುದ್ಧಿ ಸುಖಬುದ್ಧಿ ಇರುವದು, ಅವರ ಸಲುವಾಗಿ ವ್ಯವಹಾರ.

ಪ್ರಶ್ನೆ : ಜ್ಞಾನಿಗಳ ಅರಿಷಡ್ವರ್ಗವು ಹೇಗೆ ಇರುವದು?

ಉತ್ತರ : ಮುಮುಕ್ಷುಗಳಿಗೆ ಅನುಗ್ರಹಾರ್ಥವಾಗಿ ಅರಿಷಡ್ವರ್ಗಗಳು ನಟನೆ ಮಾತ್ರ ಇರುವವು. ಮುಮುಕ್ಷುಗಳಿಗೆ ಅಭಿರುಚಿ ಉಂಟಾಗಬೇಕಾಗಿ ಶಿವಧ್ಯಾನಾದಿಗಳನ್ನು ಮಾಡಬೇಕೆಂಬ ಕಾಮ, ಅಸದ್ ವಿಷಯದೊಳು ಕ್ರೋಧ, ಅಪಾತ್ರರಿಗೆ ಕೊಡಬಾರದೆಂದು ಬ್ರಹ್ಮವಿದ್ಯೆಯನ್ನು ಹೇಳುವದರಲ್ಲಿ ಲೋಭ, ಪರರಿಗೆ ಉಪಕಾರ ಮಾಡಬೇಕೆಂದು ದುಃಖಿಗಳಲ್ಲಿ ದಯೆ ಎಂಬ ಮೋಹ, ಅಸದ್ ವಿಷಯಗಳನ್ನು ಪರಿಗ್ರಹಿಸದೆ ಶಿಷ್ಟನಾಗಿರುವೆನೆಂಬ ಮದ, ಇಂದ್ರಿಯಗಳನ್ನು ಗೆಲ್ಲುವೆನೆಂಬ ಮಾತ್ಸರ್ಯ, ಎಂಬವು ನಟನೆ ಮಾತ್ರ ಇರುವವು.



ಪ್ರಶ್ನೆ : ಜ್ಞಾನಿಗೆ ಜಗತ್ತು ತೋರುವದೇ?

ಉತ್ತರ : ಸ್ವರೂಪದ ಅಜ್ಞಾನ ಹೋದರೂ ಬುದ್ಧಿಯು ಆತ್ಮ ವಿಮುಖವಿರುವದರಿಂದ ಜಗತ್ತು ತೋರುವದು, ಆದರೆ ಅದು ಬಾಧಿತಾನುವೃತ್ತಿಯಿಂದ ತೋರುವದು.

ಪ್ರಶ್ನೆ : ಜ್ಞಾನಿಗಳಿಗೆ ಎಂಥ ಶಕ್ತಿ ಇರುತ್ತದೆ?

ಉತ್ತರ : ಜ್ಞಾನಿಗಳಿಗೆ ಕರ್ತುಂ, ಅಕರ್ತುಂ, ಅನ್ಯಥಾ ಕರ್ತುಂ ಶಕ್ತಿ ಇರುವದು. ಉದಾ : ಕಟ್ಟದೇ ಇದ್ದ ಆಕಳು ಹಾಲು ಕರೆಯುವದು, ಒಣಗಿದ ಗಿಡವು ಚಿಗಿಯುವದು.

ಪ್ರಶ್ನೆ : ಜೀವನ್ಮುಕ್ತರು ಮತ್ತೆ ಹುಟ್ಟುವರೇ?

ಉತ್ತರ : ಜೀವನ್ಮುಕ್ತುರು ಮತ್ತೆ ಹುಟ್ಟುವದಿಲ್ಲ ಮತ್ತು ಪಿಶಾಚಿಯಾಗುವದಿಲ್ಲ.

ಪ್ರಶ್ನೆ : ಜ್ಞಾನಿಗಳು ಜನರೊಡನೆ ಹೇಗೆ ವ್ಯವಹರಿಸುವರು?

ಉತ್ತರ : ಯಾರಾದರೂ ಅವರಿಗೆ ಒಂದು ನಮಸ್ಕಾರ ಮಾಡಿದರೆ, ಅವರು ಮರಳಿ ಹತ್ತು ನಮಸ್ಕಾರ ಮಾಡುವರು. ಒಂದು ಸಣ್ಣ ಕೂಸು ಬಂದರೆ ದೂರ ಸರಿಯುವರು. ಆದರೆ ಸಾಮಾನ್ಯರು ದನ ಬಂದರೂ ದನಕ್ಕೆ ಹಾಯುವರು. ಪಾಪ, ಹಿಂಗs ಅಂದರೆ ಪರರ ದುಃಖವು ನಾಶವಾಗುವದು, ಮೈ ಮುಟ್ಟಿದರೆ ರೋಗ ಗುಣವಾಗುವದು.

ಪ್ರಶ್ನೆ : ಜಾಣನೆಂದರೆ ಯಾರು?

ಉತ್ತರ : ತುರ್ಯವನ್ನು ಸಾಧಿಸಿದವನೇ ಜಾಣನು. ಅವನು ಲೌಕಿಕ ಪಾರಮಾರ್ಥ ಎರಡನ್ನೂ ಬಿಡದೆ ನಡೆಸುವನು. ಇದು ಸಾಧಕನಿಗೆ ಸಾಧ್ಯವಿಲ್ಲ. ಸಾಧಕನು ವ್ಯವಹಾರವನ್ನು ಕಡೆಗಣಿಸಿ ಅಧ್ಯಾತ್ಮ ಸಾಧನೆಯಲ್ಲಿ ತೊಡಗಬೇಕಾಗುವದು.

ಪ್ರಶ್ನೆ : ಗಾಢ ತುರ್ಯಾವಸ್ಥೆಯಲ್ಲಿ ಇದ್ದವನನ್ನು ಎಬ್ಬಿಸಲು ಬರುವದೇ?

ಉತ್ತರ : ನಿದ್ರೆಯು ಗಾಢವಾದರೆ ಎಬ್ಬಿಸಬಹುದು, ಆದರೆ ತುರ್ಯವು ಗಾಢವಾದರೆ ಎಬ್ಬಿಸುವದು ಸಾಧ್ಯವಿಲ್ಲ. ಆದರೆ ತುರ್ಯವು ತಿಳಿ ಇರುವಾಗ ಅಂದರೆ ತುರ್ಯವನ್ನು ಏರುವಾಗ ಅಥವಾ ಅದರಿಂದ ಇಳಿಯುವಾಗ ಎಬ್ಬಿಸಬಹುದು. ತುರ್ಯದಿಂದ ವ್ಯಾವಹಾರಿಕ ಜಾಗ್ರಕ್ಕೆ ಬಂದವನಿಗೆ ಜಗತ್ತಿನ

ಸತ್ಯತ್ವ ಬುದ್ಧಿ, ಸುಖಬುದ್ಧಿ ಹೋಗಿರುವದು. ತುರ್ಯವು ತಿಳಿ ಇರುವಾಗ ಹಿಂದಿನ ಜನ್ಮದ ಹಾಳು ಸಂಸ್ಕಾರವನ್ನು ಅಥವಾ ಒಳ್ಳೆಯ ಸಂಸ್ಕಾರವನ್ನು ಸಣ್ಣ ಹುಡುಗರು ನಿದ್ರೆಯಲ್ಲಿ ಬಡಬಡಿಸುವಂತೆ ಬಡಬಡಿಸಬಹುದು. ಅದೇನೂ ಅವರಿಗೆ ಗುರುತೇ ಇರುವದಿಲ್ಲ. ಆಗ ಅವನ ರೂಢಿಗತ ಕಾರ್ಯಗಳು ನಡೆಯುವವು. ಆದರೆ ತೂರ್ಯವು ಗಾಢವಾದಾಗ ಯಾವ ಕಾರ್ಯಗಳೂ ನಡೆಯುವದಿಲ್ಲ.

ಪ್ರಶ್ನೆ : ಉಪಾಸನೆ, ಕರ್ಮ, ಪ್ರಾಣಾಯಾಮಗಳಿಂದ ಬಂದಂಥ ಸಿದ್ಧಿಗಳು ಖರ್ಚಾಗುವವೇ?

ಉತ್ತರ : ಉಪಾಸನೆ, ಕರ್ಮ, ಪ್ರಾಣಾಯಾಮಗಳಿಂದ ಬಂದಂಥ ಸಿದ್ಧಿಗಳು ಖರ್ಚಾಗುವವು. ಅವು ವ್ಯಯವಾದ ಮೇಲೆ ಮತ್ತೆ ಪ್ರಯತ್ನದಿಂದ ಪಡೆಯಬೇಕಾಗುತ್ತದೆ. ಆದರೆ ಸ್ವರೂಪಾವ ಸ್ಥಿತಿಯನ್ನು ಪಡೆದವನ ಸಿದ್ಧಿಗಳು ಅವ್ಯಯ, ಅಕ್ಷಯ.

ಪ್ರಶ್ನೆ : ಜ್ಞಾನಿಯ ಸಂಚಿತ ಕರ್ಮಗಳು ಯಾರಿಗೆ ಹೋಗುವವು?

ಉತ್ತರ : ಜ್ಞಾನಿಯ ಸಂಚಿತ ಕರ್ಮಗಳು ವಂದಿಸಿದವರಿಗೆ ಪುಣ್ಯದ ಫಲ ಮತ್ತು ನಿಂದಿಸಿದವರಿಗೆ ಪಾಪದ ಫಲ ಹೋಗುವವು.

ಪ್ರಶ್ನೆ : ಜ್ಞಾನಿಗೆ ವ್ಯಾವಹಾರಿಕ ಜಾಗ್ರದಲ್ಲಿ ದುಃಖವಾಗುವದಿಲ್ಲವೇ?

ಉತ್ತರ : ವ್ಯಾವಹಾರಿಕ ಜಾಗ್ರದಲ್ಲಿ ಜ್ಞಾನಿಗೂ ಹಸಿವು, ನೀರಡಿಕೆ, ರೋಗವಿದ್ದರೂ ಅವನು ತನ್ನ ಸ್ವರೂಪದ ಸ್ಮೃತಿ ಜ್ಞಾನದಿಂದ ಬಾಧೆ ಹೊಂದುವದಿಲ್ಲ.

ಪ್ರಶ್ನೆ : ಜ್ಞಾನಿಗಳು ನಿದ್ರೆ ಮಾಡುವದಿಲ್ಲವೇ?

ಉತ್ತರ : ಜ್ಞಾನಿಗಳು ಪ್ರಾರಬ್ಧಾನುಸಾರವಾಗಿ ನಿದ್ರೆಯನ್ನು ಮಾಡಬಹುದು ಅಥವಾ ಮಾಡಲಿಕ್ಕಿಲ್ಲ. ಕೆಲವರು ನಿದ್ರೆ ಮೀರಿ ತುರ್ಯ ಹೊಂದಿ, ನಿದ್ರೆಗೆ ಬಂದು ವ್ಯಾವಹಾರಿಕ ಎಚ್ಚರಿಕೆಗೆ ಬರುವರು.

ಪ್ರಶ್ನೆ : ಜ್ಞಾನಿಗಳ ಜ್ಞಾನದಲ್ಲಿ ಭೇದವಿದೆಯೇ?

ಉತ್ತರ : ಪ್ರಾರಬ್ಧ ವೈಚಿತ್ರ್ಯದ ಪ್ರಕಾರ ಅವರ ಬಾಹ್ಯ ಕ್ರಿಯೆಗಳು ಭಿನ್ನವಿದ್ದರೂ ಅವರ ಜ್ಞಾನದಲ್ಲಿ ಭೇದವಿಲ್ಲ. ಜ್ಞಾನಿಗಳ ಪ್ರಾರಬ್ಧ ಹೇಗೆ ಇರುವದು ಹೇಳಲಿಕ್ಕೆ ಬರುವದಿಲ್ಲ.

ಪ್ರಶ್ನೆ : ನಿಜವಾದ ಗುರುಗಳು ಯಾರು?

ಉತ್ತರ : ನಿಜವಾದ ಗುರುಗಳು ಶಿಷ್ಯನ ಮನಸ್ಸಿನ ತಾಪವನ್ನು ಅಪಹರಣ ಮಾಡುವರು, ಆದರೆ ಶಿಷ್ಯರ ವಿತ್ತವನ್ನು ಅಪಹರಣ ಮಾಡುವವರು ಗುರುಗಳೇ ಅಲ್ಲ.



ಪ್ರಶ್ನೆ : ಜ್ಞಾನಿಯನ್ನು ತಯಾರು ಮಾಡಲು ಬರುವದೇ?

ಉತ್ತರ : ಸ್ವಯಂ ಸ್ಫೂರ್ತಿಯಿಂದ ಜ್ಞಾನಿಯು ತಯಾರು ಆಗಬೇಕು. ಇನ್ನೊಬ್ಬರು ಜ್ಞಾನಿಯನ್ನು ತಯಾರು ಮಾಡಲು ಸಾಧ್ಯವಿಲ್ಲ. ಸೂರ್ಯನನ್ನು ಮಾಡುವಿರೋ, ಸೂರ್ಯನ ಪ್ರಕಾಶದಷ್ಟು ಪ್ರಕಾಶವನ್ನು ಮಾಡುವಿರೋ, ಮೂಡಿದ್ದೇ ಸೂರ್ಯ.

–ಃಃ ಮುಕ್ತಾಯ ಃಃ–

# ಪರಿವಿಡಿ


| | |
|---|---|
| ಕರ್ಮಫಲ ಮತ್ತು ಪುನರ್ಜನ್ಮ | 1–7 |
| ನೀತಿ | 8–21 |
| ವೈರಾಗ್ಯ | 22–28 |
| ಜ್ಞಾನ | 29–38 |
| ಸಾಧನೆ | 39–83 |
| ಜೀವನ್ಮುಕ್ತನ ಸ್ಥಿತಿ | 84–89 |